




# ಪ್ರಥಮ ಭಾಷೆ ಕನ್ನಡ




# 10 ನೆಯ ತರಗತಿ



# ಪಾಠ ಟಿಪ್ಪಣಿ



**ಬಿ. ರವೀಶ್ ಕುಮಾರ್**
**ಕನ್ನಡ ಭಾಷಾ ಶಿಕ್ಷಕರು**
**ಸರ್ಕಾರಿ ಪ್ರೌಢಶಾಲೆ,**
**ಕೇರ್ಗಳ್ಳಿ – 570026**
**ಮೈಸೂರು ತಾಲ್ಲೂಕು ಮತ್ತು ಜಿಲ್ಲೆ**
**ಸಂಚಾರಿ ವಾಣಿ ಸಂಖ್ಯೆ : 94489 58498**

**10 ನೆಯ ತರಗತಿ – ಪ್ರಥಮ ಭಾಷೆ – ಕನ್ನಡ**

# ಉದ್ದೇಶಗಳು

1. ಆಲಿಸುವ ಗ್ರಹಿಸುವ ನಿರರ್ಗಳ ಹಾಗೂ ಸ್ಪಷ್ಟವಾಗಿ ಸ್ವರಭಾರದೊಂದಿಗೆ ಓದುವ ಸಾಮರ್ಥ್ಯವನ್ನು ಅಭಿವೃದ್ಧಿಗೊಳಿಸುವುದು.
2. ಸೃಜನಶೀಲ ಅಭಿವ್ಯಕ್ತಿ (ಮೌಖಿಕ – ಲಿಖಿತ) ಸಾಮರ್ಥ್ಯವನ್ನು ಬೆಳೆಸುವುದು.
3. ಭಾಷೆಯನ್ನು ದೋಷರಹಿತ ಮತ್ತು ಪರಿಣಾಮಕಾರಿಯಾಗಿ ಬಳಸುವ ಪ್ರೌಢಿಮೆಯನ್ನು ಬೆಳೆಸುವುದು.
4. ಕ್ರಿಯಾತ್ಮಕ ಸಾಂದರ್ಭಿಕ ಭಾಷಾಂಶ, ಅಲಂಕಾರ ಮತ್ತು ಛಂದೋ ಪ್ರಕಾರಗಳನ್ನು ಹಂತಹಂತವಾಗಿ ಸರಳ ರೀತಿಯಲ್ಲಿ ಪರಿಚಯಿಸುವುದು.
5. ಭಾಷೆಯ ಸ್ಪಷ್ಟತೆ ಹಾಗೂ ತಾತ್ತ್ವಿಕವಾಗಿ ಗ್ರಹಿಸುವ ಹಿನ್ನೆಲೆಯಲ್ಲಿ ಭಾಷಾಂಶ, ಛಂದಸ್ಸು, ಅಲಂಕಾರಗಳನ್ನು ಆಯಾ ಪಾಠಬೋಧನಾ ಸಂದರ್ಭದಲ್ಲಿ ಕ್ರಿಯಾತ್ಮಕವಾಗಿ ಕಲಿಸುವುದು.
6. ಪದಭಂಡಾರವನ್ನು ಹೆಚ್ಚಿಸಿಕೊಂಡು, ಸ್ಪಷ್ಟ ಉಚ್ಚಾರಣೆಯೊಂದಿಗೆ ವಾಕ್ಯಬಂಧಗಳನ್ನು ಅರ್ಥ ಮಾಡಿಕೊಳ್ಳುವುದು.
7. ಜ್ಞಾನಾರ್ಜನೆ, ಸಾಹಿತ್ಯಾಭಿರುಚಿ, ಚಿಂತನೆ ಮತ್ತು ಆನಂದಕ್ಕಾಗಿ ಸ್ವತಂತ್ರವಾಗಿ ಓದಲು ಸಮರ್ಥರಾಗುವಂತೆ ಮಾಡುವುದು.
8. ಸೌಂದರ್ಯ/ಪ್ರಜ್ಞೆ, ಕಲ್ಪನೆ ಮತ್ತು ಸೃಜನಾತ್ಮಕ ಭಾವನೆಗಳನ್ನು ಜೀವಂತವಾಗಿರಿಸುವುದು.
9. ನಾಡು, ನುಡಿ, ಸಾಹಿತ್ಯ ಮತ್ತು ಸಂಸ್ಕೃತಿಯ ಬಗ್ಗೆ ಆತ್ಮೀಯ ಅಭಿಮಾನವನ್ನು ವೃದ್ಧಿಗೊಳಿಸುವುದು.
10. ಕೃತಿ–ಕರ್ತೃವಿನ ವಿಶಿಷ್ಟ ಪರಿಚಯವಾಗುವ ರೀತಿಯಲ್ಲಿ ಸಾಹಿತ್ಯದ ಮುಖ್ಯ ಪ್ರಕಾರಗಳನ್ನು ಪರಿಚಯಿಸುವುದು.
11. ರಾಷ್ಟ್ರೀಯ ಪ್ರಜ್ಞೆ, ಪ್ರಜಾಪ್ರಭುತ್ವ ಹಾಗೂ ಜೀವನ ಮೌಲ್ಯಗಳನ್ನು ಮುಖ್ಯವಾಗಿ ಗಮನಿಸುವುದು.
12. ಲಿಂಗಸಮಾನತೆ, ಜಾತ್ಯತೀತತೆ, ವಿಶ್ವಶಾಂತಿ, ಸಹಬಾಳ್ವೆ, ಸ್ವಾವಲಂಬನೆ, ಆತ್ಮಗೌರವ ಮೊದಲಾದ ಮೌಲ್ಯಗಳನ್ನು ಮೈಗೂಡಿಸಿಕೊಳ್ಳಲು ಪ್ರೇರೇಪಿಸುವುದು.
13. ಪರಿಸರ ಸಂರಕ್ಷಣೆ, ರಾಷ್ಟ್ರೀಯ ಸಾಂಸ್ಕೃತಿಕ ಪರಂಪರೆ ಮತ್ತು ವೈಜ್ಞಾನಿಕ ಮನೋಭಾವವನ್ನು ಸಾಹಿತ್ಯದ ಮೂಲಕ ಪರಿಚಯಿಸುವುದು.
14. ಸಮಕಾಲೀನ ಸಮಸ್ಯೆಗಳನ್ನು ಕುರಿತು ಚಿಂತಿಸಿ ಕಾರಣ ಮತ್ತು ಪರಿಹಾರವನ್ನು ಹುಡುಕುವ ಸಾಮರ್ಥ್ಯವನ್ನು ಬೆಳೆಸುವುದು.
15. ಮಹಿಳಾ ಮತ್ತು ಮಕ್ಕಳ ಹಕ್ಕುಗಳನ್ನು ಅರಿಯುವ ಮತ್ತು ಸೌಲಭ್ಯಗಳನ್ನು ಪಡೆಯುವ ಸಾಮರ್ಥ್ಯವನ್ನು ಬೆಳೆಸುವುದು.
16. ಗ್ರಾಮೀಣ ಜೀವನ, ಪ್ರಾದೇಶಿಕತೆ ಹಾಗೂ ಕಲೆಗಳ ಬಗ್ಗೆ ಅರಿವು ಮೂಡಿಸುವುದು.
17. ಪಠ್ಯಪುಸ್ತಕದಲ್ಲಿ ಬರುವ ಸಾಮಾಜಿಕ ಆರ್ಥಿಕ, ನೈತಿಕ ಮತ್ತು ಸಾಂಸ್ಕೃತಿಕ ಮೌಲ್ಯಗಳನ್ನು ಪರಿಚಯಿಸುವುದು.

**ಕೃಪೆ :– ಪಠ್ಯವಸ್ತು ರಚನಾ ಸಮಿತಿ, ಡಿ. ಎಸ್. ಇ. ಆರ್. ಟಿ., ಬೆಂಗಳೂರು.**

**ಪ್ರಥಮ ಭಾಷೆ ಕನ್ನಡ** **ಘಟಕ – 1** **10 ನೆಯ ತರಗತಿ**

**ಗದ್ಯಪಾಠ – 1. ಶಬರಿ (ಗೀತನಾಟಕ)** **ಲೇಖಕರು :– ಪು. ತಿ. ನರಸಿಂಹಾಚಾರ್ಯ**

**ಕಲಿಕೆಗೆ ಬೇಕಾದ ಅವಧಿಗಳು :** **ಪ್ರಾರಂಭದ ದಿನಾಂಕ :**

**ಮುಕ್ತಾಯದ ದಿನಾಂಕ :**

**ಕಲಿಕಾಂಶಗಳು :**

1. ಲೇಖಕರಾದ ಶ್ರೀ ಪು. ತಿ. ನರಸಿಂಹಾಚಾರ್ಯ ಅವರ ಪರಿಚಯ ಮಾಡುವರು ಹಾಗೂ ಪಾಠದ ಆಶಯ ತಿಳಿಯುವರು.
2. ನಾಟಕ – ಗೀತನಾಟಕಗಳ ಲಕ್ಷಣದ ಬಗ್ಗೆ ತಿಳಿಯುವರು.
3. ಕನ್ನಡದ ಪ್ರಸಿದ್ಧ ಗೀತನಾಟಕಗಳು ಹಾಗೂ ಗೀತನಾಟಕಕಾರರನ್ನು ಪರಿಚಯಿಸುವರು.
4. ಆದಿ ಮಹಾಕಾವ್ಯ 'ರಾಮಾಯಣ'ದ ಕಥೆಯನ್ನು ಸಂಕ್ಷಿಪ್ತವಾಗಿ ಹೇಳುವರು.
5. ಗದ್ಯಪಾಠದಲ್ಲಿ ಬಂದಿರುವ ಹೊಸಪದಗಳನ್ನು ಅರ್ಥೈಸಿಕೊಳ್ಳುವರು.
6. ರಾಮನು ಮತಂಗಾಶ್ರಮಕ್ಕೆ ಬರಲು ಕಾರಣವಾದ ಅಂಶಗಳ ಬಗ್ಗೆ ಚರ್ಚಿಸುವರು.

7. ಶಬರಿಯು ರಾಮನಿಗಾಗಿ ಹಂಬಲಿಸುತ್ತ ಹಾಡುವ ಹಾಡನ್ನು ಅರ್ಥೈಸುವರು.
8. ರಾಮ ದರ್ಶನದಿಂದ ಸಂತಸಗೊಂಡ ಶಬರಿಯ ಉನ್ಮಾದ ಸ್ಥಿತಿಯನ್ನು ಕುರಿತು ವಿವರಿಸುವರು.
9. ಶಬರಿಯು ರಾಮಲಕ್ಷ್ಮಣರಿಗೆ ನೀಡಿದ ಆತಿಥ್ಯವನ್ನು ಕುರಿತು ಮೇಳದವರು ಹಾಡಿದ ಹಾಡನ್ನು ಅರ್ಥೈಸುವರು.
10. ಶಬರಿಯು ರಾಮನಿಂದ ಮುಕ್ತಿಯನ್ನು ಪಡೆದ ಬಗ್ಗೆ ತಿಳಿಯುವರು.
11. 'ತಾಳಿದವನು ಬಾಳಿಯಾನು' ಎಂಬ ಮಾತಿನ ಮಹತ್ತ್ವವನ್ನು ಕುರಿತು ಚರ್ಚಿಸುವರು.
12. ಕನ್ನಡ ವರ್ಣಮಾಲೆ – ಗುಣಿತಾಕ್ಷರಗಳು – ಸಂಯುಕ್ತಾಕ್ಷರಗಳನ್ನು ಪರಿಚಯಿಸುವರು.
13. ಕನ್ನಡ ಅಂಕೆಗಳ ಬಗ್ಗೆ ಅರಿಯುವರು.
14. ಪ್ರಬಂಧ ರಚನಾ ವಿಧಾನವನ್ನು ತಿಳಿಯುವರು.
15. ಅಭ್ಯಾಸ ಪುಸ್ತಕದ ಪ್ರಶ್ನೆಗಳಿಗೆ ಉತ್ತರಿಸುವರು.

| ಹಂತಗಳು | ಕಲಿಕೆಯನ್ನು ಅನುಕೂಲಿಸುವ ಚಟುವಟಿಕೆಗಳು | ಬಳಸುವ ಕಲಿಕಾ ಸಾಮಗ್ರಿಗಳು | ಮೌಲ್ಯಮಾಪನದ ಪ್ರಶ್ನೆಗಳು |
|---|---|---|---|
| ಪ್ರೇರಣಾ ಚಟುವಟಿಕೆ | * ನಾಟಕ – ಗೀತನಾಟಕಗಳ ಲಕ್ಷಣ ತಿಳಿಸುವುದು. ಇವುಗಳಿಗೆ ಇರುವ ಭಿನ್ನತೆಯನ್ನು ಗುರುತಿಸುವಂತೆ ತಿಳಿಸುವುದು.<br>* ಕನ್ನಡದ ಪ್ರಸಿದ್ಧ ಗೀತ ನಾಟಕಗಳು ಹಾಗೂ ಗೀತನಾಟಕಕಾರರ ಬಗೆಗೆ ತಿಳಿಸುವುದು.<br>* ರಾಮಾಯಣದ ಕಥೆಯನ್ನು ಸಂಕ್ಷಿಪ್ತವಾಗಿ ಹೇಳುವುದು. | * ಕನ್ನಡ ವಿಷಯ ವಿಶ್ವಕೋಶ.<br>* ವಿಷಯ ಸಂಪದೀಕರಣ ಸಾಹಿತ್ಯ<br>* ಕನ್ನಡ ಗೀತನಾಟಕಗಳು | 1. ಗೀತನಾಟಕದ ಲಕ್ಷಣ ತಿಳಿಸಿ.<br>2. ಕನ್ನಡದ ಪ್ರಸಿದ್ಧ ಗೀತನಾಟಕಗಳನ್ನು ಹೆಸರಿಸಿ.<br>3. ಕನ್ನಡದ ಪ್ರಸಿದ್ಧ ಗೀತನಾಟಕಕಾರರನ್ನು ಹೆಸರಿಸಿ.<br>4. ರಾಮಾಯಣ ಮಹಾ ಕಾವ್ಯವನ್ನು ರಚಿಸಿದ ಮಹರ್ಷಿ ಯಾರು? |
| ಕಲಿಕಾ ಚಟುವಟಿಕೆ | * ಪ್ರಶ್ನೋತ್ತರ / ಸಂದರ್ಶನ ವಿಧಾನದಿಂದ ಲೇಖಕರಾದ ಶ್ರೀ ಪು. ತಿ. ನರಸಿಂಹಾಚಾರ್ಯ ಅವರ ಪರಿಚಯ.<br>* ಉಪಾಧ್ಯಾಯರ ಓದು.<br>* ಉಪಾಧ್ಯಾಯರ ಓದನ್ನು ಅನುಸರಿಸಿ ವಿದ್ಯಾರ್ಥಿಗಳ ಗಟ್ಟಿ ಓದು, ಮೌನ ಓದು.<br>* ನಿಘಂಟನ್ನು ಬಳಸಿಕೊಂಡು ಹೊಸಪದಗಳಿಗೆ ಸಮಾನಾರ್ಥಕ ಪದಗಳನ್ನು ಹುಡುಕಿಸುವ ಚಟುವಟಿಕೆ.<br>* ವಿವರಣೆ – ಚರ್ಚೆ – ಪ್ರಶ್ನೋತ್ತರ ವಿಧಾನದಿಂದ ಪಾಠದ ಬೆಳವಣಿಗೆ<br>* <u>ಉಪಘಟಕಗಳು :–</u><br>1. ಶಬರಿಯು ರಾಮನಿಗಾಗಿ ಹಂಬಲಿಸುವುದು, ರಾಮಲಕ್ಷ್ಮಣರು ಸೀತೆಯನ್ನು ನೆನೆದು ಶೋಕತಪ್ತರಾಗಿ ಪರಸ್ಪರ ಸಾಂತ್ವನ ಮಾಡಿಕೊಳ್ಳುವುದು, ರಾಮಲಕ್ಷ್ಮಣರಿಂದ ಮತಂಗಾಶ್ರಮ ಪ್ರವೇಶ.<br>2. ರಾಮನಿಗಾಗಿ ಹಂಬಲಿಸಿ ಶಬರಿಯು ಹಾಡುವುದು, ರಾಮನು ಶಬರಿಯು ತನಗಾಗಿ ಹಂಬಲಿಸುವುದನ್ನು ಕಂಡು ಆಶ್ಚರ್ಯಗೊಳ್ಳುವುದು, ಶಬರಿಯು ರಾಮನ ಅತಿಥಿ ಸತ್ಕಾರಕ್ಕಾಗಿ ಸಿದ್ಧತೆ ಮಾಡುತ್ತ ರಾಮನ ವ್ಯಕ್ತಿತ್ವದ ವರ್ಣನೆ ಮಾಡುವುದು, ರಾಮನು ಶಬರಿಯ ಆಶ್ರಮವನ್ನು ಪ್ರವೇಶಿಸುವುದು.<br>3. ಮೇಳದವರು ಶಬರಿಯು ರಾಮನನ್ನು ಸತ್ಕರಿಸಿದ ರೀತಿಯನ್ನು ಕುರಿತು ಹಾಡುವುದು, ಶಬರಿಯು ರಾಮನ ಉಪಚಾರ ಮಾಡಿ, ಅಂತಸ್ಸುಖ ಅನುಭವಿಸಿ ಉನ್ಮಾದದಿಂದ ನರ್ತಿಸಿ ಹಾಡುವುದು. ರಾಮನು ಶಬರಿಯ ಸತ್ಕಾರಕ್ಕಾಗಿ ಕೃತಜ್ಞತೆ | * 'ಶಬರಿ' ಗೀತನಾಟಕ ಮೂಲ ಕೃತಿ<br>* ಪಠ್ಯಪುಸ್ತಕ<br>* ಕನ್ನಡ–ಕನ್ನಡ ನಿಘಂಟು<br>* ತಪಶೀಲು ಪಟ್ಟಿ<br>* ಶಬರಿ ಆಶ್ರಮದ ಚಿತ್ರ.<br>* ರಾಮಲಕ್ಷ್ಮಣರು ಶಬರಿಯ ಆಶ್ರಮದಲ್ಲಿ ಇರುವ ಚಿತ್ರ.<br>* ಶಬರಿಯು | 1. ಪು. ತಿ. ನ ಅವರ ಕಾಲ ಮತ್ತು ಸ್ಥಳ ತಿಳಿಸಿ.<br>2.'ಶಬರಿ' ಗೀತ ನಾಟಕದ ಆಕರ ಕೃತಿ ಯಾವುದು?<br>3. ಪು. ತಿ. ನ. ಅವರ ಕೃತಿಗಳನ್ನು ಪಟ್ಟಿ ಮಾಡಿ.<br>4. ಪು. ತಿ. ನ. ಅವರಿಗೆ ದೊರೆತ ಪ್ರಶಸ್ತಿಗಳಾವುವು?<br>5. ಮತಂಗಾಶ್ರಮದಲ್ಲಿ ವಾಸವಿದ್ದ ತಪಸ್ವಿನಿ ಯಾರು?<br>6. ರಾಮನು ಯಾರನ್ನು ನೆನೆದು ಶೋಕಿಸುತ್ತಿದ್ದನು?<br>7. 'ಭೂಮಿಜಾತೆ' ಎಂದರೆ ಯಾರು?<br>8. ಶಬರಿಯು ರಾಮನ ಅತಿಥಿ ಸತ್ಕಾರಕ್ಕಾಗಿ ಯಾವ ರೀತಿ ಸಿದ್ಧತೆ ಮಾಡಿಕೊಂಡಿದ್ದಳು?<br>9. ಶಬರಿಯು ರಾಮನ ವ್ಯಕ್ತಿತ್ವವನ್ನು ಹೇಗೆ ವರ್ಣಿಸುತ್ತಾಳೆ?<br>10 'ಸೌಮಿತ್ರಿ' ಎಂದರೆ ಯಾರು?<br>11. ಶಬರಿಯು ರಾಮನನ್ನು ಹೇಗೆ ಸತ್ಕರಿಸಿದಳು?<br>12. ಶಬರಿಯ ಅತಿಥಿ ಸತ್ಕಾರವನ್ನು ಸ್ವೀಕರಿಸಿ ರಾಮನು ಹೇಳಿದ ಮಾತುಗಳಾವುವು?<br>13. ಶಬರಿಗೆ ಮತಂಗ ಮುನಿಗಳು ಏನೆಂದು ಹೇಳಿದ್ದರು?<br>14. ಶಬರಿಯ ಬಯಕೆ ಏನು?<br>15. ಶಬರಿಯ ಕೋರಿಕೆಗೆ ರಾಮನು ಏನೆಂದು ಉತ್ತರಿಸಿದನು?<br>16. ಶಬರಿಯು ಹೇಗೆ ಮುಕ್ತಿ ಪಡೆದಳು? |

| | | | |
|---|---|---|---|
| | ಸಮರ್ಪಿಸುವುದು.<br>4. ರಾಮ ಮತ್ತು ಶಬರಿ ಮತಂಗ ಮುನಿಗಳ ಮಹತ್ತ್ವವನ್ನು ಹೊಗಳುವುದು, ಶಬರಿಯು ಮುಕ್ತಿಯನ್ನು ಪಡೆಯುವ ತನ್ನ ಬಯಕೆಯನ್ನು ರಾಮನಿಗೆ ತಿಳಿಸುವುದು, ರಾಮನು ಶಬರಿಯ ಅಭೀಷ್ಟ ಸಿದ್ಧಿಯಾಗುವಂತೆ ಹರಸುವುದು. ಶಬರಿಯು ಎಲ್ಲರಿಗೂ ನಮಸ್ಕರಿಸಿ ಹೋಮಕುಂಡದಲ್ಲಿ ಪ್ರವೇಶಿಸುವುದು. ರಾಮನಿಂದ ಶಬರಿಯ ವ್ಯಕ್ತಿತ್ವದ ಗುಣಗಾನ, ರಾಮಲಕ್ಷ್ಮಣರು ಸೀತೆಯನ್ನು ಹುಡುಕುವುದಕ್ಕೆ ಮುಂದೆ ಪ್ರಯಾಣ ಮಾಡುವುದು.<br>5. ಕನ್ನಡ ವರ್ಣಮಾಲೆಯನ್ನು ಪರಿಚಯಿಸುವುದು.<br>6. ಪ್ರಬಂಧ ರಚನಾ ವಿಧಾನ ತಿಳಿಸಿ, ಪ್ರಬಂಧ ರಚಿಸುವಂತೆ ಸೂಚಿಸುವುದು. | ರಾಮಲಕ್ಷ್ಮಣರನ್ನು ಸತ್ಕರಿಸುತ್ತಿರುವ ಚಿತ್ರ.<br>* ಶಬರಿಯು ಹೋಮಕುಂಡವನ್ನು ಪ್ರವೇಶಿಸುತ್ತಿರುವ ಚಿತ್ರ.<br>* ಶಬರಿ ವೀಡಿಯೋ ಪ್ರದರ್ಶನ<br>* ಕನ್ನಡ ವರ್ಣಮಾಲೆಯ ಪಟ.<br>* ಪ್ರಬಂಧ ಸಂಗ್ರಹ ಪುಸ್ತಕ | 17. ಸಂಯುಕ್ತಾಕ್ಷರ ಎಂದರೇನು?<br>18. ಪ್ರಬಂಧ ರಚನೆಯ ಮೂರು ಹಂತ ಯಾವುದು? |
| ಅನ್ವಯ ಚಟುವಟಿಕೆ | 1. 'ತಾಳಿದವನು ಬಾಳಿಯಾನು' ಎಂಬ ಮಾತಿನ ಮಹತ್ತ್ವ ಕುರಿತು ಚರ್ಚಿಸುವುದು.<br>2. ಪಠ್ಯಭಾಗದಲ್ಲಿ ಬಂದಿರುವ ಸರಳ ವ್ಯಾಕರಣಾಂಶಗಳನ್ನು ಪಟ್ಟಿ ಮಾಡಿಸುವುದು. | * ಪಠ್ಯಪುಸ್ತಕ | 1.'ಮತಂಗಾಶ್ರಮದಲ್ಲಿ' ಪದದಲ್ಲಿರುವ ವಿಭಕ್ತಿ ಯಾವುದು? |
| ಮೌಲ್ಯಮಾಪನ ಚಟುವಟಿಕೆ | * ಹಿಮ್ಮಾಹಿತಿ<br>* ಗೃಹಪಾಠ<br>* ಅಭ್ಯಾಸದ ಚಟುವಟಿಕೆಗಳು<br>* ನಿಯೋಜಿತ ಚಟುವಟಿಕೆಗಳು<br>* ಘಟಕ ಪರೀಕ್ಷೆ | * ಪ್ರಶ್ನಾವಳಿ<br>* ಪ್ರಶ್ನಾವಳಿ<br>* ಪಠ್ಯಪುಸ್ತಕ<br>* ಮಾಹಿತಿ ಸಂಗ್ರಹ<br>* ಪ್ರಶ್ನಾವಳಿ | * ಮೌಖಿಕ ಪರೀಕ್ಷೆ<br>* ಅವಲೋಕನ<br>* ಅವಲೋಕನ<br>* ಅವಲೋಕನ<br>* ಲಿಖಿತ ಪರೀಕ್ಷೆ |

ಶಿಕ್ಷಕರ ಸಹಿ ಮುಖ್ಯಶಿಕ್ಷಕರ ಸಹಿ

**ಪ್ರಥಮ ಭಾಷೆ ಕನ್ನಡ ಘಟಕ – 2 10 ನೆಯ ತರಗತಿ**

**ಪದ್ಯಪಾಠ – 1. ಎಮ್ಮ ನುಡಿಗೇಳ್ (ಹಳಗನ್ನಡ ಚಂಪೂ ಕಾವ್ಯ) ಕವಿ :– ಆದಿಕವಿ ಪಂಪ**

ಕಲಿಕೆಗೆ ಬೇಕಾದ ಅವಧಿಗಳು : ಪ್ರಾರಂಭದ ದಿನಾಂಕ :

ಮುಕ್ತಾಯದ ದಿನಾಂಕ :

ಕಲಿಕಾಂಶಗಳು :
1. ಆದಿ ಮಹಾಕವಿ ಪಂಪ ಅವರ ಪರಿಚಯ ಮಾಡುವರು ಹಾಗೂ ಪದ್ಯದ ಆಶಯ ತಿಳಿಯುವರು.
2. ಹಳಗನ್ನಡ ಚಂಪೂ ಮಹಾಕಾವ್ಯಗಳ ಲಕ್ಷಣಗಳನ್ನು ತಿಳಿಯುವರು.
3. ಹಳಗನ್ನಡ ಚಂಪೂ ಮಹಾಕಾವ್ಯಗಳನ್ನು ರಚಿಸಿದ ಕವಿಗಳು ಹಾಗೂ ಕಾವ್ಯಗಳನ್ನು ಹೆಸರಿಸುವರು.
4. ಕನ್ನಡದಲ್ಲಿ ಮಹಾಭಾರತ ಕಥೆಯನ್ನು ಆಧರಿಸಿ ರಚಿತವಾದ ಕಾವ್ಯಗಳನ್ನು ಹಾಗೂ ರಚಿಸಿದ ಕವಿಗಳನ್ನು ಹೆಸರಿಸುವರು.
5. ಭಾರತೀಯ ಮಹಾಕಾವ್ಯ 'ಮಹಾಭಾರತ'ದ ಕಥೆಯನ್ನು ಸಂಕ್ಷಿಪ್ತವಾಗಿ ಹೇಳುವರು.
6. ಮಹಾಭಾರತದ ಕುರುಕ್ಷೇತ್ರ ಯುದ್ಧಕ್ಕೆ ಕಾರಣವಾದ ಅಂಶಗಳನ್ನು ಚರ್ಚಿಸುವರು.
7. ಪದ್ಯಪಾಠದಲ್ಲಿ ಬಂದಿರುವ ಹೊಸಪದಗಳನ್ನು ಅರ್ಥೈಸಿಕೊಳ್ಳುವರು.
8. ದುರ್ಯೋಧನನು ಯುದ್ಧ ಬಿಡಾರದಲ್ಲಿ ಶೋಕತಪ್ತನಾಗಲು ಕಾರಣವಾದ ಘಟನೆಯನ್ನು ವಿವರಿಸುವರು.
9. ಶೋಕತಪ್ತನಾದ ದುರ್ಯೋಧನನು ಸಂತೈಸಲು ಬಂದ ತಂದೆತಾಯಿಯರನ್ನು ಗೌರವಿಸಿದ ರೀತಿಯನ್ನು ಅರಿಯುವರು.
10. ಧೃತರಾಷ್ಟ್ರ ಮತ್ತು ಗಾಂಧಾರಿಯರು ಮಗನ ಅಪ್ಪುಗೆಯಿಂದ ಅನುಭವಿಸಿದ ಆನಂದವನ್ನು ವರ್ಣಿಸುವರು.
11. ಧೃತರಾಷ್ಟ್ರನು ಪಾಂಡವರೊಡನೆ ಸಂಧಿ ಮಾಡಿಕೊಳ್ಳುವಂತೆ ಮಗನಿಗೆ ತಿಳಿಸಿದ ಸಂದರ್ಭವನ್ನು ಕುರಿತು ವಿವರಿಸುವರು.

12. ಧೃತರಾಷ್ಟ್ರನು ಮಗನಿಗೆ ಪಾಂಡವರೊಡನೆ ಸಂಧಿ ಮಾಡಿಕೊಳ್ಳುವಂತೆ ಹೇಳಿ, ಆಡಿದ ಮಾತುಗಳನ್ನು ಕುರಿತು ಚರ್ಚಿಸುವರು.
13. ಗಾಂಧಾರಿಯು ತನ್ನ ಪತಿಯ ಮಾತಿಗೆ ಅನುಬಲವಾಗಿ ಮಗನಿಗೆ ಹೇಳಿದ ಬುದ್ಧಿಮಾತುಗಳನ್ನು ವರ್ಣಿಸುವರು.
14. ಛಂದಸ್ಸು – ಪ್ರಾಸ – ಪಾದ – ಯತಿ – ಗಣ – ಅಕ್ಷರಗಣಗಳ ಬಗ್ಗೆ ತಿಳಿಯುವರು.
15. ವೃತ್ತಪದ್ಯಗಳ ವಿಧಗಳು – ಲಕ್ಷಣಗಳ ಬಗ್ಗೆ ಅರಿವು ಮೂಡಿಸಿಕೊಳ್ಳುವರು.
16. ಮತ್ತೇಭವಿಕ್ರೀಡಿತ ಮತ್ತು ಚಂಪಕಮಾಲಾ ವೃತ್ತ ಲಕ್ಷಣ ತಿಳಿಯುವರು.
16. ಅಭ್ಯಾಸ ಪುಸ್ತಕದ ಪ್ರಶ್ನೆಗಳಿಗೆ ಉತ್ತರಿಸುವರು.

| ಹಂತಗಳು | ಕಲಿಕೆಯನ್ನು ಅನುಕೂಲಿಸುವ ಚಟುವಟಿಕೆಗಳು | ಬಳಸುವ ಕಲಿಕಾ ಸಾಮಗ್ರಿಗಳು | ಮೌಲ್ಯಮಾಪನದ ಪ್ರಶ್ನೆಗಳು |
|---|---|---|---|
| ಪ್ರೇರಣಾ ಚಟುವಟಿಕೆ | * ಹಳಗನ್ನಡ ಚಂಪೂ ಮಹಾಕಾವ್ಯಗಳ ಲಕ್ಷಣ ತಿಳಿಸುವುದು.<br>* ಹಳಗನ್ನಡ ಚಂಪೂ ಮಹಾಕಾವ್ಯಗಳನ್ನು ರಚಿಸಿದ ಕವಿಗಳು ಹಾಗೂ ಕಾವ್ಯಗಳನ್ನು ಪಟ್ಟಿ ಮಾಡಿಸುವುದು.<br>* ಭಾರತೀಯ ಮಹಾಕಾವ್ಯಗಳ ಹಾಗೂ ರಚನಾಕಾರರ ಬಗ್ಗೆ ತಿಳಿಸುವುದು.<br>* ಮಹಾಭಾರತದ ಕಥೆಯನ್ನು ಸಂಕ್ಷಿಪ್ತವಾಗಿ ಹೇಳುವುದು / ಹೇಳಿಸುವುದು. | * ಕನ್ನಡ ವಿಷಯ ವಿಶ್ವಕೋಶ.<br>* ಹಳಗನ್ನಡ ಚಂಪೂ ಮಹಾಕಾವ್ಯಗಳು ಕೃತಿ.<br>* ಸಂಕ್ಷಿಪ್ತ ಕನ್ನಡ ಮಹಾಭಾರತ. | 1. ಚಂಪೂ ಕಾವ್ಯದ ಲಕ್ಷಣವೇನು?<br>2. ಹಳಗನ್ನಡದ ಪ್ರಸಿದ್ಧ ಚಂಪೂ ಮಹಾಕಾವ್ಯಗಳನ್ನು ಹೆಸರಿಸಿ.<br>3. ಹಳಗನ್ನಡದ ಪ್ರಸಿದ್ಧ ಕವಿಗಳನ್ನು ಹೆಸರಿಸಿ.<br>4. ಮಹಾಭಾರತ ಮಹಾಕಾವ್ಯವನ್ನು ರಚಿಸಿದ ಮಹರ್ಷಿ ಯಾರು?<br>5. ಕುರುಕ್ಷೇತ್ರ ಯುದ್ಧಕ್ಕೆ ಕಾರಣ ಏನು? |
| ಕಲಿಕಾ ಚಟುವಟಿಕೆ | * ಪ್ರಶ್ನೋತ್ತರ / ಸಂದರ್ಶನ ವಿಧಾನದಿಂದ ಆದಿ ಮಹಾಕವಿ ಪಂಪ ಅವರನ್ನು ಪರಿಚಯಿಸುವ ಚಟುವಟಿಕೆ.<br>* ಉಪಾಧ್ಯಾಯರು ಹಳಗನ್ನಡ ಪದ್ಯವನ್ನು ಪದವಿಂಗಡಣೆ ಮಾಡಿ, ಓದುವುದು.<br>* ಉಪಾಧ್ಯಾಯರ ಓದನ್ನು ಅನುಸರಿಸಿ ವಿದ್ಯಾರ್ಥಿಗಳು ಪದ್ಯವನ್ನು ಪದ ವಿಂಗಡಣೆ ಮಾಡಿ, ಓದುವ ಚಟುವಟಿಕೆ.<br>* ನಿಘಂಟನ್ನು ಬಳಸಿಕೊಂಡು ಹೊಸಪದಗಳಿಗೆ ಸಮಾನಾರ್ಥಕ ಪದಗಳನ್ನು ಹುಡುಕಿಸುವ ಚಟುವಟಿಕೆ.<br>* ವಿದ್ಯಾರ್ಥಿಗಳು ಮೌನವಾಗಿ ಓದಿ, ಪದ್ಯವನ್ನು ಅರ್ಥೈಸಿಕೊಳ್ಳುವ ಚಟುವಟಿಕೆ.<br>* ವಿವರಣೆ – ಚರ್ಚೆ – ಪ್ರಶ್ನೋತ್ತರ ವಿಧಾನದಿಂದ ಪಾಠದ ಬೆಳವಣಿಗೆ<br>* <u>ಉಪಘಟಕಗಳು :–</u><br>1. ಕುರುಕ್ಷೇತ್ರ ಯುದ್ಧದಲ್ಲಿ ಕೌರವರ ಪಕ್ಷದಿಂದ ಯುದ್ಧದಲ್ಲಿ ಮಡಿದ ಮಹಾವೀರರು ಹಾಗೂ ಶೋಕತಪ್ತನಾದ ದುರ್ಯೋಧನನನ್ನು ನೋಡಲು ಬಿಡಾರಕ್ಕೆ ಧೃತರಾಷ್ಟ್ರ ಮತ್ತು ಗಾಂಧಾರಿಯರ ಆಗಮನ. ತನ್ನ ಬಳಿಗೆ ಬಂದ ತಂದೆತಾಯಿಯರಿಗೆ ದುರ್ಯೋಧನ ಗೌರವದಿಂದ ನಮಸ್ಕರಿಸುವುದು. ಧೃತರಾಷ್ಟ್ರ ಮತ್ತು ಗಾಂಧಾರಿಯರು ಮಗನನ್ನು ಪ್ರೀತಿಯಿಂದ ಅಪ್ಪಿಕೊಂಡು ಆಶೀರ್ವದಿಸುವುದು, ಮಗನ ಅಪ್ಪುಗೆಯಿಂದ ಆನಂದ ಹೊಂದುವುದು.<br>2. ಧೃತರಾಷ್ಟ್ರನು ದುರ್ಯೋಧನನಿಗೆ ಪಾಂಡವರೊಡನೆ ಸಂಧಿಮಾಡಿ ಕೊಳ್ಳುವಂತೆ ಬುದ್ಧಿವಾದವನ್ನು ಹೇಳುತ್ತ | * ಪಂಪ ಅವರ ಕಾಲ್ಪನಿಕ ಚಿತ್ರ.<br>* ಪಂಪ ಅವರ 'ವಿಕ್ರಮಾರ್ಜುನ ವಿಜಯಂ' ಕೃತಿ.<br>* ಪಠ್ಯಪುಸ್ತಕ<br>* ಕನ್ನಡ–ಕನ್ನಡ ನಿಘಂಟು<br>* ಪಂಪನ ಬಗೆಗಿನ ವೀಡಿಯೋ ಪ್ರದರ್ಶನ | 1. ಪಂಪ ಅವರ ಕಾಲ ಮತ್ತು ಸ್ಥಳ ತಿಳಿಸಿ.<br>2. ಪಂಪ ಅವರ ಕೃತಿಗಳನ್ನು ಪಟ್ಟಿ ಮಾಡಿ.<br>4. ಪಂಪ ಅವರಿಗೆ ದೊರೆತ ಬಿರುದುಗಳು ಯಾವುವು?<br>2.'ಎಮ್ಮ ನುಡಿಗೇಳ್' ಪದ್ಯದ ಆಕರ ಕೃತಿ ಯಾವುದು?<br>3. 'ಉತ್ತಮಾಂಗ' ಪದದ ಸಮಾನಾರ್ಥಕ ಪದ ಯಾವುದು?<br>4. 'ಪವನನಂದನ' ಎಂದರೆ ಯಾರು?<br>5. 'ಕುರುಕುಳನಂದನ' ಎಂದರೆ ಯಾರು?<br>6. 'ಗಾಂಡೀವಿ' ಎಂದರೆ ಯಾರು?<br>7. 'ಘಟಸಂಭೂತ' ಎಂದರೆ ಯಾರು?<br>8. 'ಗಂಗೆಯ ಪೆರ್ಮಗ' ಯಾರು?<br>9. ಕುರುಕ್ಷೇತ್ರ ಯುದ್ಧ ಎಷ್ಟು ದಿನ ನಡೆಯಿತು?<br>10. ಕುರುಕ್ಷೇತ್ರ ಯುದ್ಧದಲ್ಲಿ ಕೌರವರ ಪಕ್ಷದಲ್ಲಿ ಮಡಿದ ಪ್ರಮುಖ ವೀರರು ಯಾರು ಯಾರು?<br>11. ತನ್ನ ಬಳಿಗೆ ಬಂದ ತಂದೆತಾಯಿಯರಿಗೆ ದುರ್ಯೋಧನನು ಹೇಗೆ ನಮಸ್ಕರಿಸಿದನು?<br>12. ದುರ್ಯೋಧನನನ್ನು ಅಪ್ಪಿಕೊಂಡಾಗ ಧೃತರಾಷ್ಟ್ರ ಗಾಂಧಾರಿಯರಿಗೆ ಆದ ಅನುಭವ ಏನು?<br>13. 'ಮಹೀಭುಜ' ಎಂದರೆ ಯಾರು?<br>14. ಧೃತರಾಷ್ಟ್ರನು ದುರ್ಯೋಧನನಿಗೆ ಹೇಳಿದ ಬುದ್ಧಿಮಾತುಗಳು ಯಾವುವು? |

| | | | |
|---|---|---|---|
| | ಕಾರಣ ಸಹಿತ ಆಡಿದ ಮಾತುಗಳು.<br>3. ಗಾಂಧಾರಿಯು ತನ್ನ ಪತಿಯ ಮಾತಿಗೆ ಅನುಬಲವಾಗಿ ದುರ್ಯೋಧನನಿಗೆ ಹೇಳಿದ ಬುದ್ಧಿಮಾತುಗಳು.<br>4. ಛಂದಸ್ಸು ಅಕ್ಷರಗಣ – ವೃತ್ತಪದ್ಯಗಳ ವಿಧಗಳು – ಲಕ್ಷಣ ಪರಿಚಯ.<br>6. ಮತ್ತೇಭವಿಕ್ರೀಡಿತ ಮತ್ತು ಚಂಪಕಮಾಲಾ ವೃತ್ತ ಲಕ್ಷಣದ ಪರಿಚಯ. | * ಪ್ರಸ್ತಾರ ಹಾಕಲು ಕಪ್ಪು ಹಲಗೆಯ ಬಳಕೆ | 15. ಗಾಂಧಾರಿಯು ದುರ್ಯೋಧನನಿಗೆ ಏನೆಂದು ಬುದ್ಧಿವಾದ ಹೇಳಿದಳು?<br>17. 'ಛಂದಸ್ಸು' ಎಂದರೆ ಏನು?<br>18. ಅಕ್ಷರಗಣ ಎಂದರೆ ಏನು?<br>19. ಅಕ್ಷರಗಳಲ್ಲಿ ಎಷ್ಟು ವಿಧಗಳಿವೆ?<br>20. 'ಮತ್ತೇಭವಿಕ್ರೀಡಿತ ವೃತ್ತ' ಪದ್ಯದ ಲಕ್ಷಣ ಏನು? |
| ಅನ್ವಯ ಚಟುವಟಿಕೆ | 1. ಧೃತರಾಷ್ಟ್ರನು ದುರ್ಯೋಧನನಿಗೆ "ಪಾಂಡವರೊಡನೆ ಸಂಧಿ ಮಾಡಿಕೋ" ಎಂದು ಹೇಳಿದ್ದು ಸರಿಯೇ? ತಪ್ಪೇ? ಎಂದು ಚರ್ಚಿಸುವುದು.<br>2. ಪದ್ಯಭಾಗದಲ್ಲಿ ಬಂದಿರುವ ಸರಳ ವ್ಯಾಕರಣಾಂಶಗಳನ್ನು ಪಟ್ಟಿ ಮಾಡಿಸುವುದು. | * ಪಠ್ಯಪುಸ್ತಕ | 1. 'ಪೆರ್ಮಗ' ಪದ ಯಾವ ಸಮಾಸಕ್ಕೆ ಉದಾಹರಣೆಯಾಗಿದೆ?<br>2. 'ಕಜ್ಜ' ಪದದ ತತ್ಸಮರೂಪ ಏನು?<br>3. 'ಪಗಲು' ಪದದ ಹೊಸಗನ್ನಡ ರೂಪ ಯಾವುದು><br>4. 'ನುಡಿಗೇಳ್' ಪದದಲ್ಲಿ ಆಗಿರುವ ಸಂಧಿ ಯಾವುದು. |
| ಮೌಲ್ಯಮಾಪನ ಚಟುವಟಿಕೆ | * ಹಿಮ್ಮಾಹಿತಿ<br>* ಗೃಹಪಾಠ<br>* ಅಭ್ಯಾಸದ ಚಟುವಟಿಕೆಗಳು<br>* ನಿಯೋಜಿತ ಚಟುವಟಿಕೆಗಳು<br>* ಘಟಕ ಪರೀಕ್ಷೆ | * ಪ್ರಶ್ನಾವಳಿ<br>* ಪ್ರಶ್ನಾವಳಿ<br>* ಪಠ್ಯಪುಸ್ತಕ<br>* ಮಾಹಿತಿ ಸಂಗ್ರಹ<br>* ಪ್ರಶ್ನಾವಳಿ | * ಮೌಖಿಕ ಪರೀಕ್ಷೆ<br>* ಅವಲೋಕನ<br>* ಅವಲೋಕನ<br>* ಅವಲೋಕನ<br>* ಲಿಖಿತ ಪರೀಕ್ಷೆ |

ಶಿಕ್ಷಕರ ಸಹಿ                                                  ಮುಖ್ಯಶಿಕ್ಷಕರ ಸಹಿ

**ಪ್ರಥಮ ಭಾಷೆ ಕನ್ನಡ          ಘಟಕ – 3          10 ನೆಯ ತರಗತಿ**

**ಗದ್ಯಪಾಠ – 2. ಅಮೆರಿಕದಲ್ಲಿ ಗೊರೂರು          ಲೇಖಕರು :– ಗೊರೂರು ರಾಮಸ್ವಾಮಿ ಅಯ್ಯಂಗಾರ್**

ಕಲಿಕೆಗೆ ಬೇಕಾದ ಅವಧಿಗಳು :          ಪ್ರಾರಂಭದ ದಿನಾಂಕ :

ಮುಕ್ತಾಯದ ದಿನಾಂಕ :

ಕಲಿಕಾಂಶಗಳು :
1. ಲೇಖಕರಾದ ಶ್ರೀ ಗೋರೂರು ರಾಮಸ್ವಾಮಿ ಅಯ್ಯಂಗಾರ್ ಅವರ ಪರಿಚಯ ಮಾಡುವರು ಹಾಗೂ ಪಾಠದ ಆಶಯ ತಿಳಿಯುವರು.
2. ಪ್ರವಾಸ ಸಾಹಿತ್ಯದ ಲಕ್ಷಣ ಹಾಗೂ ವಿಧಗಳ ಬಗ್ಗೆ ತಿಳಿಯುವರು.
3. ಕನ್ನಡದ ಪ್ರಸಿದ್ಧ ಪ್ರವಾಸ ಸಾಹಿತ್ಯ ರಚನಾಕಾರರನ್ನು ಪರಿಚಯಿಸುವರು.
4. ಸ್ಥಳೀಯ, ದೇಶೀಯ ಹಾಗೂ ಅಂತಾರಾಷ್ಟ್ರೀಯ ಪ್ರವಾಸ ಸಾಹಿತ್ಯಗಳ ಮಹತ್ತ್ವವನ್ನು ಅರಿಯುವರು. 5. 'ಅಮೆರಿಕದಲ್ಲಿ ಗೊರೂರು' ಪ್ರವಾಸ ಸಾಹಿತ್ಯದ ವಿಶಿಷ್ಟತೆಯನ್ನು ಅರಿಯುವರು.
6. ಗದ್ಯಪಾಠದಲ್ಲಿ ಬಂದಿರುವ ಹೊಸಪದಗಳನ್ನು ಅರ್ಥೈಸಿಕೊಳ್ಳುವರು.
7. 'ವೈಜ್ಞಾನಿಕ ಉಪಕರಣಗಳ ಬಳಕೆಯ ಬಗ್ಗೆ ತಿಳಿದುಕೊಳ್ಳುವುದು ಅಗತ್ಯ' ಎಂಬುದನ್ನು ಅರಿಯುವರು.
8. ಗೊರೂರು ದಂಪತಿಗಳು ಮನೆಯಲ್ಲಿದ್ದಾಗ ನಡೆದ ವಿದ್ಯುತ್ ಒಲೆ ಅವಗಡವನ್ನು ಕುರಿತು ವಿವರಿಸುವರು.
9. ವಿದ್ಯುತ್ ಒಲೆಯ ಅವಗಡದಿಂದ ಪಾರಾಗಲು ಗೊರೂರು ಅವರು ಮಾಡಿದ ಪ್ರಯತ್ನಗಳನ್ನು ವಿವರಿಸುವರು.
10. ಗೊರೂರು ಅವರು ಮನೆಯ ಬಳಿಯಿದ್ದ ಪ್ರಾಥಮಿಕ ಶಾಲೆಗೆ ಹೋದಾಗ ನಡೆದ ಘಟನೆಯನ್ನು ವಿವರಿಸುವರು.
11. ಅಮೆರಿಕದ ಶಿಕ್ಷಕರು ಮತ್ತು ವಿದ್ಯಾರ್ಥಿಗಳೊಡನೆ ಗೊರೂರು ಅವರು ನಡೆಸಿದ ಸಂಭಾಷಣೆಯ ಮಹತ್ತ್ವವನ್ನು ಕುರಿತು ಚರ್ಚಿಸುವರು.
12. ದೇಶ ನೋಡು: ಕೋಶ ಓದು – ಎಂಬ ಗಾದೆಯನ್ನು ಅರ್ಥೈಸುವರು
13. ಸಂಧಿಗಳು – ಸಂಧಿಯ ವಿಧಗಳನ್ನು ಉದಾಹರಣೆಗಳೊಡನೆ ವಿವರಿಸುವರು.
14. ದ್ವಿರುಕ್ತಿ – ಜೋಡುನುಡಿಗಳನ್ನು  ಉದಾಹರಣೆಗಳೊಡನೆ ವಿವರಿಸುವರು.
15. ಅಭ್ಯಾಸ ಪುಸ್ತಕದ ಪ್ರಶ್ನೆಗಳಿಗೆ ಉತ್ತರಿಸುವರು.

| ಹಂತಗಳು | ಕಲಿಕೆಯನ್ನು ಅನುಕೂಲಿಸುವ ಚಟುವಟಿಕೆಗಳು | ಬಳಸುವ ಕಲಿಕಾ ಸಾಮಗ್ರಿಗಳು | ಮೌಲ್ಯಮಾಪನದ ಪ್ರಶ್ನೆಗಳು |
|---|---|---|---|
| ಪ್ರೇರಣಾ | * ಪ್ರವಾಸ ಕಥನದ ಲಕ್ಷಣ | * ಕನ್ನಡ ವಿಷಯ | 1. ಪ್ರವಾಸ ಕಥನದ ಪ್ರಮುಖ |

| | | | |
|---|---|---|---|
| ಚಟುವಟಿಕೆ | ತಿಳಿಸುವುದು. ಇವುಗಳಲ್ಲಿ ಇರುವ ವೈವಿಧ್ಯಗಳನ್ನು ಗುರುತಿಸುವಂತೆ ತಿಳಿಸುವುದು.<br>* ಕನ್ನಡದ ಪ್ರಸಿದ್ಧ ಪ್ರವಾಸಕಥನಗಳು ಹಾಗೂ ರಚನಾಕಾರರ ಬಗೆಗೆ ತಿಳಿಸುವುದು.<br>* ದೇಶ ನೋಡು; ಕೋಶ ಓದು – ಗಾದೆಯ ಮಹತ್ತ್ವವನ್ನು ತಿಳಿಸುವುದು. | ವಿಶ್ವಕೋಶ.<br>* ವಿಷಯ ಸಂಪದೀಕರಣ ಸಾಹಿತ್ಯ<br>* ಪ್ರವಾಸ ಸಾಹಿತ್ಯ ಕೃತಿಗಳು | ಲಕ್ಷಣವನ್ನು ತಿಳಿಸಿ.<br>2. ಪ್ರವಾಸ ಕಥನದ ವಿಧಗಳನ್ನು ತಿಳಿಸಿ.<br>3. ಕನ್ನಡ ಪ್ರಸಿದ್ಧ ಪ್ರವಾಸ ಕಥನಗಳನ್ನು ಹೆಸರಿಸಿ.<br>4. ಕನ್ನಡದ ಪ್ರಸಿದ್ಧ ಪ್ರವಾಸ ಕಥನ ರಚನಾಕಾರರನ್ನುಹೆಸರಿಸಿ. |
| ಕಲಿಕಾ ಚಟುವಟಿಕೆ | * ಪ್ರಶ್ನೋತ್ತರ / ಸಂದರ್ಶನ ವಿಧಾನದಿಂದ ಲೇಖಕರಾದ ಡಿ. ಎಸ್. ಜಯಪ್ಪಗೌಡ ಅವರನ್ನು ಪರಿಚಯಿಸುವ ಚಟುವಟಿಕೆ.<br>* ಉಪಾಧ್ಯಾಯರು ಪಾಠವನ್ನು ಓದುವುದು.<br>* ಉಪಾಧ್ಯಾಯರ ಓದನ್ನು ಅನುಸರಿಸಿ ವಿದ್ಯಾರ್ಥಿಗಳು ಪಾಠವನ್ನು ಓದುವ ಚಟುವಟಿಕೆ.<br>* ನಿಘಂಟನ್ನು ಬಳಸಿಕೊಂಡು ಹೊಸಪದಗಳಿಗೆ ಸಮಾನಾರ್ಥಕ ಪದಗಳನ್ನು ಹುಡುಕಿಸುವ ಚಟುವಟಿಕೆ.<br>* ವಿದ್ಯಾರ್ಥಿಗಳು ಪಾಠವನ್ನು ಮೌನವಾಗಿ ಓದಿ, ಅರ್ಥೈಸಿಕೊಳ್ಳುವ ಚಟುವಟಿಕೆ.<br>* ವಿವರಣೆ – ಚರ್ಚೆ – ಪ್ರಶ್ನೋತ್ತರ ವಿಧಾನದಿಂದ ಪಾಠದ ಬೆಳವಣಿಗೆ<br>* ಉಪಘಟಕಗಳು :–<br>1. ಮನೆಯಲ್ಲಿರುವ ವೈಜ್ಞಾನಿಕ ಉಪಕರಣಗಳನ್ನು ಬಳಸುವ ಸಾಮಾನ್ಯ ಜ್ಞಾನದ ಅರಿವಿರಬೇಕು ಎಂಬ ಲೇಖಕರ ಅಭಿಪ್ರಾಯ, ವಿದ್ಯುತ್ ಒಲೆಯಿಂದ ಆದ ಅವಗಡ, ಗೊರೂರು ಅವರ ಹೆಂಡತಿ ಭಯಗೊಳ್ಳಲು ಕಾರಣ, ಅವಗಡದಿಂದ ಪಾರಾಗಲು ಗೊರೂರು ಅವರು ಮಾಡಿದ ಪ್ರಯತ್ನ.<br>2. ಮನೆಯ ಬಳಿಯಿದ್ದ ಪ್ರೈಮರಿ ಶಾಲೆಗೆ ಭೇಟಿ ನೀಡಿದಾಗ ಗೊರೂರು ಅವರನ್ನು ನೋಡಿ ಮಕ್ಕಳು ಭಯಗೊಂಡು ಓಡಿದ್ದು, ವಿದ್ಯಾರ್ಥಿಗಳು ಮತ್ತು ಶಿಕ್ಷಕರು ಗೊರೂರರ ವೇಷಭೂಷಣವನ್ನು ಕುತೂಹಲದಿಂದ ವೀಕ್ಷಿಸಿದ್ದು, ಗೊರೂರರ ವೇಷಭೂಷಣದ ವರ್ಣನೆ,<br>3. ಗೊರೂರು ಅವರು ಶಾಲೆಯ ವಿದ್ಯಾರ್ಥಿಗಳು ಮತ್ತು ಶಿಕ್ಷಕರಿಗೆ ಗಾಂಧೀಜಿ ಮತ್ತು ಖಾದಿ ಬಟ್ಟೆಯ ಬಗೆಗೆ ನೀಡಿದ ವಿವರಣೆ, ಶಾಲೆಗೆ ಗೊರೂರರ ಹೆಂಡತಿಯ ಆಗಮನ, ಹೆಂಡತಿಯನ್ನು ನೋಡಿದ ಕೂಡಲೇ ಗೊರೂರರಿಗೆ ತಾವು ಬಂದ ಕಾರ್ಯದ ನೆನೆಪು, ಸಹಾಯ ಮಾಡುವಂತೆ ಶಿಕ್ಷಕರಲ್ಲಿ ಕೋರಿಕೆ, ವಿದ್ಯಾರ್ಥಿಯು ವಿದ್ಯುತ್ ಒಲೆಯನ್ನು ಆಫ್ ಮಾಡಿ, ಭಯ ನಿವಾರಣೆ ಮಾಡಿದ್ದು, ಗೊರೂರು ಮೂರು ನಾಲ್ಕು ದಿನ ಶಾಲೆಗೆ ಭೇಟಿನೀಡಿ ವಿದ್ಯಾರ್ಥಿಗಳನ್ನೂ ಶಿಕ್ಷಕರನ್ನೂ ರಂಜಿಸಿದ್ದು.<br>4. ಸಂಧಿಗಳು ಹಾಗೂ ವಿಧಗಳ ಬಗೆಗೆ ಉದಾಹರಣೆ ಸಹಿತ ವಿವರಣೆ.<br>5. ದ್ವಿರುಕ್ತಿ ಮತ್ತು ಜೋಡುನುಡಿಗಳ ಬಗೆಗೆ ಉದಾಹರಣೆ ಸಹಿತ ವಿವರಣೆ | * ‘ಅಮೆರಿಕದಲ್ಲಿ ಗೊರೂರು’ ಪ್ರವಾಸ ಕಥನ ಮೂಲ ಕೃತಿ<br>* ಪಠ್ಯಪುಸ್ತಕ<br>* ಕನ್ನಡ–ಕನ್ನಡ ನಿಘಂಟು<br>* ತಪಶೀಲು ಪಟ್ಟಿ<br>* ಆಧುನಿಕ ವಿದ್ಯುತ್ ಒಲೆಯ ಚಿತ್ರ<br>* ಗೊರೂರು ರಾಮಸ್ವ ಅಯ್ಯಂಗಾರರ ವೇಷಭೂಷಣದ ಚಿತ್ರ.<br>* ಗಾಂಧೀಜಿ ಅವರ ಭಾವಚಿತ್ರ..<br>* ಕನ್ನಡ ವ್ಯಾಕರಣ ಪುಸ್ತಕ | 1. ಗೊರೂರು ರಾಮಸ್ವಾಮಿ ಅಯ್ಯಂಗಾರ್ ಅವರ ಕಾಲ ಮತ್ತು ಸ್ಥಳ ತಿಳಿಸಿ.<br>2. ‘ಅಮೆರಿಕದಲ್ಲಿ ಗೊರೂರು’ ಗದ್ಯಪಾಠದ ಆಕರ ಕೃತಿ ಯಾವುದು?<br>3. ಗೊರೂರು ರಾಮಸ್ವಾಮಿ ಅಯ್ಯಂಗಾರ್ ಅವರ ಕೃತಿಗಳನ್ನು ಪಟ್ಟಿ ಮಾಡಿ.<br>4. ಗೊರೂರು ರಾಮಸ್ವಾಮಿ ಅಯ್ಯಂಗಾರ್ ಅವರಿಗೆ ದೊರೆತ ಪ್ರಶಸ್ತಿಗಳಾವುವು?<br>5. ಪಾಶ್ಚಾತ್ಯರಲ್ಲಿ ಮಕ್ಕಳಾದಿಯಾಗಿ ಎಲ್ಲರೂ ತಿಳಿದುಕೊಂಡಿರುವ ಅಂಶಗಳು ಯಾವುವು?<br>6. ಗೊರೂರು ಅವರು ಅಮೆರಿಕದಲ್ಲಿ ಯಾರ ಮನೆಗೆ ಹೋಗಿದ್ದರು?<br>7. ಅಮೆರಿಕ, ಕೆನಡಗಳಲ್ಲಿ ಬೆಂಕಿಯ ಅಪಾಯ ಹೆಚ್ಚು ಏಕೆ?<br>8. ಗೊರೂರು ಅವರು ಗಾಬರಿಗೊಳ್ಳಲು ಕಾರಣವೇನು?<br>9. ಗೊರೂರು ಅವರು ಸ್ಕೂಲಿನತ್ತ ಹೆಜ್ಜೆ ಹಾಕಲು ಕಾರಣವೇನು?<br>10. ಗೊರೂರು ಅವರನ್ನು ಕಂಡು ಮಕ್ಕಳು ಭಯಗೊಳ್ಳಲು ಕಾರಣವೇನು?<br>11. ಗೊರೂರು ಅವರು ಖಾದಿ ಬಟ್ಟೆಯ ಬಗೆಗೆ ನೀಡಿದ ವಿವರಣೆ ಏನು?<br>12. ಶಾಲೆಗೆ ಹೋದ ಕೆಲಸದ ಬಗೆಗೆ ಗೊರೂರು ಅವರಿಗೆ ಯಾವಾಗ ಜ್ಞಾನೋದಯವಾಯಿತು?<br>13. ಗೊರೂರು ಅವರು ಶಿಕ್ಷಕರಲ್ಲಿ ಏನೆಂದು ಕೋರಿಕೊಂಡರು?<br>14. ಅಮೆರಿಕದ ವಿದ್ಯಾರ್ಥಿಗಳನ್ನು ರಂಜಿಸಿದ ಕನ್ನಡ ಸಾಹಿತ್ಯದ ಭಾಗಗಳು ಯಾವುವು?<br>15. ಕನ್ನಡ ಸಂಧಿಗಳನ್ನು ಹೆಸರಿಸಿ.<br>16. ‘ಜ್ಞಾನೋದಯ’ ಈ ಪದದಲ್ಲಿ ಆಗಿರುವ ಸಂಧಿ ಯಾವುದು? |

| | | | |
|---|---|---|---|
| | | | 17. 'ನಟ್ಟನಡುವೆ' ಪದವು ಯಾವ ವ್ಯಾಕರಣಾಂಶಕ್ಕೆ ಉದಾಹರಣೆ? |
| ಅನ್ವಯ ಚಟುವಟಿಕೆ | 1. 'ದೇಶ ನೋಡು; ಕೋಶ ಓದು' ಎಂಬ ಮಾತಿನ ಮಹತ್ತ್ವ ಕುರಿತು ಚರ್ಚಿಸುವುದು.<br>2. ಪಠ್ಯಭಾಗದಲ್ಲಿ ಬಂದಿರುವ ಸರಳ ವ್ಯಾಕರಣಾಂಶಗಳನ್ನು ಪಟ್ಟಿ ಮಾಡಿಸುವುದು. | * ಪಠ್ಯಪುಸ್ತಕ | 1. ಈ ಪಾಠದಲ್ಲಿ ಬಂದಿರುವ ಲೋಪ ಸಂಧಿಯಾಗಿರುವ ಐದು ಪದಗಳನ್ನು ಗುರುತಿಸಿ ಬರೆಯಿರಿ. |
| ಮೌಲ್ಯಮಾಪನ ಚಟುವಟಿಕೆ | * ಹಿಮ್ಮಾಹಿತಿ<br>* ಗೃಹಪಾಠ<br>* ಅಭ್ಯಾಸದ ಚಟುವಟಿಕೆಗಳು<br>* ನಿಯೋಜಿತ ಚಟುವಟಿಕೆಗಳು<br>* ಘಟಕ ಪರೀಕ್ಷೆ | * ಪ್ರಶ್ನಾವಳಿ<br>* ಪ್ರಶ್ನಾವಳಿ<br>* ಪಠ್ಯಪುಸ್ತಕ<br>* ಮಾಹಿತಿ ಸಂಗ್ರಹ<br>* ಪ್ರಶ್ನಾವಳಿ | * ಮೌಖಿಕ ಪರೀಕ್ಷೆ<br>* ಅವಲೋಕನ<br>* ಅವಲೋಕನ<br>* ಅವಲೋಕನ<br>* ಲಿಖಿತ ಪರೀಕ್ಷೆ |

ಶಿಕ್ಷಕರ ಸಹಿ ಮುಖ್ಯಶಿಕ್ಷಕರ ಸಹಿ

**ಪ್ರಥಮ ಭಾಷೆ ಕನ್ನಡ ಘಟಕ – 4 10 ನೆಯ ತರಗತಿ**

**ಪದ್ಯಪಾಠ – 2. ಹಕ್ಕಿ ಹಾರುತಿದೆ ನೋಡಿದಿರಾ ಕವಿ :– ದ. ರಾ. ಬೇಂದ್ರೆ**

ಕಲಿಕೆಗೆ ಬೇಕಾದ ಅವಧಿಗಳು : ಪ್ರಾರಂಭದ ದಿನಾಂಕ :

ಮುಕ್ತಾಯದ ದಿನಾಂಕ :

ಕಲಿಕಾಂಶಗಳು :
1. ವರಕವಿ ದ. ರಾ. ಬೇಂದ್ರೆ ಅವರ ಪರಿಚಯ ಮಾಡುವರು ಹಾಗೂ ಪದ್ಯದ ಆಶಯ ತಿಳಿಯುವರು.
2. ಭಾವಗೀತೆಗಳ ಲಕ್ಷಣಗಳನ್ನು ತಿಳಿಯುವರು.
3. ಕನ್ನಡದಲ್ಲಿ ಭಾವಗೀತೆಗಳನ್ನು ರಚಿಸಿದ ಪ್ರಸಿದ್ಧ ಕವಿಗಳು ಹಾಗೂ ಭಾವಗೀತೆಗಳನ್ನು ಹೆಸರಿಸುವರು.
4. ಪದ್ಯಪಾಠದಲ್ಲಿ ಬಂದಿರುವ ಹೊಸಪದಗಳನ್ನು ಅರ್ಥೈಸಿಕೊಳ್ಳುವರು.
5. ಕಾಲಪಕ್ಷಿಯು ಚಲನಶೀಲವಾದುದು, ವಿಶ್ವವ್ಯಾಪಕವಾದುದು, ವೇಗಗತಿಯುಳ್ಳದ್ದು ಹಾಗೂ ಪ್ರಗತಿಶೀಲವಾದುದು ಎಂಬ ಕವಿಯ ಭಾವವನ್ನು ಅರ್ಥೈಸುವರು.
6. ಕಾಲಪಕ್ಷಿಯ ಭೌತಿಕ ಸ್ವರೂಪವನ್ನು ಬಣ್ಣಗಳ ಮೂಲಕ ಸಂಕೇತಿಸಿರುವ ಕವಿಯ ಭಾವವನ್ನು ತಿಳಿಯುವರು.
7. ಕಾಲಪಕ್ಷಿಯ ತರತಮ ರಹಿತ ಸಮದೃಷ್ಟಿಯನ್ನು ಕವಿಯು ವರ್ಣಿಸಿರುವ ರೀತಿಯನ್ನು ವಿವರಿಸುವರು.
8. ಕಾಲಚಕ್ರದಲ್ಲಿ ನಡೆದಿರುವ ಭೂಮಂಡಲದ ರಾಜಕೀಯ ಹಾಗೂ ಪ್ರಾಕೃತಿಕ ಬದಲಾವಣೆಗಳನ್ನು ಕುರಿತು ಚರ್ಚಿಸುವರು.
9. ಕಾಲಪಕ್ಷಿಯು ಯುಗಯುಗದಲ್ಲೂ ಜನರಿಗೆ ಚೈತನ್ಯವನ್ನು ತುಂಬಿ ಮುಂದಿನ ಜನಾಂಗವನ್ನು ಹರಸುವುದು ಎಂಬ ಕವಿಯ ಆಶಾವಾದವನ್ನು ಮೆಚ್ಚುವರು.
10. ಅವ್ಯಯಗಳು ಹಾಗೂ ವಿಧಗಳನ್ನು ಪರಿಚಯಿಸುವರು.
11. ಅಭ್ಯಾಸ ಪುಸ್ತಕದ ಪ್ರಶ್ನೆಗಳಿಗೆ ಉತ್ತರಿಸುವರು.

| ಹಂತಗಳು | ಕಲಿಕೆಯನ್ನು ಅನುಕೂಲಿಸುವ ಚಟುವಟಿಕೆಗಳು | ಬಳಸುವ ಕಲಿಕಾ ಸಾಮಗ್ರಿಗಳು | ಮೌಲ್ಯಮಾಪನದ ಪ್ರಶ್ನೆಗಳು |
|---|---|---|---|
| ಪ್ರೇರಣಾ ಚಟುವಟಿಕೆ | * ಕನ್ನಡ ಭಾವಗೀತೆಗಳ ಲಕ್ಷಣ ತಿಳಿಸುವುದು.<br>* ಕನ್ನಡದ ಪ್ರಸಿದ್ಧ ಭಾವಗೀತೆಗಳನ್ನು ಕೇಳಿಸುವುದು / ಹಾಡಿಸುವುದು.<br>* ಕನ್ನಡದಲ್ಲಿ ಭಾವಗೀತೆಗಳನ್ನು ರಚಿಸಿದ ಪ್ರಸಿದ್ಧ ಕವಿಗಳನ್ನು ಹೆಸರಿಸುವುದು. | * ಕನ್ನಡ ಭಾವಗೀತೆಗಳ ಧ್ವನಿಸುರುಳಿ<br>* ಕನ್ನಡ ವಿಷಯ ವಿಶ್ವಕೋಶ | 1. 'ದೇವರು ರುಜು ಮಾಡಿದನು' ಭಾವಗೀತೆಯನ್ನು ಬರೆದವರು ಯಾರು?<br>2. ಭಾವಗೀತೆಯ ಲಕ್ಷಣ ತಿಳಿಸಿ. |
| ಕಲಿಕಾ ಚಟುವಟಿಕೆ | * ಪ್ರಶ್ನೋತ್ತರ / ಸಂದರ್ಶನ ವಿಧಾನದಿಂದ ದ. ರಾ. ಬೇಂದ್ರೆ ಅವರನ್ನು ಪರಿಚಯಿಸುವ ಚಟುವಟಿಕೆ.<br>* ಉಪಾಧ್ಯಾಯರು ಪದ್ಯವನ್ನು ಓದುವುದು.<br>* ಉಪಾಧ್ಯಾಯರ ಓದನ್ನು ಅನುಸರಿಸಿ ವಿದ್ಯಾರ್ಥಿಗಳು ಪದ್ಯವನ್ನು ಓದುವ ಚಟುವಟಿಕೆ. | * ದ. ರಾ. ಬೇಂದ್ರೆ ಅವರ ಭಾವಚಿತ್ರ<br>* ದ. ರಾ. ಬೇಂದ್ರೆ ಅವರ ಸಾಕ್ಷ್ಯಚಿತ್ರ<br>* ಪಠ್ಯಪುಸ್ತಕ | 1. ದ. ರಾ. ಬೇಂದ್ರೆ ಅವರ ಕಾಲ ಮತ್ತು ಸ್ಥಳ ತಿಳಿಸಿ.<br>2. ದ. ರಾ. ಬೇಂದ್ರೆ ಅವರ ಕೃತಿಗಳನ್ನು ಹೆಸರಿಸಿ.<br>3. ದ. ರಾ. ಬೇಂದ್ರೆ ಅವರಿಗೆ ದೊರೆತ ಪ್ರಶಸ್ತಿಗಳನ್ನು ಪಟ್ಟಿ ಮಾಡಿ.<br>4. 'ಹಕ್ಕಿ ಹಾರುತಿದೆ ನೋಡಿದಿರಾ' |

| | | | |
|---|---|---|---|
| | * ನಿಘಂಟನ್ನು ಬಳಸಿಕೊಂಡು ಹೊಸಪದಗಳಿಗೆ ಸಮಾನಾರ್ಥಕ ಪದಗಳನ್ನು ಹುಡುಕಿಸುವ ಚಟುವಟಿಕೆ.<br>* ವಿದ್ಯಾರ್ಥಿಗಳು ಮೌನವಾಗಿ ಓದಿ, ಪದ್ಯವನ್ನು ಅರ್ಥೈಸಿಕೊಳ್ಳುವ ಚಟುವಟಿಕೆ.<br>* ವಿವರಣೆ – ಚರ್ಚೆ – ಪ್ರಶ್ನೋತ್ತರ ವಿಧಾನದಿಂದ ಪಾಠದ ಬೆಳವಣಿಗೆ<br>* ಉಪಘಟಕಗಳು :–<br>1. ಮೊದಲ ಚರಣದಲ್ಲಿ ಕವಿಗಳು "ಕಾಲಪಕ್ಷಿಯು ಚಲನಶೀಲವಾದುದು, ವಿಶ್ವವ್ಯಾಪಕವಾದುದು, ಬಹುವೇಗವಾದುದು ಹಾಗೂ ಪ್ರಗತಿಶೀಲವಾದುದು" ಎಂದು ವರ್ಣಿಸಿರುವುದರ ವಿವರಣೆ.<br>2. ಎರಡನೆಯ ಚರಣದಲ್ಲಿ ಕವಿಗಳು 'ಕಾಲಪಕ್ಷಿಯ ಭೌತಿಕ ರೂಪ'ವನ್ನು ಅಂದರೆ ಭೂತ, ವರ್ತಮಾನ ಹಾಗೂ ಭವಿಷ್ಯತ್ ಕಾಲದ ಚಲನೆಯನ್ನು ಕುರಿತು ವರ್ಣಿಸಿರುವುದರ ವಿವರಣೆ.<br>3. ಮೂರನೆಯ ಚರಣದಲ್ಲಿ ಕವಿಗಳು ಕಾಲಪಕ್ಷಿಯ ತರತಮರಹಿತವಾದ ಸಮದೃಷ್ಟಿಯನ್ನು ಕುರಿತು ವರ್ಣಿಸಿರುವುದರ ವಿವರಣೆ.<br>4. ನಾಲ್ಕನೆಯ ಚರಣದಲ್ಲಿ ಕವಿಗಳು ಕಾಲಚಕ್ರದಲ್ಲಿ ನಡೆದಿರುವ ಭೂಮಂಡಲದ ರಾಜಕೀಯ ಹಾಗೂ ಪ್ರಾಕೃತಿಕ ಬದಲಾವಣೆಗಳನ್ನು ಕುರಿತು ವರ್ಣಿಸಿರುವುದರ ವಿವರಣೆ.<br>5. ಐದನೆಯ ಚರಣದಲ್ಲಿ ಕವಿಗಳು ಕಾಲಪಕ್ಷಿಯು ಯುಗಯುಗದಲ್ಲೂ ಜನರಿಗೆ ಚೈತನ್ಯವನ್ನು ತುಂಬಿ ಮುಂದಿನ ಜನಾಂಗವನ್ನು ಹರಸುತ್ತಿದೆ ಎಂದು ವರ್ಣಿಸಿರುವುದರ ವಿವರಣೆ.<br>6. ಅವ್ಯಯಗಳು ಹಾಗೂ ವಿಧಗಳನ್ನು ಪರಿಚಯಿಸುವುದು. | * ಕನ್ನಡ–ಕನ್ನಡ ನಿಘಂಟು<br>* 'ಹಕ್ಕಿ ಹಾರುತಿದೆ ನೋಡಿದಿರಾ?' ಪದ್ಯದ ಧ್ವನಿಸುರುಳಿ<br>* ಅವ್ಯಯಗಳ ಪಟ್ಟಿ | ಪದ್ಯದ ಆಕರ ಕೃತಿ ಯಾವುದು?<br>5. ದ. ರಾ. ಬೇಂದ್ರೆ ಅವರ ಕಾವ್ಯನಾಮ ಯಾವುದು?<br>6. 'ಗಾವುದ' ಪದದ ಅರ್ಥವೇನು?<br>7. 'ಮನ್ವಂತರ' ಪದದ ಅರ್ಥವೇನು?<br>8. 'ಎವೆ' ಪದದ ಅರ್ಥವೇನು?<br>9. 'ಚಿಕ್ಕೆಯ ಮಾಲೆ' ಎಂದರೇನು?<br>10. ಹಕ್ಕಿಯು ಯಾವ ವೇಗದಲ್ಲಿ ಹಾರುತಿದೆ?<br>11. ಕಾಲಪಕ್ಷಿಯು ವಿಶ್ವವ್ಯಾಪಕವಾದುದು ಹೇಗೆ?<br>12. ಹಕ್ಕಿಯು ಎಷ್ಟು ಹೊತ್ತಿನೊಳಗೆ ಗಾವುದ ಗಾವುದ ಮುಂದೆ ಸಾಗಿರುತ್ತದೆ?<br>13. ಹಕ್ಕಿಯ ಗರಿಗಳಲ್ಲಿ ಯಾವ ಯಾವ ಬಣ್ಣಗಳಿವೆ?<br>14. ಭೂತಕಾಲವನ್ನು ಸಂಕೇತಿಸುವ ಬಣ್ಣಗಳು ಯಾವುವು?<br>15. ಹಕ್ಕಿಯ ಕಣ್ಣುಗಳು ಯಾವುವು?<br>16. ಕಾಲಪಕ್ಷಿಯು ಅನಂತವಾದುದು ಎಂಬುದನ್ನು ಕವಿ ಹೇಗೆ ಹೇಳಿದ್ದಾರೆ?<br>17. ಹಕ್ಕಿಯು ಯಾರ ನೆತ್ತಿಯನ್ನು ಕುಕ್ಕಿದೆ?<br>18. ಕಾಲಪಕ್ಷಿಯು ಯಾವುದನ್ನು ತೇಲಿಸಿ ಮುಳುಗಿಸಿದೆ?<br>19. ಹಕ್ಕಿಯು ಯಾರನ್ನು ಹರಸಿದೆ?<br>20. ಕಾಲಪಕ್ಷಿಯು ಯಾವುದರ ಭಾಗ್ಯವನ್ನು ತೆರೆಸಿದೆ?<br>21. ಕಾಲಪಕ್ಷಿಯು ಯಾವುದರ ಹಣೆಬರೆಹವನ್ನು ಒರಸಿದೆ?<br>22. ಅವ್ಯಯ ಎಂದರೇನು?<br>23. ಅವ್ಯಯದಲ್ಲಿ ಎಷ್ಟು ವಿಧಗಳಿವೆ?<br>24. ಸಾಮಾನ್ಯ ಅವ್ಯಯಕ್ಕೆ ಉದಾಹರಣೆ ಕೊಡಿ. |
| ಅನ್ವಯ ಚಟುವಟಿಕೆ | 1. ಪದ್ಯವನ್ನು ರಾಗವಾಗಿ ಹಾಡಿಸುವುದು.<br>2. ಪದ್ಯದ ಸಾರಾಂಶವನ್ನು ಬರೆಸುವುದು.<br>3. ಪದ್ಯದಲ್ಲಿ ಬರುವ ಸರಳ ವ್ಯಾಕರಣಾಂಶಗಳನ್ನು ಗುರುತಿಸುವುದು | * ಪಠ್ಯಪುಸ್ತಕ | 1. 'ಸೂರ್ಯಚಂದ್ರ' ಯಾವ ವ್ಯಾಕರಣಾಂಶಕ್ಕೆ ಉದಾಹರಣೆ ಆಗಿದೆ?<br>2. 'ಹೊಸಗಾಲ' ಪದದಲ್ಲಿ ಆಗಿರುವ ಸಂಧಿ ಯಾವುದು? |
| ಮೌಲ್ಯಮಾಪನ ಚಟುವಟಿಕೆ | * ಹಿಮ್ಮಾಹಿತಿ<br>* ಗೃಹಪಾಠ<br>* ಅಭ್ಯಾಸದ ಚಟುವಟಿಕೆಗಳು<br>* ನಿಯೋಜಿತ ಚಟುವಟಿಕೆಗಳು<br>* ಘಟಕ ಪರೀಕ್ಷೆ | * ಪ್ರಶ್ನಾವಳಿ<br>* ಪ್ರಶ್ನಾವಳಿ<br>* ಪಠ್ಯಪುಸ್ತಕ<br>* ಮಾಹಿತಿ ಸಂಗ್ರಹ<br>* ಪ್ರಶ್ನಾವಳಿ | * ಮೌಖಿಕ ಪರೀಕ್ಷೆ<br>* ಅವಲೋಕನ<br>* ಅವಲೋಕನ<br>* ಅವಲೋಕನ<br>* ಲಿಖಿತ ಪರೀಕ್ಷೆ |

ಶಿಕ್ಷಕರ ಸಹಿ                                                  ಮುಖ್ಯಶಿಕ್ಷಕರ ಸಹಿ

| ಪ್ರಥಮ ಭಾಷೆ ಕನ್ನಡ | ಘಟಕ – 5 | 10 ನೆಯ ತರಗತಿ |
|---|---|---|
| ಗದ್ಯಪಾಠ – 3 | ಜೀವನದೃಷ್ಟಿ | ಲೇಖಕರು :– ವಿ. ಕೃ. ಗೋಕಾಕ್ |

ಕಲಿಕೆಗೆ ಬೇಕಾದ ಅವಧಿಗಳು : ಪ್ರಾರಂಭದ ದಿನಾಂಕ :

ಮುಕ್ತಾಯದ ದಿನಾಂಕ :

ಕಲಿಕಾಂಶಗಳು :
1. ವಿ. ಕೃ. ಗೋಕಾಕ್ ಅವರ ಪರಿಚಯ ಮಾಡುವರು ಹಾಗೂ ಪಾಠದ ಆಶಯವನ್ನು ತಿಳಿಯುವರು.
2. ವೈಚಾರಿಕ ಪ್ರಬಂಧದ ಲಕ್ಷಣ ತಿಳಿದು, ಪ್ರಮುಖ ವೈಚಾರಿಕ ಪ್ರಬಂಧ ಲೇಖಕರನ್ನು ಹೆಸರಿಸುವರು.
3. ಗದ್ಯಪಾಠದಲ್ಲಿ ಬಂದಿರುವ ಹೊಸಪದಗಳನ್ನು ಅರ್ಥೈಸಿಕೊಳ್ಳುವರು.
4. ಶ್ರೀಸಾಮಾನ್ಯನಿಗೂ ಸಾಧಕನಿಗೂ ಇರುವ ಮನೋಭಾವಗಳನ್ನು ಕುರಿತು ಚರ್ಚಿಸುವರು.
5. "ತನ್ನಂತೆ ಪರರ ಬಗೆದೊಡೆ ಕೈಲಾಸ ಬಿನ್ನಾಣಮಕ್ಕು" ಎಂಬ ಸರ್ವಜ್ಞನ ನುಡಿಯನ್ನು ವಿವರಿಸುವರು.
6. "ಅಂತರ್ಜೀವಿಗೆ ಉಳಿದವರ ಯೋಗಕ್ಷೇಮವನ್ನು ನೋಡಿಕೊಳ್ಳುವುದು ಒಂದು ದೊಡ್ಡ ಸಮಸ್ಯೆಯಾಗುತ್ತದೆ" ಎಂಬ ವಿಷಯವನ್ನು ಕುರಿತು ವಿವರಿಸುವರು.
7. ಅಂತರ್ಜೀವಿಯ ಹಾಗೂ ಸಮಾಜದ ಕರ್ತವ್ಯಗಳನ್ನು ವಿವರಿಸುವರು.
8. "ಸ್ವಾನುಭೂತಿ ಹಾಗೂ ಸಹಾನುಭೂತಿಗಳು ಜೀವನರಥದ ಎರಡು ಚಕ್ರಗಳು" ಎಂಬುದನ್ನು ಅರ್ಥೈಸುವರು.
9. ಕ್ರಿಯಾಪದದ ಕಾಲರೂಪಗಳನ್ನು ಉದಾಹರಣೆಗಳ ಸಹಿತ ವಿವರಿಸುವರು.
10. ಅಭ್ಯಾಸ ಪುಸ್ತಕದ ಪ್ರಶ್ನೆಗಳಿಗೆ ಉತ್ತರಿಸುವರು.

| ಹಂತಗಳು | ಕಲಿಕೆಯನ್ನು ಅನುಕೂಲಿಸುವ ಚಟುವಟಿಕೆಗಳು | ಬಳಸುವ ಕಲಿಕಾ ಸಾಮಗ್ರಿಗಳು | ಮೌಲ್ಯಮಾಪನದ ಪ್ರಶ್ನೆಗಳು |
|---|---|---|---|
| ಪ್ರೇರಣಾ ಚಟುವಟಿಕೆ | * ಕನ್ನಡದ ಪ್ರಸಿದ್ಧ ವೈಚಾರಿಕ ಪ್ರಬಂಧ ಲೇಖಕರನ್ನು ಪರಿಚಯಿಸುವುದು.<br>* ವೈಚಾರಿಕ ಪ್ರಬಂಧದ ಸಾಮಾನ್ಯ ಗುಣಲಕ್ಷಣಗಳನ್ನು ತಿಳಿಸುವುದು. | * ಕನ್ನಡ ವಿಷಯ ವಿಶ್ವಕೋಶ | 1. 'ದೇವರು' ವೈಚಾರಿಕ ಪ್ರಬಂಧ ಸಂಕಲನ ಯಾರ ಕೃತಿಯಾಗಿದೆ?<br>2. ವೈಚಾರಿಕ ಪ್ರಬಂಧದ ಸಾಮಾನ್ಯ ಲಕ್ಷಣಗಳೇನು? |
| ಕಲಿಕಾ ಚಟುವಟಿಕೆ | * ಪ್ರಶ್ನೋತ್ತರ / ಸಂದರ್ಶನ ವಿಧಾನದಿಂದ ವಿ. ಕೃ. ಗೋಕಾಕ್ ಅವರನ್ನು ಪರಿಚಯಿಸುವ ಚಟುವಟಿಕೆ.<br>* ಉಪಾಧ್ಯಾಯರು ಪಾಠವನ್ನು ಓದುವುದು.<br>* ಉಪಾಧ್ಯಾಯರ ಓದನ್ನು ಅನುಸರಿಸಿ ವಿದ್ಯಾರ್ಥಿಗಳು ಪಾಠವನ್ನು ಓದುವ ಚಟುವಟಿಕೆ.<br>* ನಿಘಂಟನ್ನು ಬಳಸಿಕೊಂಡು ಹೊಸಪದಗಳಿಗೆ ಸಮಾನಾರ್ಥಕ ಪದಗಳನ್ನು ಹುಡುಕಿಸುವ ಚಟುವಟಿಕೆ.<br>* ವಿದ್ಯಾರ್ಥಿಗಳು ಪಾಠವನ್ನು ಮೌನವಾಗಿ ಓದಿ, ಅರ್ಥೈಸಿಕೊಳ್ಳುವ ಚಟುವಟಿಕೆ.<br>* ವಿವರಣೆ – ಚರ್ಚೆ – ಪ್ರಶ್ನೋತ್ತರ ವಿಧಾನದಿಂದ ಪಾಠದ ಬೆಳವಣಿಗೆ<br>* ಉಪಘಟಕಗಳು :–<br>1. "ತನ್ನಂತೆ ಪರರ ಬಗೆದೊಡೆ ಕೈಲಾಸ ಬಿನ್ನಾಣವಕ್ಕು" ಎಂಬ ಸರ್ವಜ್ಞನ ನುಡಿ. "ಆತ್ಮಾನಾಂ ಸರ್ವ ಭೂತೇಷು; ಸರ್ವ | * ವಿ. ಕೃ. ಗೋಕಾಕ್ ಅವರ ಭಾವಚಿತ್ರ<br>* ವಿ. ಕೃ. ಗೋಕಾಕ್ ಅವರ ಸಾಕ್ಷ್ಯಚಿತ್ರ<br>* ಪಠ್ಯಪುಸ್ತಕ<br>* ಕನ್ನಡ–ಕನ್ನಡ ನಿಘಂಟು<br>* ಬರ್ನ್ಸ್ ಕವಿಯ ಭಾವಚಿತ್ರ.<br>* ಸರ್ವಜ್ಞನ ಕಾಲ್ಪನಿಕ ಚಿತ್ರ<br>* ಭಗವದ್ಗೀತೆ ಪುಸ್ತಕ | 1. ವಿ. ಕೃ. ಗೋಕಾಕ್ ಅವರ ಕಾಲ ಮತ್ತು ಸ್ಥಳ ತಿಳಿಸಿ.<br>2. ವಿ. ಕೃ. ಗೋಕಾಕ್ ಅವರ ಕೃತಿಗಳನ್ನು ಹೆಸರಿಸಿ.<br>3. ವಿ. ಕೃ. ಗೋಕಾಕ್ ಅವರಿಗೆ ದೊರೆತ ಪ್ರಶಸ್ತಿಗಳನ್ನು ಪಟ್ಟಿ ಮಾಡಿ.<br>4. 'ಜೀವನದೃಷ್ಟಿ' ಗದ್ಯಪಾಠದ ಆಕರ ಕೃತಿ ಯಾವುದು?<br>5. ವಿ. ಕೃ. ಗೋಕಾಕ್ ಅವರ ಕಾವ್ಯನಾಮ ಯಾವುದು?<br>6. 'ಸ್ವಾನುಭೂತಿ'ಪದದ ಅರ್ಥವೇನು?<br>7. 'ಪರಾಂತಃಕರಣ' ಪದದ ಅರ್ಥವೇನು?<br>8. 'ಮೊಗಸಾಲೆ' ಪದದ ತತ್ಸಮ ರೂಪವೇನು?<br>9. ಬರ್ನ್ಸ್ ಏನೆಂದು ಹೇಳುತ್ತಾನೆ?<br>10. ಅಂತರ್ಜೀವಿಗೆ ಉಳಿದವರ ಯೋಗಕ್ಷೇಮ ನೋಡಿಕೊಳ್ಳುವುದು ಒಂದು ದೊಡ್ಡ ಸಮಸೆಯಾಗುತ್ತದೆ ಏಕೆ? |

| | | | |
|---|---|---|---|
| | ಭೂತಾನಿಚಾತ್ಮನಿ" ಎಂಬ ಭಗವದ್ಗೀತೆ ನುಡಿ. ಅಂತರ್ಜೀವಿಗೆ ಉಳಿದವರ ಯೋಗಕ್ಷೇಮ ನೋಡಿಕೊಳ್ಳುವುದು ಒಂದು ದೊಡ್ಡ ಸಮಸ್ಯೆ. ಕಲೋಪಾಸಕನ ಬಗೆಗೆ ಹಿರಿಯ ಸಾಹಿತಿ ಹೇಳಿದ ಮಾತುಗಳು.<br>2. ಕಲೋಪಾಸಕನ ಕರ್ತವ್ಯಗಳು, ಸಮಾಜದ ಕರ್ತವ್ಯಗಳು, ಸಾಧಕನ ಕರ್ತವ್ಯಗಳು ಹಾಗೂ ಅಂತರ್ಜೀವಿಯ ಕರ್ತವ್ಯಗಳು.<br>3. ಗೃಹಸ್ಥಾಶ್ರಮದ ಮಹತ್ತ್ವ.<br>ಕಲೋಪಾಸಕ ಮತ್ತು ಅಂತರ್ಜೀವಿಗಳು ತಿಳಿದುಕೊಳ್ಳಬೇಕಾದ ಸತ್ಯಗಳು, ವ್ಯಾವಹಾರಿಕ ಜಾಣ್ಮೆ ಹಾಗೂ ಕರ್ಮ ಕುಶಲತೆ, ಸ್ವಾನುಭೂತಿ ಮತ್ತು ಸಹಾನುಭೂತಿಗಳ ವಿವರಣೆ, ಸಹಾನುಭೂತಿಗಾಗಿ ತೆರೆದಿರಬೇಕಾದ ಎರಡು ಕಣ್ಣುಗಳು. ಒಳಗಣ್ಣಿನ ಮಹತ್ತ್ವ.<br>4. ಕ್ರಿಯಾಪದದ ಕಾಲರೂಪಗಳ ಪರಿಚಯ.<br>ಧಾತುಗಳು<br>ಕಾಲಸೂಚಕ ಪ್ರತ್ಯಯಗಳು<br>ಆಖ್ಯಾತ ಪ್ರತ್ಯಯಗಳು<br>ಪುರುಷ, ವಚನ, ಲಿಂಗಗಳಲ್ಲಿ ಉಂಟಾಗುವ ಕ್ರಿಯಾರೂಪಗಳು.<br>5. ವ್ಯಾವಹಾರಿಕ ಪತ್ರಲೇಖನ (ಮುಂದುವರಿದುದು) | * ವ್ಯಾಕರಣಾಂಶಗಳ ತೂಗುಪಟ. | 11. ಕಲೋಪಾಸಕನ ಬಗೆಗೆ ಒಬ್ಬ ಹಿರಿಯ ಸಾಹಿತಿಯು ಹೇಳಿದ ಮಾತುಗಳಾವುವು?<br>12. ಕಲೋಪಾಸಕನ ಕರ್ತವ್ಯಗಳೇನು?<br>13. ಸಮಾಜದ ಕರ್ತವ್ಯಗಳೇನು?<br>14. ಸಾಧಕನ ಕರ್ತವ್ಯಗಳೇನು?<br>15. ಅಂತರ್ಜೀವಿಯ ಕರ್ತವ್ಯಗಳೇನು?<br>16. ಕಲೋಪಾಸಕ ಮತ್ತು ಅಂತರ್ಜೀವಿಗಳು ಅರಿಯ ಬೇಕಾದ ಮಾತುಗಳಾವುವು?<br>17. ಸ್ವಾನುಭೂತಿ ಮತ್ತು ಸಹಾನುಭೂತಿ ಎಂದರೇನು?<br>18. ಧಾತು ಎಂದರೇನು?<br>19. ಭೂತಕಾಲ ಸೂಚಕ ಪ್ರತ್ಯಯ ಯಾವುದು?<br>20. ವರ್ತಮಾನ ಕಾಲ ಸೂಚಕ ಪ್ರತ್ಯಯ ಯಾವುದು?<br>21. ಭವಿಷ್ಯತ್ಕಾಲ ಸೂಚಕ ಪ್ರತ್ಯಯ ಯಾವುದು? |
| ಅನ್ವಯ ಚಟುವಟಿಕೆ | 1. ಜೀವನ ಮೌಲ್ಯಗಳು ಯಾವುವು? ವಿವರಿಸಿ.<br>2. 'ವ್ಯಕ್ತಿತ್ವ ನಿರ್ಮಾಣದಲ್ಲಿ ಮೌಲ್ಯಗಳ ಪಾತ್ರ' ಕುರಿತು ಚರ್ಚೆ.<br>3. ಪಾಠದಲ್ಲಿ ಬರುವ ಸರಳ ವ್ಯಾಕರಣಾಂಶಗಳನ್ನು ಗುರುತಿಸಿ, ವಿವರಿಸಿ. | * ಪಠ್ಯಪುಸ್ತಕ | 1. 'ಗೃಹಸ್ಥಾಶ್ರಮ' ಪದದಲ್ಲಿ ಆಗಿರುವ ಸಂಧಿ ಯಾವುದು?<br>2. 'ಗತ್ಯಂತರ' ಪದದಲ್ಲಿ ಆಗಿರುವ ಸಂಧಿ ಯಾವುದು?<br>3. 'ದಾತೃ' ಪದದ ತದ್ಭವ ರೂಪವೇನು? |
| ಮೌಲ್ಯಮಾಪನ ಚಟುವಟಿಕೆ | * ಹಿಮ್ಮಾಹಿತಿ<br>* ಗೃಹಪಾಠ<br>* ಅಭ್ಯಾಸದ ಚಟುವಟಿಕೆಗಳು<br>* ನಿಯೋಜಿತ ಚಟುವಟಿಕೆಗಳು<br>* ಘಟಕ ಪರೀಕ್ಷೆ | * ಪ್ರಶ್ನಾವಳಿ<br>* ಪ್ರಶ್ನಾವಳಿ<br>* ಪಠ್ಯಪುಸ್ತಕ<br>* ಮಾಹಿತಿ ಸಂಗ್ರಹ<br>* ಪ್ರಶ್ನಾವಳಿ | * ಮೌಖಿಕ ಪರೀಕ್ಷೆ<br>* ಅವಲೋಕನ<br>* ಅವಲೋಕನ<br>* ಅವಲೋಕನ<br>* ಲಿಖಿತ ಪರೀಕ್ಷೆ |

**ಶಿಕ್ಷಕರ ಸಹಿ** **ಮುಖ್ಯಶಿಕ್ಷಕರ ಸಹಿ**

ಕಲಿಕೆಗೆ ಬೇಕಾದ ಅವಧಿಗಳು : ಪ್ರಾರಂಭದ ದಿನಾಂಕ :

ಮುಕ್ತಾಯದ ದಿನಾಂಕ :

ಕಲಿಕಾಂಶಗಳು :
1. ಜನಪದ ಸಾಹಿತ್ಯ ಪ್ರಕಾರಗಳ ಪರಿಚಯ ಮಾಡುವರು ಹಾಗೂ ಪದ್ಯದ ಆಶಯ ತಿಳಿಯುವರು.
2. ಲಾವಣಿಗಳ ಲಕ್ಷಣಗಳನ್ನು ತಿಳಿಯುವರು ಹಾಗೂ ಕರ್ನಾಟಕದ ಪ್ರಸಿದ್ಧ ಲಾವಣಿಗಳನ್ನು ಹೆಸರಿಸುವರು.
3. ಹಲಗಲಿ ಬೇಡರ ದಂಗೆಗೆ ಕಾರಣವಾದ ಅಂಶಗಳನ್ನು ಕುರಿತು ಚರ್ಚಿಸುವರು.
4. ಪದ್ಯಪಾಠದಲ್ಲಿ ಬಂದಿರುವ ಹೊಸಪದಗಳನ್ನು ಅರ್ಥೈಸಿಕೊಳ್ಳುವರು.
5. ಹಲಗಲಿಯ ಬೇಡರು ಒಂದೆಡೆಯಲ್ಲಿ ಕಲೆತು ಕೈಗೊಂಡ ತೀರ್ಮಾನವನ್ನು ಅರ್ಥೈಸುವರು.
6. ಬ್ರಿಟಿಷ್ ಸೈನಿಕರು ಹಲಗಲಿ ಬೇಡರ ಆಯುಧಗಳನ್ನು ಕಸಿದುಕೊಳ್ಳಲು ಮಾಡಿದ ಪಿತೂರಿಯ ಬಗ್ಗೆ ತಿಳಿಯುವರು.
7. ಹಲಗಲಿಯ ಬೇಡರು ಬ್ರಿಟಿಷ್‌ರೊಡನೆ ಹೋರಾಟ ಮಾಡಿದ ರೀತಿಯನ್ನು ವಿವರಿಸುವರು.
8. ಬ್ರಿಟಿಷ್ ಸೈನಿಕರು ಹಲಗಲಿಯ ಮೇಲೆ ದಂಡೆತ್ತಿ ಬಂದು ಲೂಟಿ ಮಾಡಿದ ಬಗ್ಗೆ ಚರ್ಚಿಸುವರು.
9. ಹಲಗಲಿಬೇಡರ ನಾಯಕರಾದ ಜಡಗ, ಹನುಮ, ಭೀಮ, ರಾಮ, ಬಾಲರ ಶೌರ್ಯವನ್ನು ಮೆಚ್ಚುವರು.
10. ಹಲಗಲಿಯು ಸರ್ವನಾಶವಾದ ಬಗೆಯನ್ನು ಲಾವಣಿಕಾರನ ಮಾತುಗಳಲ್ಲಿ ವಿವರಿಸುವರು.
11. ದೇಶ್ಯ ಮತ್ತು ಅನ್ಯದೇಶ್ಯ ಪದಗಳ ಬಗೆಗೆ ಪರಿಚಯ ಮಾಡಿಕೊಳ್ಳುವರು.
12. ತತ್ಸಮ– ತದ್ಭವಗಳನ್ನು ಪಟ್ಟಿ ಮಾಡುವರು.
13. ಅಭ್ಯಾಸ ಪುಸ್ತಕದ ಪ್ರಶ್ನೆಗಳಿಗೆ ಉತ್ತರಿಸುವರು.

| ಹಂತಗಳು | ಕಲಿಕೆಯನ್ನು ಅನುಕೂಲಿಸುವ ಚಟುವಟಿಕೆಗಳು | ಬಳಸುವ ಕಲಿಕಾ ಸಾಮಗ್ರಿಗಳು | ಮೌಲ್ಯಮಾಪನದ ಪ್ರಶ್ನೆಗಳು |
|---|---|---|---|
| ಪ್ರೇರಣಾ ಚಟುವಟಿಕೆ | * ಕನ್ನಡದ ಪ್ರಸಿದ್ಧ ಲಾವಣಿಗಳನ್ನು / ಜನಪದ ಗೀತೆಗಳನ್ನು ಕೇಳಿಸುವುದು / ಹಾಡಿಸುವುದು.<br>* ಜನಪದ ಸಾಹಿತ್ಯ ಪ್ರಕಾರಗಳನ್ನು / ಲಾವಣಿಗಳನ್ನು ಪರಿಚಯಿಸುವುದು. | * ಕನ್ನಡ ಭಾವಗೀತೆಗಳ ಧ್ವನಿಸುರುಳಿ<br>* ಕನ್ನಡ ವಿಷಯ ವಿಶ್ವಕೋಶ | 1. ಜನಪದ ಸಾಹಿತ್ಯ ಪ್ರಕಾರಗಳನ್ನು ಹೆಸರಿಸಿ.<br>2. ಲಾವಣಿ ಎಂದರೇನು?<br>3. ಕರ್ನಾಟಕದ ಪ್ರಸಿದ್ಧ ಲಾವಣಿಗಳನ್ನು ಹೆಸರಿಸಿ. |
| ಕಲಿಕಾ ಚಟುವಟಿಕೆ | * ಉಪಾಧ್ಯಾಯರು ಪದ್ಯವನ್ನು ಓದುವುದು.<br>* ಉಪಾಧ್ಯಾಯರ ಓದನ್ನು ಅನುಸರಿಸಿ ವಿದ್ಯಾರ್ಥಿಗಳು ಪದ್ಯವನ್ನು ಓದುವ ಚಟುವಟಿಕೆ.<br>* ನಿಘಂಟನ್ನು ಬಳಸಿಕೊಂಡು ಹೊಸಪದಗಳಿಗೆ ಸಮಾನಾರ್ಥಕ ಪದಗಳನ್ನು ಹುಡುಕಿಸುವ ಚಟುವಟಿಕೆ.<br>* ವಿದ್ಯಾರ್ಥಿಗಳು ಮೌನವಾಗಿ ಓದಿ, ಪದ್ಯವನ್ನು ಅರ್ಥೈಸಿಕೊಳ್ಳುವ ಚಟುವಟಿಕೆ.<br>* ವಿವರಣೆ – ಚರ್ಚೆ – ಪ್ರಶ್ನೋತ್ತರ ವಿಧಾನದಿಂದ ಪಾಠದ ಬೆಳವಣಿಗೆ<br>* <u>ಉಪಘಟಕಗಳು :–</u><br>1. ವಿಲಾತಿ ಸರ್ಕಾರ ಹುಕುಂ, ಹಲಗಲಿ ಬೇಡರ ರಹಸ್ಯ ಸಭೆ, ಕೈಗೊಂಡ ತೀರ್ಮಾನ. ಆಯುಧಗಳನ್ನು ಕಸೆದುಕೊಳ್ಳಲು ಬಂದ ಕಾರಕೂನನ ಮೇಲೆ ಹಲಗಲಿ ಬೇಡರ ದಾಳಿ.<br>2. ಬ್ರಿಟಿಷ್ ಅಧಿಕಾರಿಯು ಕೋಪಗೊಂಡ ಹಲಗಲಿಯ ಮೇಲೆ ದಾಳಿ ಮಾಡಲು ಸೈನ್ಯವನ್ನು ಕಳುಹಿಸಿದ್ದು, ಹಲಗಲಿ ಬೇಡರಿಂದ ಪ್ರತಿದಾಳಿ, ಹೆಬಲಕ್ ಸಾಹೇಬನ ಸಂಧಾನ, ಹೆಬಲಕನ ಮಾತನ್ನು ನಂಬದೆ ಹನುಮನು ಹೋರಾಟ ಮಾಡಲು ಕರೆ ನೀಡಿದ್ದು.<br>3. ಬ್ರಿಟಿಷ್ ಅಧಿಕಾರಿಯಿಂದ ಹಲಗಲಿಯನ್ನು ಲೂಟಿ | * ಹಲಗಲಿ ಬೇಡರ ಚಿತ್ರಗಳು<br>* ಪಠ್ಯಪುಸ್ತಕ<br>* ಕನ್ನಡ–ಕನ್ನಡ ನಿಘಂಟು<br>* 'ಹಲಗಲಿ ಬೇಡರು' ಪದ್ಯದ ಧ್ವನಿಸುರುಳಿ | 1. 'ಹಲಗಲಿ ಬೇಡರು' ಪದ್ಯದ ಆಕರ ಕೃತಿ ಯಾವುದು?<br>2. 'ವಿಲಾತಿ' ಪದದ ಅರ್ಥವೇನು?<br>3. 'ಕುಮಕಿ' ಪದದ ಅರ್ಥವೇನು?<br>4. 'ಮಸಲತ್ತ' ಪದದ ಅರ್ಥವೇನು?<br>5. 'ಕಾರಕೂನ' ಪದದ ಅರ್ಥವೇನು?<br>6. 'ಚಟೇಕಾರರು' ಎಂದರೆ ಯಾರು?<br>7. 'ಹೆಬಲಕ' ಎಂದರೆ ಯಾರು?<br>8. 'ಕಾರ ಸಾಹೇಬ' ಎಂದರೆ ಯಾರು?<br>9. ಕುಂಪಣಿ ಸರ್ಕಾರ ಕಳುಹಿಸಿದ ಹುಕುಂ ಏನು?<br>10. ಹಲಗಲಿ ಬೇಡರು ಸಭೆಯನ್ನು ಸೇರಿ ತೆಗೆದುಕೊಂಡ ತೀರ್ಮಾನ ಏನು?<br>11. ಬ್ರಿಟಿಷ್ ಅಧಿಕಾರಿ ದಂಡು ಬರುವಂತೆ ಕಾಗದ ಬರೆಯಲು ಕಾರಣವೇನು?<br>12. ಬ್ರಿಟಿಷ್ ಸೈನಿಕರು ಹಲಗಲಿಯ ಬೇಡರ ಮೇಲೆ ಹೇಗೆ ದಾಳಿ ಮಾಡಿದರು?<br>13. ಹೆಬಲಕ್ ಸಾಹೇಬನು ಹಲಗಲಿಯ ಬೇಡರಿಗೆ ಹೇಳಿದ ಬುದ್ಧಿಮಾತುಗಳೇನು?<br>14. ವೀರಾವೇಶದಿಂದ ಹೋರಾಡಿ ವೀರ ಮರಣವನ್ನು ಹೊಂದಿದ ಹಲಗಲಿ ಬೇಡರ ನಾಯಕರು ಯಾರು" ಹೆಸರಿಸಿ.<br>15. ಲಾವಣಿಕಾರನು ನೆನೆಯುವ ದೇವರು ಯಾರು? |

| | | | |
|---|---|---|---|
| | ಮಾಡುವಂತೆ ಸೈನಿಕರಿಗೆ ಆದೇಶವನ್ನು ನೀಡಿದ್ದು, ಜಡಗ, ರಾಮ, ಭೀಮ, ಹನುಮ, ಬಾಲರು ಬ್ರಿಟಿಷ್ ಸೈನ್ಯದೊಡನೆ ವೀರಾವೇಶದಿಂದ ಹೋರಾಡಿ ವೀರ ಮರಣ ಹೊಂದಿದ್ದು. ಬ್ರಿಟಿಷ್ ಸೈನಿಕರು ಹಲಗಲಿಯನ್ನು ಲೂಟಿ ಮಾಡಿ, ಬೆಂಕಿಯನ್ನು ಹಚ್ಚಿದ್ದು. ಹಲಗಲಿ ನಾಶದ ಬಗೆಗೆ ಲಾವಣಿಕಾರನ ಅಭಿಪ್ರಾಯ.<br>4. ದೇಶ್ಯ ಮತ್ತು ಅನ್ಯದೇಶ್ಯ ಪದಗಳ ಪರಿಚಯ.<br>5. ತತ್ಸಮ-ತದ್ಭವ ಪದಗಳ ಪರಿಚಯ | * ಅನ್ಯದೇಶ್ಯ – ದೇಶ್ಯ ಪದಗಳ ಪಟ್ಟಿ | 15. ಅನ್ಯದೇಶ ಪದಗಳು ಯಾವುವು?<br>16. ತತ್ಸಮ-ತದ್ಭವ ಪದಗಳು ಎಂದರೇನು? |
| ಅನ್ವಯ ಚಟುವಟಿಕೆ | 1. ಪದ್ಯವನ್ನು ರಾಗವಾಗಿ ಹಾಡಿಸುವುದು.<br>2. ಪದ್ಯದ ಸಾರಾಂಶವನ್ನು ಬರೆಸುವುದು.<br>3. ಪದ್ಯದಲ್ಲಿ ಬರುವ ಸರಳ ವ್ಯಾಕರಣಾಂಶಗಳನ್ನು ಗುರುತಿಸುವುದು | * ಪಠ್ಯಪುಸ್ತಕ | 1. 'ಇಸವಾಸ' ಪದದ ಗ್ರಾಂಥಿಕ ರೂಪವನ್ನು ತಿಳಿಸಿ.<br>2. 'ಮುಂಗೈ' ಪದದಲ್ಲಿ ಇರುವ ಸಮಾಸ ಯಾವುದು? |
| ಮೌಲ್ಯಮಾಪನ ಚಟುವಟಿಕೆ | * ಹಿಮ್ಮಾಹಿತಿ<br>* ಗೃಹಪಾಠ<br>* ಅಭ್ಯಾಸದ ಚಟುವಟಿಕೆಗಳು<br>* ನಿಯೋಜಿತ ಚಟುವಟಿಕೆಗಳು<br>* ಘಟಕ ಪರೀಕ್ಷೆ | * ಪ್ರಶ್ನಾವಳಿ<br>* ಪ್ರಶ್ನಾವಳಿ<br>* ಪಠ್ಯಪುಸ್ತಕ<br>* ಮಾಹಿತಿ ಸಂಗ್ರಹ<br>* ಪ್ರಶ್ನಾವಳಿ | * ಮೌಖಿಕ ಪರೀಕ್ಷೆ<br>* ಅವಲೋಕನ<br>* ಅವಲೋಕನ<br>* ಅವಲೋಕನ<br>* ಲಿಖಿತ ಪರೀಕ್ಷೆ |

ಶಿಕ್ಷಕರ ಸಹಿ　　　　　　　　　　ಮುಖ್ಯಶಿಕ್ಷಕರ ಸಹಿ

**ಪ್ರಥಮ ಭಾಷೆ ಕನ್ನಡ　　　ಘಟಕ – 7　　　10 ನೆಯ ತರಗತಿ**

**ಗದ್ಯಪಾಠ – 4　　　ಧರ್ಮಸಮದೃಷ್ಟಿ　　　– ಶಾಸನ**

ಕಲಿಕೆಗೆ ಬೇಕಾದ ಅವಧಿಗಳು :　　　　ಪ್ರಾರಂಭದ ದಿನಾಂಕ :

ಮುಕ್ತಾಯದ ದಿನಾಂಕ :

ಕಲಿಕಾಂಶಗಳು :
1. 'ಧರ್ಮಸಮದೃಷ್ಟಿ' ಶಾಸನ ರಚನಾ ಕಾಲ ಹಾಗೂ ಶಾಸನದ ಆಶಯವನ್ನು ತಿಳಿಯುವರು.
2. ಶಾಸನ ಸಾಹಿತ್ಯದ ಮಹತ್ತ್ವವನ್ನು ತಿಳಿದು, ಕನ್ನಡ ನಾಡಿನ ಪ್ರಸಿದ್ಧ ಶಾಸನಗಳನ್ನು ಹೆಸರಿಸುವರು.
3. ಶಾಸನದಲ್ಲಿ ಬಂದಿರುವ ಹೊಸಪದಗಳನ್ನು ಅರ್ಥೈಸಿಕೊಳ್ಳುವರು.

4. 'ಧರ್ಮಸಮದೃಷ್ಟಿ'ಯ ಮಹತ್ತ್ವವನ್ನು ಕುರಿತು ಚರ್ಚಿಸುವರು.
5. ರಾಮಾನುಜಾಚಾರ್ಯ ಮತ್ತು ಬುಕ್ಕರಾಯರನ್ನು ಪರಿಚಯಮಾಡುವರು.
6. ಬುಕ್ಕರಾಯನು ಎಲ್ಲ ಧರ್ಮ ಮತ್ತು ಜಾತಿಯವರ ಸಭೆಯನ್ನು ಕರೆಯಲು ಕಾರಣವಾದ ಅಂಶಗಳನ್ನು ವಿವರಿಸುವರು.
7. ಬುಕ್ಕರಾಯನು ಜೈನ ಧರ್ಮ ಮತ್ತು ಶ್ರೀವೈಷ್ಣವ ಧರ್ಮದವರ ನಡುವಿನ ಭಿನ್ನಾಭಿಪ್ರಾಯಗಳನ್ನು ಬಗೆಹರಿಸಿದ ರೀತಿಯನ್ನು ವಿವರಿಸುವರು.
8. ಜೈನ ಧರ್ಮದ ಸಂರಕ್ಷಣೆಗಾಗಿ ಬುಕ್ಕರಾಯನು ಮಾಡಿದ ಏರ್ಪಾಡುಗಳನ್ನು ಅರ್ಥೈಸುವರು.
9. ಲೇಖನ ಚಿಹ್ನೆಗಳ ಬಳಕೆ ಮಾಡುವ ವಿಧಾನವನ್ನು ಉದಾಹರಣೆಗಳ ಸಹಿತ ವಿವರಿಸುವರು.
10. ವಾಕ್ಯ ರಚನೆ ಮತ್ತು ವಿಧಗಳನ್ನು ಉದಾಹರಣೆಗಳ ಸಹಿತ ವಿವರಿಸುವರು.
11. ವ್ಯಾವಹಾರಿಕ ಪತ್ರ ರಚನಾ ವಿಧಾನವನ್ನು ಅರಿಯುವರು.
12. ಅಭ್ಯಾಸ ಪುಸ್ತಕದ ಪ್ರಶ್ನೆಗಳಿಗೆ ಉತ್ತರಿಸುವರು.

| ಹಂತಗಳು | ಕಲಿಕೆಯನ್ನು ಅನುಕೂಲಿಸುವ ಚಟುವಟಿಕೆಗಳು | ಬಳಸುವ ಕಲಿಕಾ ಸಾಮಗ್ರಿಗಳು | ಮೌಲ್ಯಮಾಪನದ ಪ್ರಶ್ನೆಗಳು |
| --- | --- | --- | --- |
| ಪ್ರೇರಣಾ ಚಟುವಟಿಕೆ | * ಶಾಸನಗಳ ಮಹತ್ತ್ವ ಮತ್ತು ವಿಧಗಳನ್ನು ಪರಿಚಯಿಸುವುದು.<br>* ಕನ್ನಡ ನಾಡಿನ ಪ್ರಸಿದ್ಧ ಶಾಸನಗಳನ್ನು ಪರಿಚಯಿಸುವುದು.<br>* ಕನ್ನಡದ ಮೊದಲ ಶಾಸನವಾದ ಹಲ್ಮಿಡಿ ಶಾಸನದ ಬಗ್ಗೆ ತಿಳಿಸುವುದು.<br>* ಕಪ್ಪೆ ಅರಭಟ್ಟನ ಶಾಸನದ ಮಹತ್ತ್ವವನ್ನು ತಿಳಿಸುವುದು. | * ಕನ್ನಡ ವಿಷಯ ವಿಶ್ವಕೋಶ<br>* ವಿವಿಧ ಶಾಸನಗಳ ಚಿತ್ರ ಮತ್ತು ವಿವರ | 1. ಶಾಸನ ಎಂದರೇನು?<br>2. ಶಾಸನದ ಪ್ರಮುಖ ವಿಧಗಳಾವುವು?<br>3. ದೊರೆತ ಕನ್ನಡದ ಮೊದಲ ಶಾಸನ ಯಾವುದು?<br>4. ಕಪ್ಪೆ ಅರಭಟ್ಟನ ಶಾಸನದಲ್ಲಿ ಕನ್ನಡಿಗನ ವರ್ಣನೆಯು ಹೇಗೆ ಮೂಡಿ ಬಂದಿದೆ? |
| ಕಲಿಕಾ ಚಟುವಟಿಕೆ | * ಪ್ರಶ್ನೋತ್ತರ / ಸಂದರ್ಶನ ವಿಧಾನದಿಂದ 'ಧರ್ಮಸಮದೃಷ್ಟಿ' ಶಾಸನ ರಚನಾ ಹಿನ್ನೆಲೆಯನ್ನು ಪರಿಚಯಿಸುವ ಚಟುವಟಿಕೆ.<br>* ಉಪಾಧ್ಯಾಯರು ಪಾಠವನ್ನು ಓದುವುದು.<br>* ಉಪಾಧ್ಯಾಯರ ಓದನ್ನು ಅನುಸರಿಸಿ ವಿದ್ಯಾರ್ಥಿಗಳು ಪಾಠವನ್ನು ಓದುವ ಚಟುವಟಿಕೆ.<br>* ನಿಘಂಟನ್ನು ಬಳಸಿಕೊಂಡು ಹೊಸಪದಗಳಿಗೆ ಸಮಾನಾರ್ಥಕ ಪದಗಳನ್ನು ಹುಡುಕಿಸುವ ಚಟುವಟಿಕೆ.<br>* ವಿದ್ಯಾರ್ಥಿಗಳು ಪಾಠವನ್ನು ಮೌನವಾಗಿ ಓದಿ, ಅರ್ಥೈಸಿಕೊಳ್ಳುವ ಚಟುವಟಿಕೆ.<br>* ವಿವರಣೆ – ಚರ್ಚೆ – ಪ್ರಶ್ನೋತ್ತರ ವಿಧಾನದಿಂದ ಪಾಠದ ಬೆಳವಣಿಗೆ<br><br>* ಉಪಘಟಕಗಳು :–<br>1. ಶ್ರೀರಾಮಾನುಜಾಚಾರ್ಯ ಪರಿಚಯ, ಬುಕ್ಕರಾಯನ ಪರಿಚಯ, ಜೈನರಿಗೂ ಶ್ರೀವೈಷ್ಣವರಿಗೂ ನಡೆದ ಸಂವಾದದ ವಿವರಣೆ, ವಿವಾದ ಬಗೆಹರಿಸಲು ಎಲ್ಲ ಧರ್ಮದ, ಎಲ್ಲ ಜಾತಿಯ ಪ್ರಮುಖರನ್ನು ಸಭೆಗೆ ಆಹ್ವಾನ ನೀಡುವುದು.<br>2. ಸಭೆಯಲ್ಲಿ ಕೈಗೊಂಡ ತೀರ್ಮಾನ, ಬುಕ್ಕರಾಯನು ಸರ್ವಧರ್ಮೀಯರಿಗೂ ಹೇಳಿದ ಬುದ್ಧಿಮಾತು, ಜೈನಧರ್ಮದ ಸಂರಕ್ಷಣೆಗಾಗಿ ಮಾಡಿದ ಏರ್ಪಾಡುಗಳು, ಶಾಸನ ಹಾಕಿಸುವಂತೆ ನೀಡಿದ ಸೂಚನೆ, ರಾಜಾಜ್ಞೆಯನ್ನು ಮೀರಿದವರಿಗೆ ರಾಜದ್ರೋಹಿಗಳು ಎಂದು ಶಿಕ್ಷೆಯನ್ನು ನೀಡುವ ತೀರ್ಮಾನ.<br>3. ಲೇಖನ ಚಿಹ್ನೆಗಳ ಬಳಕೆಯ ವಿಧಾನವನ್ನು | * ಕನ್ನಡ ವಿಷಯ ವಿಶ್ವಕೋಶ<br><br>* ಶಾಸನ ಸಾಹಿತ್ಯ ಒಂದು ಅಧ್ಯಯನ<br><br>* ಪಠ್ಯ ಪುಸ್ತಕ<br><br>* ಕನ್ನಡ ರತ್ನಕೋಶ<br><br>* ಶ್ರೀರಾಮಾನುಜಾ ಚಾರ್ಯರ ಕಾಲ್ಪನಿಕ ಚಿತ್ರ | 1. 'ಧರ್ಮಸಮದೃಷ್ಟಿ' ಶಾಸನ ರಚನಾ ಕಾಲ ಮತ್ತು ಅದು ಇರುವ ಸ್ಥಳ ತಿಳಿಸಿ.<br>2. 'ಧರ್ಮಸಮದೃಷ್ಟಿ' ಶಾಸನದ ಆಕರ ಕೃತಿ ಯಾವುದು?<br>3. ಈ ಶಾಸನವು ಬುಕ್ಕರಾಯನ ಯಾವ ದೃಷ್ಟಿಕೋನವನ್ನು ಪ್ರತಿಬಿಂಬಿಸುತ್ತದೆ?<br>4. ಬುಕ್ಕರಾಯನ ಕಾಲದಲ್ಲಿ ಯಾವ ಯಾವ ಧರ್ಮದವರ ನಡುವೆ ಕಲಹ ಉಂಟಾಗಿತ್ತು?<br>5. 'ಪಾಷಂಡ' ಪದದ ಅರ್ಥವೇನು?<br>6. 'ಭವ್ಯಜನಂಗಳು' ಎಂದರೆ ಯಾರು?<br>7. 'ಭಕ್ತರು' ಎಂದರೆ ಯಾರು?<br>8. ಯತಿರಾಜ ರಾಜ ಎಂದು ಕರೆಯಿಸಿಕೊಂಡವರು ಯಾರು?<br>9. ಬುಕ್ಕರಾಯನಿಗೆ ಇದ್ದ ಬಿರುದುಗಳು ಯಾವುವು?<br>10. ಬುಕ್ಕರಾಯನು ಸಂಧಾನ ಸಭೆಗೆ ಯಾರನ್ನೆಲ್ಲ ಆಹ್ವಾನಿಸಿದ್ದನು?<br>11. ಶ್ರೀವೈಷ್ಣವರ ಕೈಯಲ್ಲಿ ಜೈನರ ಕೈಯನ್ನು ಇಟ್ಟು ಬುಕ್ಕರಾಯನು ಹೇಳಿದ ಮಾತುಗಳಾವುವು?<br>12. ಜೈನರು ಬಾಗಿಲು ಗಟ್ಟಳೆಯಾಗಿ ಎಷ್ಟು ಹಣ ನೀಡಬೇಕಾಗಿತ್ತು?<br>13. ವೈಷ್ಣವ ಅಂಗರಕ್ಷೆ ಎಂದರೇನು?<br>14. ರಾಜಾಜ್ಞೆಯನ್ನು ಮೀರಿದವನನ್ನು ಏನೆಂದು ಕರೆಯಲಾಗುವುದು?<br>15. ಉದ್ಧರಣ ಚಿಹ್ನೆಯನ್ನು ಯಾವಾಗ ಬಳಸಬೇಕು?<br>16. ವಾಕ್ಯದ ಮೂರು ವಿಧಗಳಾವುವು?<br>17. ಸಂಯೋಜಿತ ವಾಕ್ಯ ಎಂದರೇನು? |

| | | | |
|---|---|---|---|
| | ಉದಾಹರಣೆಗಳ ಸಹಿತ ವಿವರಿಸುವುದು.<br>4. ವಾಕ್ಯರಚನೆ ಮತ್ತು ವಿಧಗಳನ್ನು ಉದಾಹರಣೆಗಳ ಸಹಿತ ವಿವರಿಸುವುದು.<br>1. ಸಾಮಾನ್ಯವಾಕ್ಯ<br>2. ಸಂಯೋಜಿತ ವಾಕ್ಯ<br>3. ಮಿಶ್ರವಾಕ್ಯ<br>5. ವ್ಯಾವಹಾರಿಕ ಪತ್ರಲೇಖನ (ಮುಂದುವರಿದುದು) | * ಲೇಖನ ಚಿಹ್ನೆಗಳ ತೂಗುಪಟ | 18. ಮಿಶ್ರವಾಕ್ಯಕ್ಕೆ ಒಂದು ಉದಾಹರಣೆಯನ್ನು ಕೊಡಿ.<br>19. ಸಾಮಾನ್ಯವಾಕ್ಯ ಎಂದರೇನು? |
| ಅನ್ವಯ ಚಟುವಟಿಕೆ | 1. ಶಾಸನದ ಮಹತ್ತ್ವವನ್ನು ತಿಳಿಸಿ ಪ್ರಬಂಧ ಬರೆಯಿರಿ.<br>2. ಹಲ್ಮಿಡಿ ಶಾಸನವನ್ನು ಪರಿಚಯಿಸಿರಿ.<br>3. ಪಾಠದಲ್ಲಿ ಬರುವ ಸರಳ ವ್ಯಾಕರಣಾಂಶಗಳನ್ನು ಗುರುತಿಸಿ, ವಿವರಿಸಿ. | * ಪಠ್ಯಪುಸ್ತಕ | 1. 'ಸ್ವಸ್ತಿ' ಪದದಲ್ಲಿ ಆಗಿರುವ ಸಂಧಿ ಯಾವುದು?<br>2. 'ಚರಣಾಂಬುಜ' ಪದದಲ್ಲಿ ಆಗಿರುವ ಸಂಧಿ ಯಾವುದು?<br>3. 'ರಾಯ' ಪದದ ತತ್ಸಮ ರೂಪವೇನು? |
| ಮೌಲ್ಯಮಾಪನ ಚಟುವಟಿಕೆ | * ಹಿಮ್ಮಾಹಿತಿ<br>* ಗೃಹಪಾಠ<br>* ಅಭ್ಯಾಸದ ಚಟುವಟಿಕೆಗಳು<br>* ನಿಯೋಜಿತ ಚಟುವಟಿಕೆಗಳು<br>* ಘಟಕ ಪರೀಕ್ಷೆ | * ಪ್ರಶ್ನಾವಳಿ<br>* ಪ್ರಶ್ನಾವಳಿ<br>* ಪಠ್ಯಪುಸ್ತಕ<br>* ಮಾಹಿತಿ ಸಂಗ್ರಹ<br>* ಪ್ರಶ್ನಾವಳಿ | * ಮೌಖಿಕ ಪರೀಕ್ಷೆ<br>* ಅವಲೋಕನ<br>* ಅವಲೋಕನ<br>* ಅವಲೋಕನ<br>* ಲಿಖಿತ ಪರೀಕ್ಷೆ |

ಶಿಕ್ಷಕರ ಸಹಿ                                                    ಮುಖ್ಯಶಿಕ್ಷಕರ ಸಹಿ

**ಪ್ರಥಮ ಭಾಷೆ ಕನ್ನಡ          ಘಟಕ – 8          10 ನೆಯ ತರಗತಿ**

**ಪದ್ಯಪಾಠ – 4.          ವಚನ ಸೌರಭ          – ಜೇಡರ ದಾಸಿಮಯ್ಯ ಮತ್ತು ಬಸವಣ್ಣ**

ಕಲಿಕೆಗೆ ಬೇಕಾದ ಅವಧಿಗಳು :                    ಪ್ರಾರಂಭದ ದಿನಾಂಕ :

ಮುಕ್ತಾಯದ ದಿನಾಂಕ :

ಕಲಿಕಾಂಶಗಳು :
1. ವಚನಕಾರರಾದ ಜೇಡರ ದಾಸಿಮಯ್ಯ ಮತ್ತು ಬಸವಣ್ಣ ಅವರ ಪರಿಚಯ ಮಾಡುವರು ಹಾಗೂ ಪದ್ಯದ ಆಶಯ ತಿಳಿಯುವರು.
2. ವಚನ ಸಾಹಿತ್ಯದ ವಿಶೇಷತೆಗಳ ಬಗ್ಗೆ ಅರಿತು, ಪ್ರಮುಖ ವಚನಕಾರರನ್ನು ಹೆಸರಿಸುವರು.
3. ಹನ್ನೆರಡನೆಯ ಶತಮಾನದ ವಿಶೇಷ ಮಹತ್ತ್ವವನ್ನು ಕುರಿತು ಚರ್ಚಿಸುವರು.
4. ಪದ್ಯಪಾಠದಲ್ಲಿ ಬಂದಿರುವ ಹೊಸಪದಗಳನ್ನು ಅರ್ಥೈಸಿಕೊಳ್ಳುವರು.
5. ಸತಿ–ಪತಿಗಳ ಬಾಂಧವ್ಯದ ಬಗೆಗಿನ ಜೇಡರ ದಾಸಿಮಯ್ಯ ಅವರ ಅಭಿಪ್ರಾಯವನ್ನು ವಿವರಿಸುವರು.
6. ನಿಷ್ಠೆಯುಳ್ಳ ಭಕ್ತನ ಬಗೆಗಿನ ಜೇಡರ ದಾಸಿಮಯ್ಯ ಅವರ ಅಭಿಪ್ರಾಯವನ್ನು ತಿಳಿಯುವರು.
7. ಮಾನವನ ಮನಸ್ಸಿನ ಸ್ವಭಾವದ ಬಗೆಗಿನ ಬಸವಣ್ಣನವರ ಅಭಿಪ್ರಾಯವನ್ನು ವಿವರಿಸುವರು.
8. ಮನಶ್ಶುದ್ಧಿಯ ಮಹತ್ತ್ವವನ್ನು ಬಸವಣ್ಣನವರ ಮಾತಿನಲ್ಲಿ ವಿವರಿಸುವರು.
9. ನುಡಿ ಮತ್ತು ನಡೆಯ ಬಗೆಗಿನ ಬಸವಣ್ಣನವರ ಅಭಿಪ್ರಾಯವನ್ನು ವಿವರಿಸುವರು.
10. ಅಲಂಕಾರಗಳ ವಿಧಗಳನ್ನು ಪರಿಚಯ ಮಾಡಿಕೊಳ್ಳುವರು.
11. ಉಪಮಾಲಂಕಾರದ ಲಕ್ಷಣವನ್ನು ಉದಾಹರಣೆ ಸಹಿತ ತಿಳಿದುಕೊಳ್ಳುವರು.
12. ಅಭ್ಯಾಸ ಪುಸ್ತಕದ ಪ್ರಶ್ನೆಗಳಿಗೆ ಉತ್ತರಿಸುವರು.

| ಹಂತಗಳು | ಕಲಿಕೆಯನ್ನು ಅನುಕೂಲಿಸುವ ಚಟುವಟಿಕೆಗಳು | ಬಳಸುವ | ಮೌಲ್ಯಮಾಪನದ ಪ್ರಶ್ನೆಗಳು |
|---|---|---|---|

| | | ಕಲಿಕಾ ಸಾಮಗ್ರಿಗಳು | |
|---|---|---|---|
| ಪ್ರೇರಣಾ ಚಟುವಟಿಕೆ | * ಹನ್ನೆರಡನೆಯ ಶತಮಾನದ ಶರಣರ ಬಗೆಗೆ ತಿಳಿಸುವುದು.<br>* ವಚನ ಸಾಹಿತ್ಯದ ಮಹತ್ತ್ವವನ್ನು ಪರಿಚಯಿಸುವುದು.<br>* ಪ್ರಸಿದ್ಧ ವಚನಕಾರರ ಹೆಸರನ್ನು ಪರಿಚಯಿಸುವುದು.<br>* ಕನ್ನಡದ ಪ್ರಸಿದ್ಧ ವಚನಗಳನ್ನು ಕೇಳಿಸುವುದು / ಹಾಡಿಸುವುದು. | * ಕನ್ನಡ ಭಾವಗೀತೆಗಳ ಧ್ವನಿಸುರುಳಿ<br>* ಕನ್ನಡ ವಿಷಯ ವಿಶ್ವಕೋಶ<br>* ವಿವಿಧ ವಚನಕಾರರ ಕಾಲ್ಪನಿಕ ಚಿತ್ರಗಳು | 1. 'ವಚನ ಸಾಹಿತ್ಯ ಪ್ರಕಾರ' ಎಂದರೆ ಏನು?<br>2. ಹನ್ನೆರಡನೆಯ ಶತಮಾನದಲ್ಲಿ ವಚನ ಸಾಹಿತ್ಯ ಮೂಡಿಬರಲು ಕಾರಣವಾದ ಅಂಶಗಳು ಯಾವುವು?<br>2. ಹನ್ನೆರಡನೆಯ ಶತಮಾನದ ಪ್ರಮುಖ ಶರಣರನ್ನು ಹೆಸರಿಸಿ. |
| ಕಲಿಕಾ ಚಟುವಟಿಕೆ | * ಪ್ರಶ್ನೋತ್ತರ / ಸಂದರ್ಶನ ವಿಧಾನದಿಂದ ವಚನಕಾರರಾದ ಜೇಡರ ದಾಸಿಮಯ್ಯ ಮತ್ತು ಬಸವಣ್ಣ ಅವರನ್ನು ಪರಿಚಯಿಸುವ ಚಟುವಟಿಕೆ.<br>* ಉಪಾಧ್ಯಾಯರು ಪದ್ಯವನ್ನು ಓದುವುದು.<br>* ಉಪಾಧ್ಯಾಯರ ಓದನ್ನು ಅನುಸರಿಸಿ ವಿದ್ಯಾರ್ಥಿಗಳು ಪದ್ಯವನ್ನು ಓದುವ ಚಟುವಟಿಕೆ.<br>* ನಿಘಂಟನ್ನು ಬಳಸಿಕೊಂಡು ಹೊಸಪದಗಳಿಗೆ ಸಮಾನಾರ್ಥಕ ಪದಗಳನ್ನು ಹುಡುಕಿಸುವ ಚಟುವಟಿಕೆ.<br>* ವಿದ್ಯಾರ್ಥಿಗಳ ಮೌನವಾಗಿ ಓದಿ, ಪದ್ಯವನ್ನು ಅರ್ಥೈಸಿಕೊಳ್ಳುವ ಚಟುವಟಿಕೆ.<br>* ವಿವರಣೆ – ಚರ್ಚೆ – ಪ್ರಶ್ನೋತ್ತರ ವಿಧಾನದಿಂದ ಪಾಠದ ಬೆಳವಣಿಗೆ<br>* ಉಪಘಟಕಗಳು :–<br>1. ಸತಿಪತಿಗಳು ಒಂದಾದವರ ಭಕ್ತಿಯ ಮಹತ್ತ್ವ, ಸತಿಪತಿಗಳು ಒಂದಾಗದವರ ಭಕ್ತಿಯಿಂದ ಆಗುವ ಅನಾಹುತ, ನಿಷ್ಠೆಯುಳ್ಳ ಭಕ್ತನ ವಿಶೇಷತೆ.<br>2. ಮಾನವನ ಮನಸ್ಸಿನ ಸ್ವಭಾವಗಳು ಹಾಗೂ ಮನಸ್ಸಿನ ಸ್ವಭಾವಗಳನ್ನು ದೇವರ ಕಡೆಗೆ ತಿರುಗಿಸಲು ಮಾಡಬೇಕಾದ ಪ್ರಯತ್ನಗಳು.<br>3. ದೇವರನ್ನು ಕಾಣಲು ಮನಶ್ಶುದ್ಧಿಯ ಪ್ರಾಮುಖ್ಯತೆ, ನುಡಿ ಮತ್ತು ನಡೆಗಳು ಒಂದಾಗಿರಬೇಕು ಎಂಬ ಭಾವ.<br>4. ಅಲಂಕಾರಗಳ ಪರಿಚಯ ಶಬ್ದಾಲಂಕಾರಗಳು – ಅರ್ಥಾಲಂಕಾರಗಳು<br>5. ಉಪಮಾಲಂಕಾರದ ಲಕ್ಷಣವನ್ನು ಉದಾಹರಣೆಯ ಸಹಿತ ವಿವರಿಸುವುದು. | * ವಚನಕಾರರಾದ ಜೇಡರದಾಸಿಮಯ್ಯ ಮತ್ತು ಬಸವಣ್ಣ ಅವರ ಕಾಲ್ಪನಿಕ ಚಿತ್ರಗಳು<br>* ಪಠ್ಯಪುಸ್ತಕ<br>* ಕನ್ನಡ–ಕನ್ನಡ ನಿಘಂಟು<br>* 'ವಚನ ಸೌರಭ' ಪದ್ಯದ ಧ್ವನಿಸುರುಳಿ<br>* ಬಸವಣ್ಣನವರ ವಚನಗಳ ತೂಗುಪಟ. (ಕಳಬೇಡ . . . ._) | 1. ಜೇಡರ ದಾಸಿಮಯ್ಯ ಅವರ ಕಾಲ ಮತ್ತು ಸ್ಥಳ ತಿಳಿಸಿ.<br>2. ಜೇಡರ ದಾಸಿಮಯ್ಯ ಅವರ ವಚನಗಳ ಅಂಕಿತ ಯಾವುದು?<br>3. ಬಸವಣ್ಣ ಅವರ ಕಾಲ ಮತ್ತು ಸ್ಥಳ ತಿಳಿಸಿ.<br>4. ಬಸವಣ್ಣ ಅವರ ವಚನಗಳ ಅಂಕಿತ ಯಾವುದು?<br>5. 'ವಚನ ಸೌರಭ' ಪದ್ಯದ ಆಕರ ಕೃತಿಗಳು ಯಾವುವು?<br>6. 'ಅಂದಣ' ಪದದ ಅರ್ಥವೇನು?<br>7. 'ಸೊಣಗ' ಪದದ ಅರ್ಥವೇನು?<br>8. 'ಮೃಡ' ಪದದ ಅರ್ಥವೇನು?<br>9. 'ಅಮೃತ' ಪದದ ವಿರುದ್ಧಾರ್ಥಕ ಪದ ಯಾವುದು?<br>10. 'ಮರ್ಕಟ' ಪದದ ಅರ್ಥವೇನು?<br>11. ಯಾರ ಭಕ್ತಿಯು ಶಿವನಿಗೆ ಹಿತವಾಗಿರುವುದು?<br>12. ನಿಷ್ಠೆಯುಳ್ಳ ಭಕ್ತ ನಟ್ಟಡವಿಯಲ್ಲಿ ಇದ್ದರೂ ಅದು ಅವನಿಗೆ ಏನೆನಿಸುವುದು?<br>13. ಬಸವಣ್ಣ ಅವರು ಮನಸ್ಸನ್ನು ಯಾವುದಕ್ಕೆ ಹೋಲಿಸಿದ್ದಾರೆ?<br>14. ಮನಸ್ಸಿನ ಸ್ವಭಾವ ಎಂತಹುದು?<br>15. ಮನೆಯೊಳಗೆ ಮನೆಯೊಡೆಯನಿಲ್ಲ ಎಂದು ಬಸವಣ್ಣ ಅವರು ಹೇಳಲು ಕಾರಣವೇನು?<br>16. ಅಲಂಕಾರದ ಎರಡು ವಿಧಗಳು ಯಾವುವು?<br>17. ಉಪಮಾಲಂಕಾರದ ಲಕ್ಷಣವನ್ನು ಉದಾಹರಣೆಯ ಮೂಲಕ ತಿಳಿಸಿ. |
| ಅನ್ವಯ ಚಟುವಟಿಕೆ | 1. ವಚನವನ್ನು ರಾಗವಾಗಿ ಹಾಡಿಸುವುದು.<br>2. ವಚನಗಳ ಸಾರಾಂಶವನ್ನು ಬರೆಸುವುದು.<br>3. ವಚನಗಳಲ್ಲಿ ಬರುವ ಸರಳ ವ್ಯಾಕರಣಾಂಶಗಳನ್ನು ಗುರುತಿಸುವುದು | * ಪಠ್ಯಪುಸ್ತಕ | 1. 'ನಟ್ಟಡವಿ' ಪದದಲ್ಲಿ ಆಗಿರುವ ಸಮಾಸ ಯಾವುದು?<br>2. 'ಸೊಣಗ' ಪದದ ತತ್ಸಮ ರೂಪ ಯಾವುದು? |
| ಮೌಲ್ಯಮಾಪನ ಚಟುವಟಿಕೆ | * ಹಿಮ್ಮಾಹಿತಿ<br>* ಗೃಹಪಾಠ<br>* ಅಭ್ಯಾಸದ ಚಟುವಟಿಕೆಗಳು<br>* ನಿಯೋಜಿತ ಚಟುವಟಿಕೆಗಳು<br>* ಘಟಕ ಪರೀಕ್ಷೆ | * ಪ್ರಶ್ನಾವಳಿ<br>* ಪ್ರಶ್ನಾವಳಿ<br>* ಪಠ್ಯಪುಸ್ತಕ<br>* ಮಾಹಿತಿ ಸಂಗ್ರಹ<br>* ಪ್ರಶ್ನಾವಳಿ | * ಮೌಖಿಕ ಪರೀಕ್ಷೆ<br>* ಅವಲೋಕನ<br>* ಅವಲೋಕನ<br>* ಅವಲೋಕನ<br>* ಲಿಖಿತ ಪರೀಕ್ಷೆ |

ಶಿಕ್ಷಕರ ಸಹಿ                                                                                    ಮುಖ್ಯಶಿಕ್ಷಕರ ಸಹಿ

| ಪ್ರಥಮ ಭಾಷೆ ಕನ್ನಡ | ಘಟಕ – 9 | 10 ನೆಯ ತರಗತಿ |
| --- | --- | --- |
| ಗದ್ಯಪಾಠ – 5. | ಭಾಗ್ಯಶಿಲ್ಪಿ ಸರ್. ಎಂ. ವಿಶ್ವೇಶ್ವರಯ್ಯ | – ಡಿ. ಎಸ್. ಜಯಪ್ಪಗೌಡ |

ಕಲಿಕೆಗೆ ಬೇಕಾದ ಅವಧಿಗಳು :                    ಪ್ರಾರಂಭದ ದಿನಾಂಕ :

ಮುಕ್ತಾಯದ ದಿನಾಂಕ :

ಕಲಿಕಾಂಶಗಳು :

1. ಲೇಖಕರಾದ ಡಾ. ಡಿ. ಎಸ್. ಜಯಪ್ಪಗೌಡ ಅವರ ಪರಿಚಯ ಮಾಡುವರು ಹಾಗೂ ಪಾಠದ ಆಶಯವನ್ನು ತಿಳಿಯುವರು.
2. ಭಾರತದ ಏಳಿಗೆಗಾಗಿ ದುಡಿದ ಮಹನೀಯರುಗಳನ್ನು ಹೆಸರಿಸಿ, ಅವರ ಸಾಧನೆಗಳನ್ನು ಸಂಕ್ಷಿಪ್ತವಾಗಿ ವಿವರಿಸುವರು.
3. ಪಾಠದಲ್ಲಿ ಬರುವ ಹೊಸಪದಗಳನ್ನು ಅರ್ಥೈಸಿಕೊಳ್ಳುವರು.
4. ಸರ್. ಎಂ. ವಿಶ್ವೇಶ್ವರಯ್ಯ ಅವರ ಜನ್ಮ ಶತಮಾನೋತ್ಸವ ಸಮಾರಂಭದಲ್ಲಿ ನೆಹರು ಅವರು ಹೇಳಿದ ಮಾತುಗಳನ್ನು ಕುರಿತು ಚರ್ಚಿಸುವರು.
5. ಸರ್. ಎಂ. ವಿಶ್ವೇಶ್ವರಯ್ಯ ಅವರ ಬಾಲ್ಯ ಜೀವನ ಹಾಗೂ ವಿದ್ಯಾಭ್ಯಾಸದ ಬಗ್ಗೆ ತಿಳಿಯುವರು.
6. ಸರ್. ಎಂ. ವಿಶ್ವೇಶ್ವರಯ್ಯ ಅವರು ಎಂಜಿನಿಯರಾಗಿ ಮುಂಬೈ ಹಾಗೂ ಹೈದರಾಬಾದ್ ಪ್ರಾಂತ್ಯಗಳಲ್ಲಿ ಸಲ್ಲಿಸಿದ ಸೇವೆಯನ್ನು ವಿವರಿಸುವರು.
7. ಸರ್. ಎಂ. ವಿಶ್ವೇಶ್ವರಯ್ಯ ಅವರು ಮೈಸೂರು ಸಂಸ್ಥಾನದ ಮುಖ್ಯ ಎಂಜಿನಿಯರ್ ಮತ್ತು ದಿವಾನರಾಗಿ ಸಲ್ಲಿಸಿದ ಸೇವೆಯನ್ನು ಕುರಿತು ವಿವರಿಸುವರು.
8. ಸರ್. ಎಂ. ವಿಶ್ವೇಶ್ವರಯ್ಯ ಅವರು ಮೈಸೂರು ಸಂಸ್ಥಾನದಲ್ಲಿ ಶಿಕ್ಷಣ ಕ್ಷೇತ್ರ ಮತ್ತು ಕೈಗಾರಿಕಾ ಕ್ಷೇತ್ರಗಳಿಗೆ ನೀಡಿದ ಮಹತ್ತ್ವವನ್ನು ಕುರಿತು ಚರ್ಚಿಸುವರು.
9. ಸರ್. ಎಂ. ವಿಶ್ವೇಶ್ವರಯ್ಯ ಅವರು ಮೈಸೂರು ಸಂಸ್ಥಾನದ ಆರ್ಥಿಕ ಬೆಳೆವಣಿಗೆಗಾಗಿ ಕೈಗೊಂಡ ಕಾರ್ಯಗಳನ್ನು ವಿವರಿಸುವರು.
10. ಸರ್. ಎಂ. ವಿಶ್ವೇಶ್ವರಯ್ಯ ಅವರು ರಚಿಸಿದ ಕೃತಿಗಳು ಹಾಗೂ ಅವರಿಗೆ ಸಂದ ಗೌರವ ಪ್ರಶಸ್ತಿಗಳನ್ನು ಪಟ್ಟಿ ಮಾಡುವರು.
11. ಸಮಾಸಗಳನ್ನು ಉದಾಹರಣೆಗಳ ಸಹಿತ ವಿವರಿಸುವರು.
12. ಅಭ್ಯಾಸ ಪುಸ್ತಕದ ಪ್ರಶ್ನೆಗಳಿಗೆ ಉತ್ತರಿಸುವರು.

| ಹಂತಗಳು | ಕಲಿಕೆಯನ್ನು ಅನುಕೂಲಿಸುವ ಚಟುವಟಿಕೆಗಳು | ಬಳಸುವ ಕಲಿಕಾ ಸಾಮಗ್ರಿಗಳು | ಮೌಲ್ಯಮಾಪನದ ಪ್ರಶ್ನೆಗಳು |
| --- | --- | --- | --- |

| | | | |
|---|---|---|---|
| ಪ್ರೇರಣಾ ಚಟುವಟಿಕೆ | * ಭಾರತದ ಏಳಿಗೆಗಾಗಿ ದುಡಿದ ಮಹನೀಯರುಗಳನ್ನು ಹಾಗೂ ಅವರ ಸಾಧನೆಗಳನ್ನು ಸಂಕ್ಷಿಪ್ತವಾಗಿ ಪರಿಚಯಿಸುವುದು.<br>* ಜವಹರಲಾಲ್‌ನೆಹರು, ಲಾಲ್‌ಬಹುದ್ದೂರ್ ಶಾಸ್ತ್ರಿ, ಸರ್ದಾರ್ ವಲ್ಲಭಭಾಯಿ ಪಟೇಲ್, ಸರ್. ಎಂ. ವಿಶ್ವೇಶ್ವರಯ್ಯ ಅವರ ಪರಿಚಯವನ್ನು ಮಾಡುವುದು. | * ಕನ್ನಡ ವಿಷಯ ವಿಶ್ವಕೋಶ<br>* ಜವಹರಲಾಲ್ ನೆಹರು, ಲಾಲ್ ಬಹುದ್ದೂರ್ ಶಾಸ್ತ್ರಿ, ಸರ್ದಾರ್ ವಲ್ಲಭಬಾಯಿ ಪಟೇಲ್ ಅವರ ಭಾವಚಿತ್ರಗಳು | 1. ಭಾರತ ರತ್ನ ಪ್ರಶಸ್ತಿಯನ್ನು ಪಡೆದ ಐದು ಪ್ರಮುಖ ವ್ಯಕ್ತಿಗಳನ್ನು ಹೆಸರಿಸಿ.<br>2. ಜವಹರ ಲಾಲ್ ನೆಹರು ಭಾರತದ ಎಷ್ಟನೆಯ ಪ್ರಧಾನ ಮಂತ್ರಿ ಆಗಿದ್ದರು?<br>3. 'ಭಾರತದ ಉಕ್ಕಿನ ಮನುಷ್ಯ' ಎಂದು ಯಾರನ್ನು ಕರೆಯುತ್ತಿದ್ದರು?<br>4. 'ಜೈ ಜವಾನ್; ಜೈ ಕಿಸಾನ್' ಘೋಷಣೆ ಮಾಡಿದವರು ಯಾರು? |
| ಕಲಿಕಾ ಚಟುವಟಿಕೆ | * ಪ್ರಶ್ನೋತ್ತರ / ಸಂದರ್ಶನ ವಿಧಾನದಿಂದ ಲೇಖಕರಾದ ಡಿ. ಎಸ್. ಜಯಪ್ಪಗೌಡ ಅವರನ್ನು ಪರಿಚಯಿಸುವ ಚಟುವಟಿಕೆ.<br>* ಉಪಾಧ್ಯಾಯರು ಪಾಠವನ್ನು ಓದುವುದು.<br>* ಉಪಾಧ್ಯಾಯರ ಓದನ್ನು ಅನುಸರಿಸಿ ವಿದ್ಯಾರ್ಥಿಗಳು ಪಾಠವನ್ನು ಓದುವ ಚಟುವಟಿಕೆ.<br>* ನಿಘಂಟನ್ನು ಬಳಸಿಕೊಂಡು ಹೊಸಪದಗಳಿಗೆ ಸಮಾನಾರ್ಥಕ ಪದಗಳನ್ನು ಹುಡುಕಿಸುವ ಚಟುವಟಿಕೆ.<br>* ವಿದ್ಯಾರ್ಥಿಗಳು ಪಾಠವನ್ನು ಮೌನವಾಗಿ ಓದಿ, ಅರ್ಥೈಸಿಕೊಳ್ಳುವ ಚಟುವಟಿಕೆ.<br>* ವಿವರಣೆ – ಚರ್ಚೆ – ಪ್ರಶ್ನೋತ್ತರ ವಿಧಾನದಿಂದ ಪಾಠದ ಬೆಳವಣಿಗೆ<br>* ಉಪಘಟಕಗಳು :–<br>1. ಸರ್. ಎಂ. ವಿಶ್ವೇಶ್ವರಯ್ಯ ಅವರ ಜನ್ಮ ಶತಮನೋತ್ಸವ ಸಮಾರಂಭದಲ್ಲಿ ನೆಹರು ಆಡಿದ ಮಾತುಗಳು, ವಿಶ್ವೇಶ್ವರಯ್ಯ ಅವರ ಬಾಲ್ಯ ಜೀವನ, ವಿದ್ಯಾಭ್ಯಾಸ.<br>2. ಮುಂಬೈ ಪ್ರಾಂತ್ಯದ ಸಹಾಯಕ ಎಂಜಿನಿಯರಾಗಿ ಮಾಡಿದ ಕಾರ್ಯಗಳು, ಹೈದರಾಬಾದ್ ಪ್ರಾಂತ್ಯದಲ್ಲಿ ಮಾಡಿದ ಕಾರ್ಯಗಳು. ಮೈಸೂರು ಸಂಸ್ಥಾನದ ಮುಖ್ಯ ಎಂಜಿನಿಯರಾಗಿ ಮಾಡಿದ ಸಾಧನೆಗಳು.<br>3. ವಿಶ್ವೇಶ್ವರಯ್ಯ ಅವರು ಎಂಜಿನಿಯರ್ ಗಳಿಗೆ ನೀಡಿದ ಮಾರ್ಗದರ್ಶನ, ಮೈಸೂರು ಸಂಸ್ಥಾನದ ದಿವಾನರಾಗಿ ಮಾಡಿದ ಕಾರ್ಯಗಳು, ಶೈಕ್ಷಣಿಕ ಕ್ಷೇತ್ರ ನೀಡಿದ ಪ್ರಾಮುಖ್ಯತೆ, ಕೈಗಾರಿಕಾ ಕ್ಷೇತ್ರಕ್ಕೆ ನೀಡಿದ ಪ್ರಾಮುಖ್ಯತೆ.<br>4. ಮೈಸೂರು ಸಂಸ್ಥಾನದ ಆರ್ಥಿಕ ಬೆಳೆವಣಿಗೆಗಾಗಿ ಕೈಗೊಂಡ ಕ್ರಮಗಳು, ವಿಶ್ವೇಶ್ವರಯ್ಯ ಅವರು ರಚಿಸಿದ ಕೃತಿಗಳು ಮತ್ತು ಅವರಿಗೆ ಸಂದ ಗೌರವ ಪ್ರಶಸ್ತಿಗಳು.<br>5. ಸಮಾಸ ಮತ್ತು ಅದರ ವಿಧಗಳನ್ನು ಉದಾಹರಣೆಗಳ ಸಹಿತ ವಿವರಿಸುವುದು. | * ಡಿ. ಎಸ್. ಜಯಪ್ಪ ಗೌಡ ಅವರ ಭಾವಚಿತ್ರ<br>* ದಿವಾನ್ ಸರ್. ಎಂ. ವಿಶ್ವೇಶ್ವರಯ್ಯ ಅವರ ಕಾರ್ಯ ಸಾಧನೆಗಳು ಕೃತಿ<br>* ಪಠ್ಯ ಪುಸ್ತಕ<br>* ಕನ್ನಡ ರತ್ನಕೋಶ<br>* ಸಮಾಸದ ವಿಧಗಳ ಪಟ್ಟಿ | 1. ಡಿ. ಎಸ್. ಜಯಪ್ಪಗೌಡ ಅವರ ಕಾಲ ಮತ್ತು ಸ್ಥಳ ತಿಳಿಸಿ.<br>2. ಡಿ. ಎಸ್. ಜಯಪ್ಪಗೌಡ ಅವರು ರಚಿಸಿದ ಕೃತಿಗಳನ್ನು ಹೆಸರಿಸಿ.<br>3. ಡಿ. ಎಸ್. ಜಯಪ್ಪಗೌಡ ಅವರಿಗೆ ದೊರೆತ ಪ್ರಶಸ್ತಿಗಳನ್ನು ಹೆಸರಿಸಿ.<br>4. ಭಾಗ್ಯಶಿಲ್ಪಿ ಸರ್. ಎಂ. ವಿಶ್ವೇಶ್ವರಯ್ಯ ಗದ್ಯಪಾಠದ ಆಕರ ಕೃತಿ ಯಾವುದು?<br>5. 'ಶತಮಾನೋತ್ಸವ' ಪದದ ಅರ್ಥವೇನು?<br>6. 'ಮನ್ವಂತರ' ಪದದ ಅರ್ಥವೇನು?<br>7. 'ಜಲಾಶಯ' ಪದದಲ್ಲಿ ಆಗಿರುವ ಸಂಧಿ ಯಾವುದು?<br>8. ವಿಶ್ವೇಶ್ವರಯ್ಯ ಅವರ ಜನ್ಮ ಶತಮಾನೋತ್ಸವ ಕಾರ್ಯಕ್ರಮ ಎಲ್ಲಿ ಜರುಗಿತು?<br>9. ವಿಶ್ವೇಶ್ವರಯ್ಯ ಅವರ ಮನೆತನಕ್ಕೆ 'ಮೋಕ್ಷಗೊಂಡಂ' ಎಂದು ಹೆಸರು ಬರಲು ಕಾರಣವೇನು?<br>10. ವಿಶ್ವೇಶ್ವರಯ್ಯ ಅವರು ಎಲ್ಲಿ ಎಂಜಿನಿಯರಾಗಿ ತಮ್ಮ ಸೇವೆಯನ್ನು ಪ್ರಾರಂಭಿಸಿದರು?<br>11. ವಿಶ್ವೇಶ್ವರಯ್ಯ ಅವರು ಮಾಡಿದ ಪ್ರಮುಖ ಅನ್ವೇಷಣೆ ಯಾವುದು?<br>12. ವಿಶ್ವೇಶ್ವರಯ್ಯ ಅವರು ಮೈಸೂರು ಸಂಸ್ಥಾನದ ಮುಖ್ಯ ಎಂಜಿನಿಯರಾಗಿ ಮಾಡಿದ ಕಾರ್ಯಗಳಾವುವು?<br>13. ವಿಶ್ವೇಶ್ವರಯ್ಯ ಅವರು ಎಂಜಿನಿಯರ್‌ಗಳಿಗೆ ಏನೆಂದು ಮಾರ್ಗದರ್ಶನ ಮಾಡುತ್ತಿದ್ದರು?<br>14. ಶಿಕ್ಷಣದ ಬಗೆಗೆ ವಿಶ್ವೇಶ್ವರಯ್ಯ ಅವರ ಅಭಿಪ್ರಾಯಗಳೇನು ತಿಳಿಸಿ?<br>15. ವಿಶ್ವೇಶ್ವರಯ್ಯ ಅವರಿಗೆ ಸಂದ ಪ್ರಶಸ್ತಿಗಳು ಯಾವುವು?<br>16. ಸಮಾಸದಲ್ಲಿ ಎಷ್ಟು ವಿಧ? ಅವು ಯಾವುವು? |
| ಅನ್ವಯ ಚಟುವಟಿಕೆ | 1. ಭಾರತ ರತ್ನ ಪ್ರಶಸ್ತಿಯನ್ನು ಪಡೆದ ಮಹನೀಯರುಗಳ ಪಟ್ಟಿಯನ್ನು ತಯಾರಿಸಿ.<br>2. ಮೈಸೂರು ಸಂಸ್ಥಾನದಲ್ಲಿ ವಿಶ್ವೇಶ್ವರಯ್ಯ ಅವರು ದಿವಾನರಾಗಿದ್ದಾಗ ಪ್ರಾರಂಭಿಸಿದ ಸಂಸ್ಥೆಗಳ ಹೆಸರನ್ನು ಪಟ್ಟಿಮಾಡಿ.<br>3. ಪಾಠದಲ್ಲಿ ಬರುವ ಸರಳ ವ್ಯಾಕರಣಾಂಶಗಳನ್ನು ಗುರುತಿಸಿ, ವಿವರಿಸಿ. | * ಭಾರತರತ್ನ ಪ್ರಶಸ್ತಿ ಪುರಸ್ಕೃತರು ಕೃತಿ.<br>* ದಿವಾನ್ ಸರ್. ಎಂ. ವಿಶ್ವೇಶ್ವರಯ್ಯ ಅವರ ಕಾರ್ಯ ಸಾಧನೆಗಳ ವೀಡಿಯೋ ಪ್ರದರ್ಶನ<br>* ಪಠ್ಯಪುಸ್ತಕ | 1. 'ದಿವಾನ' ಪದವು ಯಾವ ಭಾಷೆಯಿಂದ ಕನ್ನಡಕ್ಕೆ ಬಂದಿದೆ?<br>2. 'ಕಾರ್ಯ' ಪದದ ತದ್ಭವವೇನು?<br>3. 'ತಲೆನೋವು' ಪದವು ಯಾವ ಸಮಾಸಕ್ಕೆ ಉದಾಹರಣೆಯಾಗಿದೆ?<br>4. ದ್ವಿಗು ಸಮಾಸದ ಲಕ್ಷಣ ತಿಳಿಸಿ.<br>5. 'ಮನ್ವಂತರ' ಪದದಲ್ಲಿರುವ ಸಂಧಿಯ |

| | | | |
|---|---|---|---|
| | | | ಹೆಸರು ತಿಳಿಸಿ. |
| ಮೌಲ್ಯಮಾಪನ ಚಟುವಟಿಕೆ | * ಹಿಮ್ಮಾಹಿತಿ<br>* ಗೃಹಪಾಠ<br>* ಅಭ್ಯಾಸದ ಚಟುವಟಿಕೆಗಳು<br>* ನಿಯೋಜಿತ ಚಟುವಟಿಕೆಗಳು<br>* ಘಟಕ ಪರೀಕ್ಷೆ | * ಪ್ರಶ್ನಾವಳಿ<br>* ಪ್ರಶ್ನಾವಳಿ<br>* ಪಠ್ಯಪುಸ್ತಕ<br>* ಮಾಹಿತಿ ಸಂಗ್ರಹ<br>* ಪ್ರಶ್ನಾವಳಿ | * ಮೌಖಿಕ ಪರೀಕ್ಷೆ<br>* ಅವಲೋಕನ<br>* ಅವಲೋಕನ<br>* ಅವಲೋಕನ<br>* ಲಿಖಿತ ಪರೀಕ್ಷೆ |

ಶಿಕ್ಷಕರ ಸಹಿ ಮುಖ್ಯಶಿಕ್ಷಕರ ಸಹಿ

**ಪ್ರಥಮ ಭಾಷೆ ಕನ್ನಡ ಘಟಕ – 10 10 ನೆಯ ತರಗತಿ**

**ಪದ್ಯಪಾಠ – 5. ಸಂಕಲ್ಪಗೀತೆ ಡಾ. ಜಿ.ಎಸ್. ಶಿವರುದ್ರಪ್ಪ**

ಕಲಿಕೆಗೆ ಬೇಕಾದ ಅವಧಿಗಳು : ಪ್ರಾರಂಭದ ದಿನಾಂಕ :

ಮುಕ್ತಾಯದ ದಿನಾಂಕ :

ಕಲಿಕಾಂಶಗಳು :
1. ಕವಿಗಳಾದ ಡಾ. ಜಿ.ಎಸ್. ಶಿವರುದ್ರಪ್ಪ ಅವರ ಪರಿಚಯ ಮಾಡುವರು ಹಾಗೂ ಪದ್ಯದ ಆಶಯ ತಿಳಿಯುವರು.
2. ಕನ್ನಡದಲ್ಲಿ ಭಾವಗೀತೆಗಳನ್ನು ರಚಿಸಿದ ಪ್ರಸಿದ್ಧ ಕವಿಗಳು ಹಾಗೂ ಭಾವಗೀತೆಗಳನ್ನು ಹೆಸರಿಸುವರು.
3. "ದೃಢನಿರ್ಧಾರದಿಂದ ಕಾರ್ಯಪ್ರವೃತ್ತರಾದರೆ ಅಸಾಧ್ಯವಾದುದು ಯಾವುದು ಇಲ್ಲ" ವಿಷಯವನ್ನು ಕುರಿತು ಚರ್ಚಿಸುವರು.
4. ಪದ್ಯಪಾಠದಲ್ಲಿ ಬಂದಿರುವ ಹೊಸಪದಗಳನ್ನು ಅರ್ಥೈಸಿಕೊಳ್ಳುವರು.
5. ಪ್ರೀತಿಯ ಹಣತೆಯನ್ನು ಹಚ್ಚುವ ಸಂಕಲ್ಪ ಮಾಡುವ ಆವಶ್ಯಕತೆಯ ಬಗೆಗೆ ವಿವರಿಸುವರು.
6. ಪರಿಸರ ಸಂರಕ್ಷಣೆಯ ಸಂಕಲ್ಪ ಮಾಡುವ ಆವಶ್ಯಕತೆಯ ಬಗೆಗೆ ತಿಳಿಯುವರು.
7. ಮನುಜರ ನಡುವಣ ಸೇತುವೆಯಾಗಬೇಕೆಂಬ ಸಂಕಲ್ಪ ಮಾಡುವ ಆವಶ್ಯಕತೆಯ ಬಗೆಗೆ ವಿವರಿಸುವರು.
8. ಮತಗಳೆಲ್ಲವೂ ಪಥಗಳು ಎಂದು ತಿಳಿಯುವ ಸಂಕಲ್ಪ ಮಾಡುವ ಆವಶ್ಯಕತೆಯ ಬಗೆಗೆ ವಿವರಿಸುವರು.
9. ಕ್ರಿಯಾಪದ ಹಾಗೂ ಅದರ ಅರ್ಥರೂಪಗಳ ಬಗ್ಗೆ ಉದಾಹರಣೆಗಳ ಸಹಿತ ಅರ್ಥೈಸಿಕೊಳ್ಳುವರು.
10. ಕರ್ತರಿ ಮತ್ತು ಕರ್ಮಣಿ ಪ್ರಯೋಗಗಳ ಬಗೆಗೆ ತಿಳಿದುಕೊಳ್ಳುವರು.
11. ವಿಭಕ್ತಿ ಪ್ರತ್ಯಯಗಳನ್ನು ಉದಾಹರಣೆ ಸಹಿತ ತಿಳಿದುಕೊಳ್ಳುವರು.
12. ಅಭ್ಯಾಸ ಪುಸ್ತಕದ ಪ್ರಶ್ನೆಗಳಿಗೆ ಉತ್ತರಿಸುವರು.

| ಹಂತಗಳು | ಕಲಿಕೆಯನ್ನು ಅನುಕೂಲಿಸುವ ಚಟುವಟಿಕೆಗಳು | ಬಳಸುವ ಕಲಿಕಾ ಸಾಮಗ್ರಿಗಳು | ಮೌಲ್ಯಮಾಪನದ ಪ್ರಶ್ನೆಗಳು |
|---|---|---|---|
| ಪ್ರೇರಣಾ ಚಟುವಟಿಕೆ | * ಕನ್ನಡ ಭಾವಗೀತೆಗಳ ಲಕ್ಷಣ ತಿಳಿಸುವುದು.<br>* ಕನ್ನಡದ ಪ್ರಸಿದ್ಧ ಭಾವಗೀತೆಗಳನ್ನು ಕೇಳಿಸುವುದು / ಹಾಡಿಸುವುದು.<br>* ಕನ್ನಡದಲ್ಲಿ ಭಾವಗೀತೆಗಳನ್ನು ರಚಿಸಿದ ಪ್ರಸಿದ್ಧ ಕವಿಗಳನ್ನು ಹೆಸರಿಸುವುದು. | * ಕನ್ನಡ ಭಾವಗೀತೆಗಳ ಧ್ವನಿಸುರುಳಿ<br>* ಕನ್ನಡ ವಿಷಯ ವಿಶ್ವಕೋಶ | 1. 'ಜೋಗದ ಸಿರಿ ಬೆಳಕಿನಲಿ' ಭಾವಗೀತೆಯನ್ನು ಬರೆದವರು ಯಾರು?<br>2. ಭಾವಗೀತೆಯ ಲಕ್ಷಣ ತಿಳಿಸಿ.<br>3. 'ಎದೆ ತುಂಬಿ ಹಾಡಿದೆನು' ಭಾವಗೀತೆಯನ್ನು ರಚಿಸಿದವರು ಯಾರು? |
| ಕಲಿಕಾ ಚಟುವಟಿಕೆ | * ಪ್ರಶ್ನೋತ್ತರ / ಸಂದರ್ಶನ ವಿಧಾನದಿಂದ ರಾಷ್ಟ್ರಕವಿ ಜಿ. ಎಸ್. ಶಿವರುದ್ರಪ್ಪ ಅವರನ್ನು ಪರಿಚಯಿಸುವ ಚಟುವಟಿಕೆ.<br>* ಉಪಾಧ್ಯಾಯರು ಪದ್ಯವನ್ನು ಓದುವುದು.<br>* ಉಪಾಧ್ಯಾಯರ ಓದನ್ನು ಅನುಸರಿಸಿ ವಿದ್ಯಾರ್ಥಿಗಳು ಪದ್ಯವನ್ನು ಓದುವ ಚಟುವಟಿಕೆ.<br>* ನಿಘಂಟನ್ನು ಬಳಸಿಕೊಂಡು ಹೊಸಪದಗಳಿಗೆ ಸಮಾನಾರ್ಥಕ ಪದಗಳನ್ನು ಹುಡುಕಿಸುವ ಚಟುವಟಿಕೆ.<br>* ವಿದ್ಯಾರ್ಥಿಗಳ ಮೌನವಾಗಿ ಓದಿ, ಪದ್ಯವನ್ನು ಅರ್ಥೈಸಿಕೊಳ್ಳುವ ಚಟುವಟಿಕೆ. | * ಜಿ. ಎಸ್. ಶಿವರುದ್ರಪ್ಪ ಅವರ ಭಾವಚಿತ್ರ<br>* ಜಿ. ಎಸ್. ಶಿವರುದ್ರಪ್ಪ ಅವರ ಸಾಕ್ಷ್ಯಚಿತ್ರ<br>* 'ಎದೆ ತುಂಬಿ ಹಾಡುವೆನು' ಕವನ ಸಂಕಲನ<br>* ಪಠ್ಯಪುಸ್ತಕ | 1. ಜಿ. ಎಸ್. ಶಿವರುದ್ರಪ್ಪ ಅವರ ಕಾಲ ಮತ್ತು ಸ್ಥಳ ತಿಳಿಸಿ.<br>2. ಜಿ. ಎಸ್. ಶಿವರುದ್ರಪ್ಪ ಅವರ ವಚನಗಳ ಅಂಕಿತ ಯಾವುದು?<br>3. ಜಿ. ಎಸ್. ಶಿವರುದ್ರಪ್ಪ ಅವರ ಕೃತಿಗಳನ್ನು ಹೆಸರಿಸಿ.<br>4. ಜಿ. ಎಸ್. ಶಿವರುದ್ರಪ್ಪ ಅವರಿಗೆ ಸಂದ ಗೌರವ ಪ್ರಶಸ್ತಿಗಳನ್ನು ಹೆಸರಿಸಿ.<br>5. 'ಸಂಕಲ್ಪಗೀತೆ' ಪದ್ಯದ ಆಕರ ಕೃತಿ ಯಾವುದು?<br>6. 'ಬರಡು' ಪದದ ಅರ್ಥವೇನು?<br>7. 'ವಸಂತವಾಗುವುದು' ಎಂದರೇನು? |

| | | | |
|---|---|---|---|
| | * ವಿವರಣೆ – ಚರ್ಚೆ – ಪ್ರಶ್ನೋತ್ತರ ವಿಧಾನದಿಂದ ಪಾಠದ ಬೆಳವಣಿಗೆ<br>* ಉಪಘಟಕಗಳು :–<br>1. ಸುತ್ತಲು ಕವಿಯುವ ಕತ್ತಲೆಯೊಳಗೆ ಪ್ರೀತಿಯ ಹಣತೆಯನ್ನು ಹಚ್ಚುವ ಸಂಕಲ್ಪ.<br>ಬಿರುಗಾಳಿಗೆ ಹೊಯ್ದಾಡುವ ಹಡಗನು ಎಚ್ಚರದಲಿ ಮುನ್ನಡೆಸುವ ಸಂಕಲ್ಪ.<br>2. ಕಲುಷಿತವಾದ ನದೀಜಲಗಳಿಗೆ ಮುಂಗಾರಿನ ಮಳೆಯಾಗುವ ಸಂಕಲ್ಪ,<br>ಬರಡಾಗಿರುವ ಕಾಡುಮೇಡುಗಳಿಗೆ ವಸಂತವಾಗುವ ಸಂಕಲ್ಪ.<br>3. ಬಿದ್ದುದನ್ನು ಮೇಲೆಬ್ಬಿಸಿ ನಿಲ್ಲಿಸಿ ಹೊಸ ಭರವಸೆಗಳನ್ನು ಕಟ್ಟುವ ಸಂಕಲ್ಪ,<br>ಮನುಜರ ನಡುವಣ ಅಡ್ಡಗೋಡೆಗಳ ಕೆಡವುತ ಸೇತುವೆಯಾಗುವ ಸಂಕಲ್ಪ.<br>4. ಮತಗಳೆಲ್ಲವೂ ಪಥಗಳು ಎನ್ನುವ ಎಚ್ಚರದೊಳು ಬದುಕುವ ಸಂಕಲ್ಪ,<br>ಭಯ–ಸಂಶಯದೊಳು ಕಂದಿದ ಕಣ್ಣೊಳು ನಾಳಿನ ಕನಸನ್ನು ಬಿತ್ತುವ ಸಂಕಲ್ಪ.<br>5. ಧಾತುಗಳು ಮತ್ತು ಅದರ ವಿಧಗಳನ್ನು (ಸಕರ್ಮಕ ಮತ್ತು ಅಕರ್ಮಕ ಧಾತುಗಳು) ಉದಾಹರಣೆಗಳ ಸಹಿತ ತಿಳಿಸುವುದು.<br>6. ಕರ್ತರಿ ಮತ್ತು ಕರ್ಮಣಿ ಪ್ರಯೋಗಗಳ ಬಗ್ಗೆ ಉದಾಹರಣೆಗಳ ಸಹಿತ ತಿಳಿಸುವುದು.<br>7. ಅರ್ಥರೂಪ ಕ್ರಿಯಾಪದಗಳ ಬಗ್ಗೆ ಉದಾಹರಣೆಗಳ ಸಹಿತ ವಿವರಿಸುವುದು. | * ಕನ್ನಡ–ಕನ್ನಡ ನಿಘಂಟು<br>* 'ಸಂಕಲ್ಪಗೀತೆ' ಪದ್ಯದ ಧ್ವನಿಸುರುಳಿ ಹಾಗೂ ವೀಡಿಯೋ<br>* ಸಕರ್ಮಕ ಮತ್ತು ಅಕರ್ಮಕ ಧಾತುಗಳ ಪಟ್ಟಿ | 8. 'ಪಥ' ಪದದ ಅರ್ಥವೇನು?<br>9. 'ಸಂಶಯ' ಪದದ ಅರ್ಥವೇನು?<br>10. 'ಭರವಸೆ' ಪದದ ಅರ್ಥವೇನು?<br>11. ಪ್ರೀತಿಯ ಹಣತೆಯನ್ನು ಎಲ್ಲಿ ಹಚ್ಚಬೇಕು?<br>12. ಯಾವುದನ್ನು ಎಚ್ಚರದಲಿ ನಡೆಸಬೇಕು?<br>13. ಯಾವುದಕ್ಕೆ ಮುಂಗಾರಿನ ಮಳೆಯಾಗಬೇಕು?<br>14. ಯಾವುದನ್ನು ವಸಂತವಾಗುತ ಮುಟ್ಟಬೇಕು?<br>15. ಹೊಸ ಭರವಸೆಗಳನ್ನು ಹೇಗೆ ಕಟ್ಟಬೇಕು?<br>16. ಯಾವುದನ್ನು ಕೆಡವುತ ಸೇತುವೆಯಾಗಬೇಕು?<br>17. ಯಾವ ಎಚ್ಚರದಲ್ಲಿ ಬದುಕಬೇಕು?<br>18. ನಾಳಿನ ಕನಸನ್ನು ಎಲ್ಲಿ ಬಿತ್ತಬೇಕು?<br>19. ಧಾತುಗಳ ಎರಡು ವಿಧಗಳಾವುವು?<br>20. ಕರ್ಮಣಿ ಪ್ರಯೋಗ ಎಂದರೇನು?<br>21. ಕ್ರಿಯಾಪದದ ಅರ್ಥರೂಪಗಳು ಯಾವುವು?<br>22. 'ಹಚ್ಚೋಣ' ಇದು ಯಾವ ಕ್ರಿಯಾರೂಪಕ್ಕೆ ಉದಾಹರಣೆ ಆಗಿದೆ? |
| ಅನ್ವಯ ಚಟುವಟಿಕೆ | 1. 'ಸಂಕಲ್ಪಗೀತ' ಪದ್ಯವನ್ನು ರಾಗವಾಗಿ ಹಾಡಿಸುವುದು.<br>2. 'ಸಂಕಲ್ಪಗೀತ' ಪದ್ಯದ ಸಾರಾಂಶವನ್ನು ಬರೆಸುವುದು.<br>3. 'ಸಂಕಲ್ಪಗೀತ' ಪದ್ಯದಲ್ಲಿ ಬರುವ ಸರಳ ವ್ಯಾಕರಣಾಂಶಗಳನ್ನು ಗುರುತಿಸುವುದು | * ಪಠ್ಯಪುಸ್ತಕ | 1. 'ಮುಂಗಾರು' ಪದವು ಯಾವ ಸಮಾಸಕ್ಕೆ ಉದಾಹರಣೆಯಾಗಿದೆ?<br>2. 'ಕಾಡುಮೇಡು' ಪದವು ಯಾವ ವ್ಯಾಕರಣಾಂಶಕ್ಕೆ ಉದಾಹರಣೆ ಯಾಗಿದೆ?<br>3. 'ವಸಂತವಾಗುತ' ಪದದಲ್ಲಿ ಆಗಿರುವ ಸಂಧಿ ಯಾವುದು? |
| ಮೌಲ್ಯಮಾಪನ ಚಟುವಟಿಕೆ | * ಹಿಮ್ಮಾಹಿತಿ<br>* ಗೃಹಪಾಠ<br>* ಅಭ್ಯಾಸದ ಚಟುವಟಿಕೆಗಳು<br>* ನಿಯೋಜಿತ ಚಟುವಟಿಕೆಗಳು<br>* ಘಟಕ ಪರೀಕ್ಷೆ | * ಪ್ರಶ್ನಾವಳಿ<br>* ಪ್ರಶ್ನಾವಳಿ<br>* ಪಠ್ಯಪುಸ್ತಕ<br>* ಮಾಹಿತಿ ಸಂಗ್ರಹ<br>* ಪ್ರಶ್ನಾವಳಿ | * ಮೌಖಿಕ ಪರೀಕ್ಷೆ<br>* ಅವಲೋಕನ<br>* ಅವಲೋಕನ<br>* ಅವಲೋಕನ<br>* ಲಿಖಿತ ಪರೀಕ್ಷೆ |

**ಶಿಕ್ಷಕರ ಸಹಿ** **ಮುಖ್ಯಶಿಕ್ಷಕರ ಸಹಿ**

ಕಲಿಕೆಗೆ ಬೇಕಾದ ಅವಧಿಗಳು : ಪ್ರಾರಂಭದ ದಿನಾಂಕ :
ಮುಕ್ತಾಯದ ದಿನಾಂಕ :

ಕಲಿಕಾಂಶಗಳು :
1. ಲೇಖಕರಾದ ದೇವನೂರು ಮಹಾದೇವ ಅವರ ಪರಿಚಯ ಮಾಡುವರು ಹಾಗೂ ಪಾಠದ ಆಶಯವನ್ನು ತಿಳಿಯುವರು.
2. ಮೂಢನಂಬಿಕೆಗಳಿಗೆ ಬಲಿಯಾಗದೆ ವೈಚಾರಿಕ ಮನೋಭಾವವನ್ನು ಬೆಳೆಸಿಕೊಳ್ಳಬೇಕು ಎಂಬ ಅರಿವನ್ನು ಮೂಡಿಸಿಕೊಳ್ಳುವರು.
3. ಗದ್ಯಪಾಠದಲ್ಲಿ ಬರುವ ಹೊಸಪದಗಳನ್ನು ಅರ್ಥೈಸಿಕೊಳ್ಳುವರು.
4. ಮನೆ ಮಂಚಮ್ಮನ ಕಥೆಯನ್ನು ಅರ್ಥೈಸುವರು
5. ಬುದ್ಧ, ಬಸವ, ಪರಮಹಂಸ, ಗಾಂಧಿ, ಐನ್‌ಸ್ಟೈನ್, ಅಂಬೇಡ್ಕರ್, ಟಾಲ್‌ಸ್ಟಾಯ್, ಶೇಕ್ಸ್‌ಪಿಯರ್, ಪಂಪ, ಕುಮಾರ ವ್ಯಾಸ, ಬೇಂದ್ರೆ, ಕುವೆಂಪು ಅವರಲ್ಲಿ ಕಂಡುಬರುವ ವೈಚಾರಿಕ ಪ್ರಜ್ಞೆಯನ್ನು ಗುರುತಿಸುವರು.
6. ಬುದ್ಧನ ಕಾರುಣ್ಯವನ್ನು ಅಶೋಕ ಪೈ ಅವರ ಮನೋವೈಜ್ಞಾನಿಕ ಕಥೆಯೊಡನೆ ಹೋಲಿಸಿ, ಅರ್ಥೈಸಿಕೊಳ್ಳುವರು.
7. ತದ್ಧಿತಾಂತಗಳನ್ನು ಉದಾಹರಣೆಗಳ ಸಹಿತ ಅರ್ಥೈಸಿಕೊಳ್ಳುವರು.
8. ಪತ್ರಿಕಾ ವರದಿಯನ್ನು ತಯಾರಿಸುವ ವಿಧಾನವನ್ನು ಉದಾಹರಣೆಯ ಸಹಿತ ವಿವರಿಸುವರು.
9. ಅಭ್ಯಾಸ ಪುಸ್ತಕದ ಪ್ರಶ್ನೆಗಳಿಗೆ ಉತ್ತರಿಸುವರು.

| ಹಂತಗಳು | ಕಲಿಕೆಯನ್ನು ಅನುಕೂಲಿಸುವ ಚಟುವಟಿಕೆಗಳು | ಬಳಸುವ ಕಲಿಕಾ ಸಾಮಗ್ರಿಗಳು | ಮೌಲ್ಯಮಾಪನದ ಪ್ರಶ್ನೆಗಳು |
|---|---|---|---|
| ಪ್ರೇರಣಾ ಚಟುವಟಿಕೆ | * ಪ್ರಸ್ತುತ ಆಚರಣೆಯಲ್ಲಿರುವ ಮೂಢನಂಬಿಕೆಗಳನ್ನು ಕುರಿತು ವಿವರಿಸುವುದು.<br>* ಮೂಢನಂಬಿಕೆಗಳಿಗೆ ಬಲಿಯಾಗುವುದರಿಂದ ಆಗುವ ಅನಾಹುತಗಳನ್ನು ಕುರಿತು ಚರ್ಚಿಸುವುದು.<br>* ವೈಚಾರಿಕ ಚಿಂತನಾ ಮನೋಭಾವವನ್ನು ಹೊಂದಿರುವ ಪ್ರಸಿದ್ಧ ವ್ಯಕ್ತಿಗಳನ್ನು ಪರಿಚಯಿಸುವುದು. | * ಕನ್ನಡ ವಿಷಯ ವಿಶ್ವಕೋಶ. | 1. ಮೂಢನಂಬಿಕೆಗಳು ಎಂದರೇನು? ಅವು ಯಾವುವು?<br>2. ಮೂಢನಂಬಿಕೆಗೆ ಬಲಿಯಾಗು ವುದರಿಂದ ಆಗುವ ಅನಾಹುತಗಳು ಯಾವುವು?<br>3. ವೈಚಾರಿಕ ಚಿಂತನೆಗಳನ್ನು ಮೈಗೂಡಿಸಿಕೊಂಡ ಪ್ರಸಿದ್ಧ ವ್ಯಕ್ತಿಗಳನ್ನು ಹೆಸರಿಸಿರಿ. |
| ಕಲಿಕಾ ಚಟುವಟಿಕೆ | * ಪ್ರಶ್ನೋತ್ತರ / ಸಂದರ್ಶನ ವಿಧಾನದಿಂದ ಲೇಖಕರಾದ ಶ್ರೀ ದೇವನೂರು ಮಹಾದೇವ ಅವರನ್ನು ಪರಿಚಯಿಸುವ ಚಟುವಟಿಕೆ.<br>* ಉಪಾಧ್ಯಾಯರು ಪಾಠವನ್ನು ಓದುವುದು.<br>* ಉಪಾಧ್ಯಾಯರ ಓದನ್ನು ಅನುಸರಿಸಿ ವಿದ್ಯಾರ್ಥಿಗಳು ಪಾಠವನ್ನು ಓದುವ ಚಟುವಟಿಕೆ.<br>* ನಿಘಂಟನ್ನು ಬಳಸಿಕೊಂಡು ಹೊಸಪದಗಳಿಗೆ ಸಮಾನಾರ್ಥಕ ಪದಗಳನ್ನು ಹುಡುಕಿಸುವ ಚಟುವಟಿಕೆ.<br>* ವಿದ್ಯಾರ್ಥಿಗಳು ಪಾಠವನ್ನು ಮೌನವಾಗಿ ಓದಿ, ಅರ್ಥೈಸಿಕೊಳ್ಳುವ ಚಟುವಟಿಕೆ.<br>* ವಿವರಣೆ – ಚರ್ಚೆ – ಪ್ರಶ್ನೋತ್ತರ ವಿಧಾನದಿಂದ ಪಾಠದ ಬೆಳವಣಿಗೆ<br>* ಉಪಘಟಕಗಳು :–<br>1. ಕವಿ ಸಿದ್ಧಲಿಂಗಯ್ಯ ಅವರು ಹೇಳಿದ ಮನೆ ಮಂಚಮ್ಮನ ಕಥೆ.<br>2. ಬುದ್ಧ, ಬಸವ, ಪರಮಹಂಸ, ಗಾಂಧಿ, ಐನ್‌ಸ್ಟೈನ್, ಅಂಬೇಡ್ಕರ್, ಟಾಲ್‌ಸ್ಟಾಯ್, | * ಶ್ರೀ ದೇವನೂರು ಮಹಾದೇವ ಅವರ ಭಾವಚಿತ್ರ<br>* ಎದೆಗೆ ಬಿದ್ದ ಅಕ್ಷರ ಆಕರ ಕೃತಿ<br>* ಪಠ್ಯ ಪುಸ್ತಕ<br>* ಕನ್ನಡ ರತ್ನಕೋಶ<br>* ಕವಿ ಸಿದ್ಧಲಿಂಗಯ್ಯ ಅವರ ಚಿತ್ರ<br>* ಕನ್ನಡ ವಿಷಯ ವಿಶ್ವಕೋಶ.<br>* ಬುದ್ಧ, ಬಸವ, | 1. ಶ್ರೀ ದೇವನೂರು ಮಹಾದೇವ ಅವರ ಕಾಲ ಮತ್ತು ಸ್ಥಳ ತಿಳಿಸಿ.<br>2. ಶ್ರೀ ದೇವನೂರು ಮಹಾದೇವ ಅವರು ರಚಿಸಿದ ಕೃತಿಗಳನ್ನು ಹೆಸರಿಸಿ.<br>3. ಶ್ರೀ ದೇವನೂರು ಮಹಾದೇವ ಅವರಿಗೆ ದೊರೆತ ಪ್ರಶಸ್ತಿಗಳನ್ನು ಹೆಸರಿಸಿ.<br>4. 'ಎದೆಗೆ ಬಿದ್ದ ಅಕ್ಷರ' ಗದ್ಯಪಾಠದ ಆಕರ ಕೃತಿ ಯಾವುದು?<br>5. 'ಆಂದೋಲನ' ಪದದ ಅರ್ಥವೇನು?<br>6. 'ಆರ್ತತೆ' ಪದದ ಅರ್ಥವೇನು?<br>7. 'ಕ್ಷೋಭೆ' ಪದದ ಅರ್ಥವೇನು?<br>8. 'ಜಾಗತೀಕರಣ' ಎಂದರೇನು?<br>9. ಮನೆ ಮಂಚಮ್ಮನ ಕಥೆಯನ್ನು ದೇವನೂರು ಮಹಾದೇವ ಅವರಿಗೆ ಹೇಳಿದವರು ಯಾರು?<br>10. ಮನೆ ಮಂಚಮ್ಮ ಯಾರು?<br>11. ಮನೆ ಮಂಚಮ್ಮ ತನಗೆ ಗುಡಿಯನ್ನು ಕಟ್ಟದಂತೆ ತನ್ನ ಭಕ್ತರಿಗೆ ಹೇಳಲು ಕಾರಣವೇನು?<br>12. ಜಾತಿಯಾಗದೆ ಧರ್ಮವಾದರೆ |

| | | | |
|---|---|---|---|
| | ಶೇಕ್ಸ್‌ಪಿಯರ್, ಪಂಪ, ಕುಮಾರ ವ್ಯಾಸ, ಬೇಂದ್ರೆ, ಕುವೆಂಪು ಅವರಲ್ಲಿ ಕಂಡುಬರುವ ವೈಚಾರಿಕ ಚಿಂತನೆಗಳು.<br>3. ಅಶೋಕ ಪೈ ಅವರು ಹೇಳಿದ ಸಂಶೋಧನಾ ಸತ್ಯ ಕಥೆ. ಬುದ್ಧನ ಕಾರುಣ್ಯ ಎಲ್ಲರಲ್ಲಿಯೂ ಮೂಡಬೇಕಾದ ಅಗತ್ಯ.<br>4. ತದ್ಧಿತಾಂತಗಳನ್ನು ಉದಾಹರಣೆಯ ಸಹಿತ ಪರಿಚಯ ಮಾಡುವುದು.<br>5. ಪತ್ರಿಕಾ ವರದಿ ಬರೆಯುವ ವಿಧಾನವನ್ನು ಉದಾಹರಣೆಯ ಸಹಿತ ವಿವರಿಸುವುದು. | ಪರಮಹಂಸ, ಗಾಂಧಿ, ಐನ್‌ಸ್ಟೈನ್, ಅಂಬೇಡ್ಕರ್, ಟಾಲ್‌ಸ್ಟಾಯ್, ಶೇಕ್ಸ್‌ಪಿಯರ್, ಪಂಪ, ಕುಮಾರ ವ್ಯಾಸ, ಬೇಂದ್ರೆ, ಕುವೆಂಪು, ಅಶೋಕ ಪೈ ಅವರ ಚಿತ್ರಗಳು | ಮಹೋನ್ನತ ಧರ್ಮವಾಗುವುದು ಯಾವುದು?<br>13. ಅಶೋಕ ಪೈ ಅವರು ಹೇಳಿದ ಸಂಶೋಧನಾ ಸತ್ಯಕಥೆ ಯಾವುದು?<br>14. ತದ್ಧಿತಾಂತಗಳ ವಿಧಗಳು ಯಾವುವು?<br>15. ಪತ್ರಿಕಾ ವರದಿ ಎಂದರೇನು? ಅದರ ಆವಶ್ಯಕತೆ ಏನು? |
| ಅನ್ವಯ ಚಟುವಟಿಕೆ | 1. ಬಸವಣ್ಣನವರ 5 ವಚನಗಳನ್ನು ಸಂಗ್ರಹಿಸಿ.<br>2. ಅಂಬೇಡ್ಕರ್ ಅವರ ಜೀವನ ಚರಿತ್ರೆಯನ್ನು ಸಂಕ್ಷಿಪ್ತವಾಗಿ ಬರೆಯಿರಿ.<br>3. 'ಬುದ್ಧನು ಕರುಣಾಮಯಿ' ಎಂಬ ವಿಷಯವನ್ನು ಕುರಿತು ಪ್ರಬಂಧ ಬರೆಯಿರಿ.<br>4. ಪಾಠದಲ್ಲಿ ಬರುವ ಸರಳ ವ್ಯಾಕರಣಾಂಶಗಳನ್ನು ಗುರುತಿಸಿ, ವಿವರಿಸಿ. | * ಬಸವಣ್ಣನವರ ವಚನಗಳು<br>* ಅಂಬೇಡ್ಕರ್ ಅವರ ಜೀವನ ಚರಿತ್ರೆ.<br>* ಪಠ್ಯಪುಸ್ತಕ | 1. 'ಮಹೋನ್ನತ' ಪದದಲ್ಲಿ ಆಗಿರುವ ಸಂಧಿ ಯಾವುದು?<br>2. 'ಪುಣ್ಯದಂತೆ' ಪದವು ಯಾವ ವ್ಯಾಕರಣಾಂಶಕ್ಕೆ ಉದಾಹರಣೆ ಆಗಿದೆ?<br>3. 'ಟೆಲಿವಿಷನ್' ಪದವು ಯಾವ ಭಾಷೆಯಿಂದ ಕನ್ನಡಕ್ಕೆ ಬಂದಿದೆ? |
| ಮೌಲ್ಯಮಾಪನ ಚಟುವಟಿಕೆ | * ಹಿಮ್ಮಾಹಿತಿ<br>* ಗೃಹಪಾಠ<br>* ಅಭ್ಯಾಸದ ಚಟುವಟಿಕೆಗಳು<br>* ನಿಯೋಜಿತ ಚಟುವಟಿಕೆಗಳು<br>* ಘಟಕ ಪರೀಕ್ಷೆ | * ಪ್ರಶ್ನಾವಳಿ<br>* ಪ್ರಶ್ನಾವಳಿ<br>* ಪಠ್ಯಪುಸ್ತಕ<br>* ಮಾಹಿತಿ ಸಂಗ್ರಹ<br>* ಪ್ರಶ್ನಾವಳಿ | * ಮೌಖಿಕ ಪರೀಕ್ಷೆ<br>* ಅವಲೋಕನ<br>* ಅವಲೋಕನ<br>* ಅವಲೋಕನ<br>* ಲಿಖಿತ ಪರೀಕ್ಷೆ |

ಶಿಕ್ಷಕರ ಸಹಿ ಮುಖ್ಯಶಿಕ್ಷಕರ ಸಹಿ

**ಪ್ರಥಮ ಭಾಷೆ ಕನ್ನಡ ಘಟಕ – 12 10 ನೆಯ ತರಗತಿ**

**ಪದ್ಯಪಾಠ – 6. ಕೌರವೇಂದ್ರನ ಕೊಂದೆ ನೀನು – ಕುಮಾರವ್ಯಾಸ**

ಕಲಿಕೆಗೆ ಬೇಕಾದ ಅವಧಿಗಳು : ಪ್ರಾರಂಭದ ದಿನಾಂಕ :

ಮುಕ್ತಾಯದ ದಿನಾಂಕ :

ಕಲಿಕಾಂಶಗಳು : 1. ಕವಿ ಗದುಗಿನ ನಾರಣಪ್ಪ ಅವರ ಪರಿಚಯ ಮಾಡುವರು ಹಾಗೂ ಪದ್ಯದ ಆಶಯ ತಿಳಿಯುವರು.
2. ಹಳಗನ್ನಡದಲ್ಲಿ ರಚಿತವಾದ ಮಹಾಭಾರತ ಆಧಾರಿತ ಮಹಾಕಾವ್ಯಗಳನ್ನು ಹೆಸರಿಸುವರು.
3. ಭಾರತೀಯ ಮಹಾಕಾವ್ಯ 'ಮಹಾಭಾರತ'ದ ಕಥೆಯನ್ನು ಸಂಕ್ಷಿಪ್ತವಾಗಿ ಹೇಳುವರು.

6. ಶ್ರೀಕೃಷ್ಣನ ಸಂಧಾನ ವಿಫಲವಾಗಲು ಕಾರಣವಾದ ಅಂಶಗಳನ್ನು ಕುರಿತು ಚರ್ಚಿಸುವರು.
4. ಪದ್ಯಪಾಠದಲ್ಲಿ ಬಂದಿರುವ ಹೊಸಪದಗಳನ್ನು ಅರ್ಥೈಸಿಕೊಳ್ಳುವರು.
5. ಶ್ರೀಕೃಷ್ಣನು ಕರ್ಣನನ್ನು ಜೊತೆಯಲ್ಲಿ ಬರುವಂತೆ ಕರೆಯಲು ಕಾರಣವಾದ ಅಂಶಗಳನ್ನು ಗುರುತಿಸುವರು.
6. ಶ್ರೀ ಕೃಷ್ಣನು ಕರ್ಣನನ್ನು ರಥದಲ್ಲಿ ಕುಳ್ಳಿರಿಸಿಕೊಂಡು ಹೇಳಿದ ಮಾತುಗಳನ್ನು ವಿವರಿಸುವರು.
7. ಶ್ರೀಕೃಷ್ಣನು ಕರ್ಣನಿಗೆ ಜನ್ಮ ರಹಸ್ಯವನ್ನು ತಿಳಿಸಿ, ನೀಡಿದ ಆಮಿಷಗಳ ಬಗೆಗೆ ವಿವರಿಸುವರು.
8. ಶ್ರೀಕೃಷ್ಣನನಿಂದ ಜನ್ಮ ರಹಸ್ಯ ತಿಳಿದು, ಕರ್ಣನ ಮನದಲ್ಲಿ ಉಂಟಾದ ಭಾವನೆಗಳನ್ನು ವಿವರಿಸುವರು.
9. ಕರ್ಣನು ಶ್ರೀಕೃಷ್ಣನ ಆಮಿಷವನ್ನು ತಿರಸ್ಕರಿಸಿಲು ನೀಡುವ ಕಾರಣವನ್ನು ಮೆಚ್ಚುವರು.
10. ಕುರುಕ್ಷೇತ್ರ ಯುದ್ಧದಲ್ಲಿ ಕರ್ಣನು ತಾನು ಹೇಗೆ ಹೋರಾಡುತ್ತೇನೆ ಎಂದು ಹೇಳಿದ ಮಾತುಗಳನ್ನು ವಿವರಿಸುವರು.
11. ಮಾತ್ರಾಗಣ ಛಂದಸ್ಸನ್ನು ಉದಾಹರಣೆಗಳ ಸಹಿತ ಅರ್ಥೈಸಿಕೊಳ್ಳುವರು.
10. ಷಟ್ಪದಿಯ ವಿಧಗಳನ್ನು ಉದಾಹರಣೆಗಳ ಸಹಿತ ತಿಳಿದುಕೊಳ್ಳುವರು.
12. ಭಾಮಿನಿ ಷಟ್ಪದಿಯ ಲಕ್ಷಣವನ್ನು ಉದಾಹರಣೆ ಸಹಿತ ತಿಳಿದುಕೊಳ್ಳುವರು.
13. ಅಭ್ಯಾಸ ಪುಸ್ತಕದ ಪ್ರಶ್ನೆಗಳಿಗೆ ಉತ್ತರಿಸುವರು.

| ಹಂತಗಳು | ಕಲಿಕೆಯನ್ನು ಅನುಕೂಲಿಸುವ ಚಟುವಟಿಕೆಗಳು | ಬಳಸುವ ಕಲಿಕಾ ಸಾಮಗ್ರಿಗಳು | ಮೌಲ್ಯಮಾಪನದ ಪ್ರಶ್ನೆಗಳು |
|---|---|---|---|
| ಪ್ರೇರಣಾ ಚಟುವಟಿಕೆ | * ನಡುಗನ್ನಡ ಷಟ್ಪದಿ ಮಹಾಕಾವ್ಯಗಳ ಲಕ್ಷಣ ತಿಳಿಸುವುದು.<br>* ನಡುಗನ್ನಡ ಷಟ್ಪದಿ ಮಹಾಕಾವ್ಯಗಳನ್ನು ರಚಿಸಿದ ಕವಿಗಳು ಹಾಗೂ ಕಾವ್ಯಗಳನ್ನು ಪಟ್ಟಿ ಮಾಡಿಸುವುದು.<br>* ಭಾರತೀಯ ಮಹಾಕಾವ್ಯಗಳ ಹಾಗೂ ರಚನಾಕಾರರ ಬಗ್ಗೆ ತಿಳಿಸುವುದು.<br>* ಮಹಾಭಾರತದ ಕಥೆಯನ್ನು ಸಂಕ್ಷಿಪ್ತವಾಗಿ ಹೇಳುವುದು / ಹೇಳಿಸುವುದು. | * ಕನ್ನಡ ವಿಷಯ ವಿಶ್ವಕೋಶ.<br>* ನಡುಗನ್ನಡ ಷಟ್ಪದಿ ಮಹಾಕಾವ್ಯಗಳು ಕೃತಿ.<br>* ಸಂಕ್ಷಿಪ್ತ ಕನ್ನಡ ಮಹಾಭಾರತ.<br>* ವ್ಯಾಸರ ಚಿತ್ರ | 1. ಷಟ್ಪದಿಯ ಲಕ್ಷಣವೇನು?<br>2. ನಡುಗನ್ನಡದ ಪ್ರಸಿದ್ಧ ಷಟ್ಪದಿ ಮಹಾಕಾವ್ಯಗಳನ್ನು ಹೆಸರಿಸಿ.<br>3. ನಡುಗನ್ನಡದ ಪ್ರಸಿದ್ಧ ಕವಿಗಳನ್ನು ಹೆಸರಿಸಿ.<br>4. ಮಹಾಭಾರತ ಮಹಾಕಾವ್ಯವನ್ನು ರಚಿಸಿದ ಮಹರ್ಷಿ ಯಾರು?<br>5. ಶ್ರೀಕೃಷ್ಣನು ದುರ್ಯೋಧನನ ಬಳಿಗೆ ಸಂಧಾನಕ್ಕಾಗಿ ಬರಲು ಕಾರಣವೇನು? |
| ಕಲಿಕಾ ಚಟುವಟಿಕೆ | * ಪ್ರಶ್ನೋತ್ತರ / ಸಂದರ್ಶನ ವಿಧಾನದಿಂದ ಗದುಗಿನ ನಾರಣಪ್ಪ ಅವರನ್ನು ಪರಿಚಯಿಸುವ ಚಟುವಟಿಕೆ.<br>* ಉಪಾಧ್ಯಾಯರು ಪದ್ಯವನ್ನು ಓದುವುದು.<br>* ಉಪಾಧ್ಯಾಯರ ಓದನ್ನು ಅನುಸರಿಸಿ ವಿದ್ಯಾರ್ಥಿಗಳು ಪದ್ಯವನ್ನು ಓದುವ ಚಟುವಟಿಕೆ.<br>* ನಿಘಂಟನ್ನು ಬಳಸಿಕೊಂಡು ಹೊಸಪದಗಳಿಗೆ ಸಮಾನಾರ್ಥಕ ಪದಗಳನ್ನು ಹುಡುಕಿಸುವ ಚಟುವಟಿಕೆ.<br>* ವಿದ್ಯಾರ್ಥಿಗಳು ಮೌನವಾಗಿ ಓದಿ, ಪದ್ಯವನ್ನು ಅರ್ಥೈಸಿಕೊಳ್ಳುವ ಚಟುವಟಿಕೆ.<br>* ವಿವರಣೆ – ಚರ್ಚೆ – ಪ್ರಶ್ನೋತ್ತರ ವಿಧಾನದಿಂದ ಪಾಠದ ಬೆಳವಣಿಗೆ<br>* <u>ಉಪಘಟಕಗಳು :–</u><br>1. ಕೃಷ್ಣನು ಕರ್ಣನನ್ನು ರಥದಲ್ಲಿ ಕುಳ್ಳಿರಿಸಿಕೊಂಡು ಕರೆದುಕೊಂಡು ಹೋಗುವುದು, ಕರ್ಣನು ಕೃಷ್ಣನ ಪಕ್ಕದಲ್ಲಿ ಕುಳಿತುಕೊಳ್ಳಲು ಹಿಂಜರಿಯುವುದು, "ನನಗೂ ನಿನಗೂ ಭೇದವಿಲ್ಲ ನಾವಿಬ್ಬರೂ ಒಂದೇ" ಎಂದು ಕೃಷ್ಣನು ಹೇಳುವುದು.<br>2. ಕೃಷ್ಣನು ಕರ್ಣನಿಗೆ ಜನ್ಮ ರಹಸ್ಯವನ್ನು ತಿಳಿಸಿ, ರಾಜ್ಯದ ಆಮಿಷವನ್ನು ಒಡ್ಡುವುದು, ರಾಜನಾದರೆ ಅವನ ವೈಭೋಗ ಹೇಗಿರುತ್ತದೆ ಎಂದು ವರ್ಣಿಸುವುದು.<br>3. ಕರ್ಣನು ಕೃಷ್ಣನ ಮಾತಿಗೆ ಉತ್ತರಿಸದೆ ಮೌನವಾಗಿ ಮನದಲ್ಲಿ 'ಕುರುಪತಿಗೆ ಕೇಡಾದುದು' ಎಂದು | * ಗದುಗಿನ ನಾರಣಪ್ಪ ಅವರ ಕಾಲ್ಪನಿಕ ಚಿತ್ರ<br>* 'ಕರ್ನಾಟ ಭಾರತ ಕಥಾಮಂಜರಿ' ಕೃತಿ<br>* ಪಠ್ಯಪುಸ್ತಕ<br>* ಕನ್ನಡ–ಕನ್ನಡ ನಿಘಂಟು<br>* 'ಕೌರವೇಂದ್ರನ ಕೊಂದೆ ನೀನು' ಪದ್ಯದ ಗಮಕ ವಾಚನದ ಧ್ವನಿಸುರುಳಿ | 1. ಗದುಗಿನ ನಾರಣಪ್ಪ ಅವರ ಕಾಲ ಮತ್ತು ಸ್ಥಳವನ್ನು ತಿಳಿಸಿ.<br>2. ಗದುಗಿನ ನಾರಣಪ್ಪ ಅವರ ಕೃತಿಗಳನ್ನು ಹೆಸರಿಸಿ.<br>3. ನಾರಣಪ್ಪ ಅವರಿಗೆ 'ಕುಮಾರ ವ್ಯಾಸ' ಎಂದು ಕರೆಯಲು ಕಾರಣವೇನು?<br>4. ಗದುಗಿನ ನಾರಣಪ್ಪ ಅವರಿಗೆ ಇರುವ ಬಿರುದುಗಳನ್ನು ಹೆಸರಿಸಿ.<br>5. 'ಕೌರವೇಂದ್ರನ ಕೊಂದೆ ನೀನು' ಪದ್ಯದ ಆಕರ ಕೃತಿ ಯಾವುದು?<br>6. 'ಚಿತ್ತಗ್ಲಾನಿ' ಪದದ ಅರ್ಥವೇನು?<br>7. 'ಕಿಂಕರ' ಪದದ ಅರ್ಥವೇನು?<br>8. 'ದೃಗುಜಲ' ಪದದ ಅರ್ಥವೇನು?<br>9.. 'ಕೈವಾರ' ಪದದ ಅರ್ಥವೇನು?<br>10. 'ರಾಜೀವ ಸಖ' ಎಂದರೆಯಾರು?<br>11. ಕೃಷ್ಣನು ಕರ್ಣನನ್ನು ಬರಸೆಳೆಸದು ರಥದಲ್ಲಿ ಕುಳ್ಳಿರಿಸಿಕೊಂಡಾಗ ಕರ್ಣನು ಹೇಳಿದ ಮಾತುಗಳೇನು?<br>12. ಯಾವ ಮಾತುಗಳನ್ನು ಹೇಳಿತ ಕೃಷ್ಣನು ಕರ್ಣನ ಮನದಲ್ಲಿ ಭಯವನ್ನು ಬಿತ್ತಿದನು?<br>13. ಕುಂತಿಯ ಪಡೆದ ಎಷ್ಟನೆಯ ಮಂತ್ರದಲ್ಲಿ ಕರ್ಣನು ಜನಿಸಿದನು?<br>14. ಕೃಷ್ಣನು ಕರ್ಣನಿಗೆ ಯಾವ ಆಮಿಷವನ್ನು ಒಡ್ಡಿದನು?<br>15. ಕುರುಪತಿಗೆ ಕೇಡಾದುದು ಎಂದು ಕರ್ಣನು ಮನದಲ್ಲಿ ಚಿಂತಿಸಲು |

| | | | |
|---|---|---|---|
| | ಚಿಂತಿಸುವುದು, ಮೌನ ಮುರಿದು ಮಾತನಾಡುವಂತೆ ಕೃಷ್ಣನು ಒತ್ತಾಯಿಸುವುದು.<br>4. ಕರ್ಣನು ಕೃಷ್ಣನಿಗೆ ನನಗೆ ರಾಜ್ಯ ಬೇಡ, ದುರ್ಯೋಧನನು ಆದಂತೆ ಆಗುವೆನು ಹಾಗೂ ಕುರುಕ್ಷೇತ್ರ ಯುದ್ಧದಲ್ಲಿ ತಾನು ಹೋರಾಡುವೆನು" ಎಂದು ಹೇಳುವುದು.<br>5. ಷಟ್ಪದಿಯ ವಿಧಗಳನ್ನು ಉದಾಹರಣೆಗಳ ಸಹಿತ ವಿವರಿಸುವುದು.<br>6. ಭಾಮಿನಿ ಷಟ್ಪದಿಯ ಲಕ್ಷಣವನ್ನು ಉದಾಹರಣೆಯ ಸಹಿತ ವಿವರಿಸುವುದು. | * ಷಟ್ಪದಿಯ ವಿಧಗಳ ಚಾರ್ಟ್<br>* ಭಾಮಿನಿ ಷಟ್ಪದಿಯ ಚಾರ್ಟ್ | ಕಾರಣವೇನು?<br>16. ಕೃಷ್ಣನು ಕರ್ಣನಿಗೆ "ನಾನು ನಿನಗೆ ಏನನ್ನು ಬಯಸುವುದಿಲ್ಲ" ಎಂದು ಹೇಳುತ್ತಾನೆ?<br>17. ಕರ್ಣನು ಕುರುಕ್ಷೇತ್ರ ಹೇಗೆ ಹೋರಾಡುತ್ತೇನೆ ಎಂದು ಕೃಷ್ಣನಿಗೆ ಹೇಳುತ್ತಾನೆ.<br>18. ಷಟ್ಪದಿಯಲ್ಲಿ ಎಷ್ಟು ವಿಧಗಳಿವೆ?<br>19. ಭಾಮಿನಿ ಷಟ್ಪದಿಯ ಲಕ್ಷಣವನ್ನು ತಿಳಿಸಿ. |
| ಅನ್ವಯ ಚಟುವಟಿಕೆ | 1. 'ಕೌರವೇಂದ್ರನ ಕೊಂದೆ ನೀನು' ಪದ್ಯದ ಗಮಕ ವಾಚನವನ್ನು ಕೇಳಿಸುವುದು ಹಾಗೂ ಗಮಕ ವಾಚನ ಮಾಡಿಸುವುದು.<br>2. 'ಕೌರವೇಂದ್ರನ ಕೊಂದೆ ನೀನು'ಪದ್ಯದ ಸಾರಾಂಶವನ್ನು ಬರೆಸುವುದು.<br>3. 'ಕೌರವೇಂದ್ರನ ಕೊಂದೆ ನೀನು' ಪದ್ಯದಲ್ಲಿ ಬರುವ ಸರಳ ವ್ಯಾಕರಣಾಂಶಗಳನ್ನು ಗುರುತಿಸುವುದು | * 'ಕೌರವೇಂದ್ರನ ಕೊಂದೆ ನೀನು' ಪದ್ಯದ ಗಮಕ ವಾಚನದ ಧ್ವನಿಸುರುಳಿ<br>* ಪಠ್ಯಪುಸ್ತಕ | 1. 'ಇನತನೂಜ' ಪದವು ಯಾವ ಸಮಾಸಕ್ಕೆ ಉದಾಹರಣೆಯಾಗಿದೆ?<br>2. 'ಹಸಾದ' ಪದದ ತತ್ಸಮ ರೂಪವೇನು><br>3. 'ಮಾರಿಗೌತಣ' ಪದದಲ್ಲಿ ಆಗಿರುವ ಸಂಧಿ ಯಾವುದು?<br>4. 'ಬಾಯ್ದಂಬುಲ' ಪದದಲ್ಲಿ ಆಗಿರುವ ಸಂಧಿ ಯಾವುದು? |
| ಮೌಲ್ಯಮಾಪನ ಚಟುವಟಿಕೆ | * ಹಿಮ್ಮಾಹಿತಿ<br>* ಗೃಹಪಾಠ<br>* ಅಭ್ಯಾಸದ ಚಟುವಟಿಕೆಗಳು<br>* ನಿಯೋಜಿತ ಚಟುವಟಿಕೆಗಳು<br>* ಘಟಕ ಪರೀಕ್ಷೆ | * ಪ್ರಶ್ನಾವಳಿ<br>* ಪ್ರಶ್ನಾವಳಿ<br>* ಪಠ್ಯಪುಸ್ತಕ<br>* ಮಾಹಿತಿ ಸಂಗ್ರಹ<br>* ಪ್ರಶ್ನಾವಳಿ | * ಮೌಖಿಕ ಪರೀಕ್ಷೆ<br>* ಅವಲೋಕನ<br>* ಅವಲೋಕನ<br>* ಅವಲೋಕನ<br>* ಲಿಖಿತ ಪರೀಕ್ಷೆ |

ಶಿಕ್ಷಕರ ಸಹಿ ಮುಖ್ಯಶಿಕ್ಷಕರ ಸಹಿ

| | | |
|---|---|---|
| ಪ್ರಥಮ ಭಾಷೆ ಕನ್ನಡ | ಘಟಕ – 13 | 10 ನೆಯ ತರಗತಿ |
| ಗದ್ಯಪಾಠ – 7. | ವೃಕ್ಷಸಾಕ್ಷಿ | – ದುರ್ಗಸಿಂಹ |

ಕಲಿಕೆಗೆ ಬೇಕಾದ ಅವಧಿಗಳು : ಪ್ರಾರಂಭದ ದಿನಾಂಕ :

ಮುಕ್ತಾಯದ ದಿನಾಂಕ :

ಕಲಿಕಾಂಶಗಳು :
1. ಕವಿ ದುರ್ಗಸಿಂಹ ಅವರ ಪರಿಚಯ ಮಾಡುವರು ಹಾಗೂ ಪಾಠದ ಆಶಯವನ್ನು ತಿಳಿಯುವರು.
2. ಕನ್ನಡ ಕಥಾ ಸಾಹಿತ್ಯ ಪರಂಪರೆಯ ಬಗೆಗೆ ಅರಿವು ಮೂಡಿಸಿಕೊಳ್ಳುವರು.
3. ಕನ್ನಡದ ಪ್ರಸಿದ್ಧ ಕಥೆಗಾರರನ್ನು ಪರಿಚಯಿಸುವರು.
4. 'ಪಂಚತಂತ್ರ' ಕಥೆಯ ಉಗಮಕ್ಕೆ ಕಾರಣವಾದ ಅಂಶಗಳನ್ನು ಅರ್ಥೈಸಿಕೊಳ್ಳುವರು.
5. ಗದ್ಯಪಾಠದಲ್ಲಿ ಬಂದಿರುವ ಹೊಸಪದಗಳನ್ನು ಅರ್ಥೈಸಿಕೊಳ್ಳುವರು.
6. ಧರ್ಮಬುದ್ಧಿ ಮತ್ತು ದುಷ್ಟಬುದ್ಧಿ ತಾವು ಸಂಪಾದಿಸಿದ ಹಣವನ್ನು ಮರದ ಕೆಳಗೆ ಹೂತಿಡಲು ಕಾರಣವಾದ ಅಂಶಗಳನ್ನು ವಿವರಿಸುವರು.
7. ದುಷ್ಟಬುದ್ಧಿಯು ಹಣವನ್ನು ಕದ್ದು, ಧರ್ಮಬುದ್ಧಿಯ ಮೇಲೆ ಕಳ್ಳತನದ ಆರೋಪ ಹೊರಿಸಿದ್ದು ಸರಿಯೇ? ತಪ್ಪೇ ಎಂದು ಚರ್ಚಿಸುವರು.
8. ದುಷ್ಟಬುದ್ಧಿಯ ತಂದೆಯಾದ ಪ್ರೇಮಮತಿಯು ಹೇಳಿದ ಬುದ್ಧಿಮಾತುಗಳನ್ನು ಅರ್ಥೈಸುವರು.
9. ಧರ್ಮಬುದ್ಧಿಯು ತನ್ನ ಚತುರತೆಯಿಂದ ದುಷ್ಟಬುದ್ಧಿಯ ಮೋಸವನ್ನು ಬಯಲು ಮಾಡಿದ ವಿಧಾನವನ್ನು ವಿವರಿಸುವರು.
10. ಪಾಪಕಾರ್ಯ ಮಾಡುವುದು, ಪಾಪಕಾರ್ಯಕ್ಕೆ ಸಹಕರಿಸುವುದು ದುರಂತಕ್ಕೆ ಕಾರಣವಾಗುತ್ತದೆ ಎಂಬ ಅಂಶವನ್ನು ಮನಗಾಣುವರು.
11. ರಳ–ಕುಳ–ಕ್ಷಳಗಳ ಅಕ್ಷರಗಳ ಬಗೆಗೆ ಪರಿಚಯ ಮಾಡಿಕೊಳ್ಳುವರು.

12. ಕಂದಪದ್ಯದ ಲಕ್ಷಣವನ್ನು ಉದಾಹರಣೆಯ ಸಹಿತ ವಿವರಿಸುವರು.
13. ಖ್ಯಾತ ಕರ್ನಾಟಕ ವೃತ್ತ ಪದ್ಯಗಳ ಲಕ್ಷಣವನ್ನು ಉದಾಹರಣೆಗಳ ಸಹಿತ ಪರಿಚಯ ಮಾಡಿಕೊಳ್ಳುವರು.
14. ಅಭ್ಯಾಸ ಪುಸ್ತಕದ ಪ್ರಶ್ನೆಗಳಿಗೆ ಉತ್ತರಿಸುವರು.

| ಹಂತಗಳು | ಕಲಿಕೆಯನ್ನು ಅನುಕೂಲಿಸುವ ಚಟುವಟಿಕೆಗಳು | ಬಳಸುವ ಕಲಿಕಾ ಸಾಮಗ್ರಿಗಳು | ಮೌಲ್ಯಮಾಪನದ ಪ್ರಶ್ನೆಗಳು |
|---|---|---|---|
| ಪ್ರೇರಣಾ ಚಟುವಟಿಕೆ | * ಕನ್ನಡ ಕಥಾ ಸಾಹಿತ್ಯ ಪರಂಪರೆಯನ್ನು ಪರಿಚಯಿಸುವುದು.<br>* ಪಂಚತಂತ್ರ ಕಥೆಯ ರಚನಾ ಹಿನ್ನೆಲೆಯನ್ನು ತಿಳಿಸುವುದು.<br>* ಕನ್ನಡ ಪ್ರಸಿದ್ದ ಕಥೆಗಾರರನ್ನು ಪರಿಚಯಿಸುವುದು. | * ಕನ್ನಡ ವಿಷಯ ವಿಶ್ವಕೋಶ.<br>* ಕನ್ನಡ ಪ್ರಸಿದ್ದ ಕಥೆಗಾರರ ಪುಸ್ತಕ ಪ್ರದರ್ಶನ | 2. ಪಂಚತಂತ್ರ ಕಥೆಯ ರಚನಾ ಹಿನ್ನೆಲೆ ಏನು?<br>2. 'ಪಂಚತಂತ್ರ'ಗಳು ಯಾವುವು?<br>4. ಕನ್ನಡದ ಪ್ರಸಿದ್ಧ ಕಥೆಗಾರರನ್ನು ಹೆಸರಿಸಿರಿ. |
| ಕಲಿಕಾ ಚಟುವಟಿಕೆ | * ಪ್ರಶ್ನೋತ್ತರ / ಸಂದರ್ಶನ ವಿಧಾನದಿಂದ ಕವಿ ದುರ್ಗಸಿಂಹ ಅವರನ್ನು ಪರಿಚಯಿಸುವ ಚಟುವಟಿಕೆ.<br>* ಉಪಾಧ್ಯಾಯರು ಪಾಠವನ್ನು ಓದುವುದು.<br>* ಉಪಾಧ್ಯಾಯರ ಓದನ್ನು ಅನುಸರಿಸಿ ವಿದ್ಯಾರ್ಥಿಗಳು ಪಾಠವನ್ನು ಓದುವ ಚಟುವಟಿಕೆ.<br>* ನಿಘಂಟನ್ನು ಬಳಸಿಕೊಂಡು ಹೊಸಪದಗಳಿಗೆ ಸಮಾನಾರ್ಥಕ ಪದಗಳನ್ನು ಹುಡುಕಿಸುವ ಚಟುವಟಿಕೆ.<br>* ವಿದ್ಯಾರ್ಥಿಗಳು ಪಾಠವನ್ನು ಮೌನವಾಗಿ ಓದಿ, ಅರ್ಥೈಸಿಕೊಳ್ಳುವ ಚಟುವಟಿಕೆ.<br>* ವಿವರಣೆ – ಚರ್ಚೆ – ಪ್ರಶ್ನೋತ್ತರ ವಿಧಾನದಿಂದ ಪಾಠದ ಬೆಳವಣಿಗೆ<br>* <u>ಉಪಘಟಕಗಳು :–</u><br>1. ಧರ್ಮಬುದ್ಧಿ ಮತ್ತು ದುಷ್ಟಬುದ್ಧಿಯರು ತಾವು ಸಂಪಾದಿಸಿ ಹಣವನ್ನು ಮರದ ಕೆಳಗೆ ಹೂತಿಡುವುದು, ದುಷ್ಟಬುದ್ಧಿಯು ಹೂತಿಟ್ಟ ಹಣವನ್ನು ಕದ್ದೊಯ್ಯುವುದು.<br>2. ದುಷ್ಟಬುದ್ಧಿಯು ಧರ್ಮಬುದ್ಧಿಯ ಮೇಲೆ ಕಳ್ಳತನದ ಆಪಾದನೆಯನ್ನು ಮಾಡುವುದು, ನ್ಯಾಯಕ್ಕಾಗಿ ಇಬ್ಬರೂ ಧರ್ಮಾದಿಕರಣರ ಬಳಿಗೆ ಹೋಗುವುದು, ಧರ್ಮಬುದ್ಧಿಯು ಹಣ ಕದ್ದಿರುವುದಕ್ಕೆ ವೃಕ್ಷವೇ ಸಾಕ್ಷಿ ಎಂದು ದುಷ್ಟಬುದ್ಧಿ ಹೇಳುವುದು.<br>3. ದುಷ್ಟಬುದ್ಧಿಯು ತನ್ನ ತಂದೆ ಪ್ರೇಮಮತಿಯನ್ನು ಕರೆದು ವೃಕ್ಷದ ಪೊಟರೆಯಲ್ಲಿ ಅವಿತು ಧರ್ಮಬುದ್ಧಿಯೇ ಹಣವನ್ನು ಕದ್ದನು ಎಂದು ಹೇಳುವಂತೆ ಒತ್ತಾಯಿಸುವುದು. ಪ್ರೇಮಮತಿಯು ತನ್ನ ಮಗನಿಗೆ ಬುದ್ಧಿಮಾತುಗಳನ್ನು ಹೇಳುವುದು.<br>4. ಧರ್ಮಾಧಿಕರಣರು ವೃಕ್ಷದ ಬಳಿಗೆ ಬಂದು ಸಾಕ್ಷಿಯನ್ನು ಕೇಳುವುದು. ವೃಕ್ಷದೊಳಗೆ ಇದ್ದ ಪ್ರೇಮಮತಿಯು ಧರ್ಮಬುದ್ಧಿಯೇ ಹಣವನ್ನು ಕದ್ದನೆಂದು ಹೇಳುವುದು, ಸಂಶಯಗೊಂಡ ಧರ್ಮಬುದ್ಧಿಯು ಮರದ ಪೊಟರೆಗೆ ಬೆಂಕಿ ಹಚ್ಚಿದಾಗ ಒಳಗಿದ್ದ ದುಷ್ಟಬುದ್ಧಿಯ ತಂದೆ ಮರಣ ಹೊಂದುವುದು. ಧರ್ಮಬುದ್ಧಿಯು ತನ್ನ ಚತುರತೆಯಿಂದ ದುಷ್ಟಬುದ್ಧಿಯ ಮೋಸವನ್ನು ಬಯಲು ಮಾಡುವುದು. | * ದುರ್ಗಸಿಂಹನ ಕಾಲ್ಪನಿಕ ಚಿತ್ರ<br>* ದುರ್ಗಸಿಂಹನ ಪಂಚತಂತ್ರ ಕೃತಿ.<br><br>* ಪಠ್ಯ ಪುಸ್ತಕ<br><br>* ಕನ್ನಡ ರತ್ನಕೋಶ<br><br>* ಕನ್ನಡ ವಿಷಯ ವಿಶ್ವಕೋಶ. | 1. ಕವಿ ದುರ್ಗಸಿಂಹ ಅವರ ಕಾಲ ಮತ್ತು ಸ್ಥಳ ತಿಳಿಸಿ.<br>2. ಕವಿ ದುರ್ಗಸಿಂಹ ಅವರು ರಚಿಸಿದ ಕೃತಿಗಳನ್ನು ಹೆಸರಿಸಿ.<br>3. 'ವೃಕ್ಷಸಾಕ್ಷಿ' ಗದ್ಯಪಾಠದ ಆಕರ ಕೃತಿ ಯಾವುದು?<br>4. ಪಂಚತಂತ್ರಗಳು ಯಾವುವು?<br>5. ದುರ್ಗಸಿಂಹನ 'ಕರ್ಣಾಟಕ ಪಂಚತಂತ್ರಂ' ಕೃತಿಗೆ ಯಾರ ಕೃತಿಯು ಆಕರವಾಗಿದೆ?<br>6. 'ವಣಿಕಪುತ್ರರ್' ಪದದ ಅರ್ಥ ಏನು?<br>7. ಅಬ್ಜೋದರ ಎಂದರೆ ಯಾರು?<br>8. 'ಶಿತಿಕಂಠ' ಎಂದರೆ ಯಾರು?<br>9. ತಾವು ಸಂಪಾದಿಸಿದ ಹೊನ್ನನ್ನು ಹೂತಿಡೋಣ ಎಂದು ಸಲಹೆ ಕೊಟ್ಟವನು ಯಾರು?<br>10. ಹೂತಿಟ್ಟ ಹಣವನ್ನು ಕದ್ದವನು ಯಾರು?<br>11. ನ್ಯಾಯ ಕೇಳಲು ಧರ್ಮಬುದ್ಧಿ ಮತ್ತು ದುಷ್ಟಬುದ್ಧಿಯರು ಯಾರ ಬಳಿಗೆ ಹೋದರು?<br>12. 'ಮನುಷ್ಯನ ದುಷ್ಕೃತ ಮತ್ತು ಸುಕೃತಗಳು ಯಾರಿಗೆ ತಿಳಿಯುತ್ತವೆ' ಎಂದು ಧರ್ಮಬುದ್ಧಿಯು ಹೇಳುತ್ತಾನೆ?<br>13. ದುಷ್ಟಬುದ್ಧಿಯ ತಂದೆಯ ಹೆಸರೇನು?<br>14. ಪ್ರೇಮಮತಿಯು ಮಗನಿಗೆ ಹೇಳಿದ ಬುದ್ಧಿಮಾತುಗಳು ಯಾವುವು?<br>15. ಮರದ ಪೊಟರೆಯಲ್ಲಿ ಅವಿತು ಕುಳಿತಿದ್ದ ಪ್ರೇಮಮತಿಯು ಏನೆಂದು ಹೇಳಿದನು?<br>16. ಧರ್ಮಬುದ್ಧಿಗೆ ವೃಕ್ಷಸಾಕ್ಷಿಯ ಬಗ್ಗೆ ಸಂಶಯ ಮೂಡಲು ಕಾರಣವೇನು?<br>17. ರಹಸ್ಯವನ್ನು ಬಯಲು ಮಾಡಲು ಧರ್ಮಬುದ್ಧಿಯು ಮಾಡಿದ ಉಪಾಯವೇನು?<br>18. ಕನ್ನಡ ವರ್ಣಮಾಲೆಯಲ್ಲಿ ಎಷ್ಟು ರೀತಿಯ 'ಳ' ಕಾರಗಳಿವೆ?<br>19. ಕಂದಪದ್ಯದಲ್ಲಿ ಎಷ್ಟು ಪಾದಗಳು ಇರುತ್ತವೆ? |

| | | | |
|---|---|---|---|
| | 5. ರಳ–ಕುಳ–ಕ್ಷಳ ಅಕ್ಷರಗಳನ್ನು ಉದಾಹರಣೆಗಳ ಸಹಿತ ಪರಿಚಯಿಸುವುದು.<br>6. ಕಂದಪದ್ಯದ ಲಕ್ಷಣವನ್ನು ಉದಾಹರಣೆಗಳ ಸಹಿತ ಪರಿಚಯಿಸುವುದು.<br>7. ಖ್ಯಾತ ಕರ್ನಾಟಕ ವೃತ್ತ ಪದ್ಯಗಳ ಲಕ್ಷಣವನ್ನು ಉದಾಹರಣೆಗಳ ಸಹಿತ ಪರಿಚಯಿಸುವುದು. | ಕಂದಪದ್ಯದ ಲಕ್ಷಣದ ಚಾರ್ಟ್ | 20. ಖ್ಯಾತ ಕರ್ನಾಟಕ ವೃತ್ತಪದ್ಯಗಳು ಯಾವುವು? ಹೆಸರಿಸಿ. |
| ಅನ್ವಯ ಚಟುವಟಿಕೆ | 1. ಹಳಗನ್ನಡದ ವಾಕ್ಯಗಳನ್ನು ಹೊಸಗನ್ನಡಕ್ಕೆ ಪರಿವರ್ತಿಸುವಂತೆ ಸೂಚಿಸುವುದು.<br>2. ಹಳಗನ್ನಡ ವಿಭಕ್ತಿ ಪ್ರತ್ಯಯಗಳ ಪಟ್ಟಿಯನ್ನು ತಯಾರಿಸುವುದು.<br>3. ಪಾಠದಲ್ಲಿ ಬರುವ ಸರಳ ವ್ಯಾಕರಣಾಂಶಗಳನ್ನು ಗುರುತಿಸಿ, ವಿವರಿಸಿ. | ಪಠ್ಯಪುಸ್ತಕ<br><br>ಹೊಸಗನ್ನಡ ಹಾಗೂ ಹಳಗನ್ನಡದ ವಿಭಕ್ತಿ ಪ್ರತ್ಯಯಗಳ ಪಟ್ಟಿ | 1. 'ನೀರದಾಗಮ' ಪದದಲ್ಲಿರುವ ಸಂಧಿ ಯಾವುದು?<br>2. 'ಕೆಲದೊಳ್' ಪದದಲ್ಲಿರುವ ವಿಭಕ್ತಿ ಯಾವುದು?<br>3. 'ಬೇಹಾರಿ' ಪದದ ತತ್ಸಮ ರೂಪ ಯಾವುದು? |
| ಮೌಲ್ಯಮಾಪನ ಚಟುವಟಿಕೆ | * ಹಿಮ್ಮಾಹಿತಿ<br>* ಗೃಹಪಾಠ<br>* ಅಭ್ಯಾಸದ ಚಟುವಟಿಕೆಗಳು<br>* ನಿಯೋಜಿತ ಚಟುವಟಿಕೆಗಳು<br>* ಘಟಕ ಪರೀಕ್ಷೆ | * ಪ್ರಶ್ನಾವಳಿ<br>* ಪ್ರಶ್ನಾವಳಿ<br>* ಪಠ್ಯಪುಸ್ತಕ<br>* ಮಾಹಿತಿ ಸಂಗ್ರಹ<br>* ಪ್ರಶ್ನಾವಳಿ | * ಮೌಖಿಕ ಪರೀಕ್ಷೆ<br>* ಅವಲೋಕನ<br>* ಅವಲೋಕನ<br>* ಅವಲೋಕನ<br>* ಲಿಖಿತ ಪರೀಕ್ಷೆ |

ಶಿಕ್ಷಕರ ಸಹಿ ಮುಖ್ಯಶಿಕ್ಷಕರ ಸಹಿ

**ಪ್ರಥಮ ಭಾಷೆ ಕನ್ನಡ ಘಟಕ – 14 10 ನೆಯ ತರಗತಿ**

**ಪದ್ಯಪಾಠ – 7. ವೀರಲವ – ಲಕ್ಷ್ಮೀಶ**

ಕಲಿಕೆಗೆ ಬೇಕಾದ ಅವಧಿಗಳು : ಪ್ರಾರಂಭದ ದಿನಾಂಕ :

ಮುಕ್ತಾಯದ ದಿನಾಂಕ :

ಕಲಿಕಾಂಶಗಳು :
1. ಕವಿಗಳಾದ ಲಕ್ಷ್ಮೀಶ ಅವರ ಪರಿಚಯ ಮಾಡುವರು ಹಾಗೂ ಪದ್ಯದ ಆಶಯ ತಿಳಿಯುವರು.
2. ಕನ್ನಡದಲ್ಲಿ ರಚಿತವಾದ ರಾಮಾಯಣ ಆಧಾರಿತ ಮಹಾಕಾವ್ಯಗಳನ್ನು ಹೆಸರಿಸುವರು.
3. ಭಾರತೀಯ ಮಹಾಕಾವ್ಯ 'ರಾಮಾಯಣ'ದ ಕಥೆಯನ್ನು ಸಂಕ್ಷಿಪ್ತವಾಗಿ ಹೇಳುವರು.
6. ಶ್ರೀರಾಮನು ಸೀತೆಯನ್ನು ತೊರೆಯಲು ಕಾರಣವಾದ ಅಂಶಗಳನ್ನು ಕುರಿತು ಚರ್ಚಿಸುವರು.
4. ಪದ್ಯಪಾಠದಲ್ಲಿ ಬಂದಿರುವ ಹೊಸಪದಗಳನ್ನು ಅರ್ಥೈಸಿಕೊಳ್ಳುವರು.
5. ಶ್ರೀರಾಮನು ಅಶ್ವಮೇಧಯಾಗವನ್ನು ಮಾಡಲು ಕಾರಣವಾದ ಅಂಶಗಳನ್ನು ಗುರುತಿಸುವರು.
6. ಶ್ರೀರಾಮನ ಅಶ್ವಮೇಧಯಾಗದ ಕುದುರೆಯು ವಾಲ್ಮೀಕಿ ಆಶ್ರಮವನ್ನು ಪ್ರವೇಶಿಸಿ ಮಾಡಿದ ಅವಾಂತರಗಳನ್ನು ವಿವರಿಸುವರು.
7. ಲವನು ಆಶ್ರಮದ ಉದ್ಯಾನವನವನ್ನು ತುಳಿದು ಹಾಳು ಮಾಡಿದ ಶ್ರೀರಾಮನ ಅಶ್ವಮೇಧಯಾಗದ ಕುದುರೆಯನ್ನು ಕಂಡು ನುಡಿದ ಮಾತುಗಳನ್ನು ವಿವರಿಸುವರು.
8. ಶ್ರೀರಾಮನ ಅಶ್ವಮೇಧಯಾಗದ ಕುದುರೆಯ ಪಟ್ಟಲಿಖಿತವನ್ನು ಓದಿದ ಲವನ ಮನದಲ್ಲಿ ಉಂಟಾದ ಭಾವನೆಗಳನ್ನು ವಿವರಿಸುವರು.
9. ಲವನು ಶ್ರೀರಾಮನ ಅಶ್ವಮೇಧಯಾಗದ ಕುದುರೆಯನ್ನು ಕಟ್ಟಿದ ಸಂದರ್ಭವನ್ನು ವಿವರಿಸುವರು.
10. ವಾರ್ಧಕ ಷಟ್ಪದಿಯ ಲಕ್ಷಣವನ್ನು ಉದಾಹರಣೆ ಸಹಿತ ತಿಳಿದುಕೊಳ್ಳುವರು.
11. ರಗಳೆಯ ಲಕ್ಷಣವನ್ನು ಉದಾಹರಣೆ ಸಹಿತ ತಿಳಿದುಕೊಳ್ಳುವರು.
12. ಶ್ಲೇಷಾಲಂಕಾರದ ಲಕ್ಷಣವನ್ನು ಉದಾಹರಣೆಯ ಸಹಿತ ತಿಳಿದುಕೊಳ್ಳುವರು.
13. ಅಭ್ಯಾಸ ಪುಸ್ತಕದ ಪ್ರಶ್ನೆಗಳಿಗೆ ಉತ್ತರಿಸುವರು.

| ಹಂತಗಳು | ಕಲಿಕೆಯನ್ನು ಅನುಕೂಲಿಸುವ ಚಟುವಟಿಕೆಗಳು | ಬಳಸುವ ಕಲಿಕಾ ಸಾಮಗ್ರಿಗಳು | ಮೌಲ್ಯಮಾಪನದ ಪ್ರಶ್ನೆಗಳು |
|---|---|---|---|
| ಪ್ರೇರಣಾ ಚಟುವಟಿಕೆ | * ನಡುಗನ್ನಡ ಷಟ್ಪದಿ ಮಹಾಕಾವ್ಯಗಳ ಲಕ್ಷಣ ತಿಳಿಸುವುದು.<br>* ನಡುಗನ್ನಡ ಷಟ್ಪದಿ ಮಹಾಕಾವ್ಯಗಳನ್ನು ರಚಿಸಿದ ಕವಿಗಳು ಹಾಗೂ ಕಾವ್ಯಗಳನ್ನು ಪಟ್ಟಿ ಮಾಡಿಸುವುದು. | * ಕನ್ನಡ ವಿಷಯ ವಿಶ್ವಕೋಶ.<br>* ನಡುಗನ್ನಡ ಷಟ್ಪದಿ ಮಹಾಕಾವ್ಯಗಳು | 1. ನಡುಗನ್ನಡದ ಪ್ರಸಿದ್ಧ ಷಟ್ಪದಿ ಮಹಾಕಾವ್ಯಗಳನ್ನು ಹೆಸರಿಸಿ.<br>2. ನಡುಗನ್ನಡದ ಪ್ರಸಿದ್ಧ ಕವಿಗಳನ್ನು ಹೆಸರಿಸಿ.<br>3. ರಾಮಾಯಣ ಮಹಾಕಾವ್ಯವನ್ನು |

| | | | |
|---|---|---|---|
| | * ಭಾರತೀಯ ಮಹಾಕಾವ್ಯಗಳ ಹಾಗೂ ರಚನಾಕಾರರ ಬಗ್ಗೆ ತಿಳಿಸುವುದು.<br>* ರಾಮಾಯಣ ಕಥೆಯನ್ನು ಸಂಕ್ಷಿಪ್ತವಾಗಿ ಹೇಳುವುದು / ಹೇಳಿಸುವುದು. | ಕೃತಿ.<br>* ಸಂಕ್ಷಿಪ್ತ ಕನ್ನಡ ರಾಮಾಯಣ<br>* ವಾಲ್ಮೀಕಿ ಚಿತ್ರ | ರಚಿಸಿದ ಮಹರ್ಷಿ ಯಾರು?<br>4. ಶ್ರೀರಾಮನು ಅಶ್ವಮೇಧ ಯಾಗವನ್ನು ಮಾಡಲು ಕಾರಣವೇನು? |
| ಕಲಿಕಾ ಚಟುವಟಿಕೆ | * ಪ್ರಶ್ನೋತ್ತರ / ಸಂದರ್ಶನ ವಿಧಾನದಿಂದ ಕವಿ ಲಕ್ಷ್ಮೀಶ ಅವರನ್ನು ಪರಿಚಯಿಸುವ ಚಟುವಟಿಕೆ.<br>* ಉಪಾಧ್ಯಾಯರು ಪದ್ಯವನ್ನು ಓದುವುದು.<br>* ಉಪಾಧ್ಯಾಯರ ಓದನ್ನು ಅನುಸರಿಸಿ ವಿದ್ಯಾರ್ಥಿಗಳು ಪದ್ಯವನ್ನು ಓದುವ ಚಟುವಟಿಕೆ.<br>* ನಿಘಂಟನ್ನು ಬಳಸಿಕೊಂಡು ಹೊಸಪದಗಳಿಗೆ ಸಮಾನಾರ್ಥಕ ಪದಗಳನ್ನು ಹುಡುಕಿಸುವ ಚಟುವಟಿಕೆ.<br>* ವಿದ್ಯಾರ್ಥಿಗಳು ಮೌನವಾಗಿ ಓದಿ, ಪದ್ಯವನ್ನು ಅರ್ಥೈಸಿಕೊಳ್ಳುವ ಚಟುವಟಿಕೆ.<br>* ವಿವರಣೆ – ಚರ್ಚೆ – ಪ್ರಶ್ನೋತ್ತರ ವಿಧಾನದಿಂದ ಪಾಠದ ಬೆಳವಣಿಗೆ<br>* ಉಪಘಟಕಗಳು :–<br>1. ಶ್ರೀರಾಮನ ಅಶ್ವಮೇಧಯಾಗದ ಕುದುರೆಯು ವಾಲ್ಮೀಕಿ ಮಹರ್ಷಿಯ ಆಶ್ರಮನ್ನು ಹೊಕ್ಕಿದ್ದು, ಅಲ್ಲಿ ಹಸುರು ಹುಲ್ಲನ್ನು ತಿನ್ನಲು ಪ್ರಾರಂಭಿಸಿದ್ದು, ಅವನು ಅದನ್ನು ಕುದುರೆ ಕಡೆಗೆ ಓಡಿ ಬರುವುದು.<br>2. ಶ್ರೀರಾಮನ ಅಶ್ವಮೇಧಯಾಗದ ಕುದುರೆಯು ಆಶ್ರಮದ ಉದ್ಯಾನವನ್ನು ತುಳಿದು ಹಾಳು ಮಾಡಿದ್ದು, ಅದನ್ನು ಕಂಡು ತೋಟದ ಕಾವಲು ಕಾಯುತ್ತಿದ್ದ ಲವನು ಕೋಪದಿಂದ ಅದನ್ನು ಓಡಿಸಲು ಬಂದು, ಕುದುರೆಯ ನೆತ್ತಿಯ ಮೇಲಿದ್ದ ಪಟ್ಟಲಿಖಿತವನ್ನು ಓದುವುದು.<br>3. ಶ್ರೀರಾಮನ ಅಶ್ವಮೇಧಯಾಗದ ಕುದುರೆ ಇದು ಎಂದು ತಿಳಿದು ಕೋಪಗೊಂಡ ಲವನು ತನ್ನ ವೀರಾವೇಶದಿಂದ ಮಾತುಗಳನ್ನು ಆಡುವುದು.<br>4. ಲವನು ತನ್ನ ಉತ್ತರೀಯದಿಂದ ಕುದುರೆಯನ್ನು ಕಟ್ಟುವುದು, ಆಶ್ರಮದ ಋಷಿಮುನಿಗಳ ಮಕ್ಕಳು ಕುದುರೆಯನ್ನು ಕಟ್ಟುವುದು ಬೇಡ ಎಂದು ಹೇಳುವುದು, ವೀರನಾದ ಅವನು ಅವರ ಮಾತನ್ನು ಲೆಕ್ಕಿಸದೆ ಕುದುರೆಯನ್ನು ಕಟ್ಟಿಹಾಕುವುದು.<br>5. 'ವಾರ್ಧಕ ಷಟ್ಪದಿ'ಯ ಲಕ್ಷಣವನ್ನು ಉದಾಹರಣೆಗಳ ಸಹಿತ ಪರಿಚಯಿಸುವುದು.<br>6. 'ರಗಳೆ'ಯ ಲಕ್ಷಣವನ್ನು ಉದಾಹರಣೆಗಳ ಸಹಿತ ಪರಿಚಯಿಸುವುದು.<br>7. 'ಶ್ಲೇಷಾಲಂಕಾರ'ದ ಲಕ್ಷಣವನ್ನು ಉದಾಹರಣೆಯ ಸಹಿತ ವಿವರಿಸುವುದು.. | * ಕವಿ ಲಕ್ಷ್ಮೀಶ ಅವರ ಕಾಲ್ಪನಿಕ ಚಿತ್ರ<br>* 'ಜೈಮಿನಿ ಭಾರತ' ಕೃತಿ<br>* ಪಠ್ಯಪುಸ್ತಕ<br>* ಕನ್ನಡ–ಕನ್ನಡ ನಿಘಂಟು<br>* 'ವೀರಲವ' ಪದ್ಯದ ಗಮಕ ವಾಚನದ ಧ್ವನಿಸುರುಳಿ ಹಾಗೂ ವೀಡಿಯೋ<br>* 'ವಾರ್ಧಕ ಷಟ್ಪದಿ'ಯ ಲಕ್ಷಣದ ಚಾರ್ಟ್<br>* 'ರಗಳೆ'ಯ ಲಕ್ಷಣದ ಚಾರ್ಟ್<br>*'ಶ್ಲೇಷಾಲಂಕಾರ'ದ ಲಕ್ಷಣದ ಚಾರ್ಟ್ | 1. ಕವಿ ಲಕ್ಷ್ಮೀಶ ಅವರ ಕಾಲ ಮತ್ತು ಸ್ಥಳ ತಿಳಿಸಿ.<br>2. ಕವಿ ಲಕ್ಷ್ಮೀಶ ಅವರ ಕೃತಿಗಳನ್ನು ಹೆಸರಿಸಿ.<br>3. ಕವಿ ಲಕ್ಷ್ಮೀಶ ಅವರಿಗೆ ಇರುವ ಬಿರುದುಗಳನ್ನು ಹೆಸರಿಸಿ.<br>4. 'ವೀರಲವ' ಪದ್ಯದ ಆಕರ ಕೃತಿ ಯಾವುದು?<br>5. 'ನೃಪ' ಪದದ ಅರ್ಥವೇನು?<br>6. 'ಅಬ್ಧಿಪಂ' ಎಂದರೆ ಯಾರು?<br>7. 'ಉರ್ವಿ' ಪದದ ಅರ್ಥವೇನು?<br>8. 'ಕದಳೀದ್ರುಮ' ಪದದ ಅರ್ಥವೇನು?<br>9. 'ವಾಜಿ' ಪದದ ಅರ್ಥವೇನು?<br>10. ವಾಲ್ಮೀಕಿ ಆಶ್ರಮಕ್ಕೆ ಬಂದ ಕುದುರೆಯು ಯಾರದು?<br>11. ಕುದುರೆಯು ವಾಲ್ಮೀಕಿ ಆಶ್ರಮಕ್ಕೆ ಬರಲು ಕಾರಣವೇನು?<br>12. ವಾಲ್ಮೀಕಿ ಆಶ್ರಮದ ತೋಟವನ್ನು ಯಾರು ಕಾಯುತ್ತಿದ್ದರು?<br>13. ಕುದುರೆಯು ಆಶ್ರಮಕ್ಕೆ ಬಂದಾಗ ವಾಲ್ಮೀಕಿಯು ಎಲ್ಲಿಗೆ ಹೋಗಿದ್ದರು?<br>14. ಆಶ್ರಮದೊಳಗೆ ಕುದುರೆಯನ್ನು ಕಂಡಾಗ ಲವನು ಹೇಳಿದ ಮಾತುಗಳಾವುವು?<br>15. ಕುದುರೆಯ ನೆತ್ತಿಯ ಮೇಲೆ ಏನೆಂದು ಬರೆಯಲಾಗಿತ್ತು?<br>16. ಕುದುರೆಯ ನೆತ್ತಿಯ ಮೇಲಿದ್ದ ಪಟ್ಟಲಿಖಿತವನ್ನು ಓದಿದ ನಂತರ ಲವನು ಏನೆಂದು ಪ್ರತಿಜ್ಞೆಯನ್ನು ಮಾಡಿದನು?<br>17. ಲವನು ಕುದುರೆಯನ್ನು ಯಾವುದರಿಂದ ಕಟ್ಟಿದನು?<br>18. ಮುನಿಕುಮಾರರು ಲವನಿಗೆ ಏನೆಂದು ಹೇಳಿದರು?<br>19. ಮುನಿಕುಮಾರರ ಮಾತಿಗೆ ಲವನು ಕೊಟ್ಟ ಉತ್ತರವೇನು?<br>20. ವಾರ್ಧಕ ಷಟ್ಪದಿಯ ಲಕ್ಷಣವನ್ನು ತಿಳಿಸಿ.<br>21. ರಗಳೆಯಲ್ಲಿ ಎಷ್ಟು ವಿಧ? ಅವು ಯಾವುವು?<br>22. ಶ್ಲೇಷಾಲಂಕಾರದ ಲಕ್ಷಣವನ್ನು ಉದಾಹರಣೆಯ ಸಹಿತ ವಿವರಿಸಿ. |
| ಅನ್ವಯ ಚಟುವಟಿಕೆ | 1. 'ವೀರಲವ' ಪದ್ಯದ ಗಮಕ ವಾಚನವನ್ನು ಕೇಳಿಸುವುದು ಹಾಗೂ ಗಮಕ ವಾಚನ ಮಾಡಿಸುವುದು.<br>2. 'ವೀರಲವ' ಪದ್ಯದ ಸಾರಾಂಶವನ್ನು ಬರೆಸುವುದು.<br>3. 'ವೀರಲವ' ಪದ್ಯದಲ್ಲಿ ಬರುವ ಸರಳ ವ್ಯಾಕರಣಾಂಶಗಳನ್ನು ಗುರುತಿಸುವುದು | * 'ವೀರಲವ' ಪದ್ಯದ ಗಮಕ ವಾಚನದ ಧ್ವನಿಸುರುಳಿ<br>* ಪಠ್ಯಪುಸ್ತಕ | 1. 'ಸೊಲ್ಗೇಳಿ' ಪದದಲ್ಲಿ ಆಗಿರುವ ಸಂಧಿ ಯಾವುದು?<br>2. 'ಬೇಡಬೇಡ' ಪದವು ಯಾವ ವ್ಯಾಕರಣಾಂಶಕ್ಕೆ ಉದಾಹರಣೆ ಆಗಿದೆ?<br>3. 'ನೆತ್ತಿಯೊಳ್' ಪದದಲ್ಲಿರುವ ವಿಭಕ್ತಿಯನ್ನು ಹೆಸರಿಸಿ. |

| | | | |
|---|---|---|---|
| ಮೌಲ್ಯಮಾಪನ ಚಟುವಟಿಕೆ | * ಹಿಮ್ಮಾಹಿತಿ<br>* ಗೃಹಪಾಠ<br>* ಅಭ್ಯಾಸದ ಚಟುವಟಿಕೆಗಳು<br>* ನಿಯೋಜಿತ ಚಟುವಟಿಕೆಗಳು<br>* ಘಟಕ ಪರೀಕ್ಷೆ | * ಪ್ರಶ್ನಾವಳಿ<br>* ಪ್ರಶ್ನಾವಳಿ<br>* ಪಠ್ಯಪುಸ್ತಕ<br>* ಮಾಹಿತಿ ಸಂಗ್ರಹ<br>* ಪ್ರಶ್ನಾವಳಿ | * ಮೌಖಿಕ ಪರೀಕ್ಷೆ<br>* ಅವಲೋಕನ<br>* ಅವಲೋಕನ<br>* ಅವಲೋಕನ<br>* ಲಿಖಿತ ಪರೀಕ್ಷೆ |

ಶಿಕ್ಷಕರ ಸಹಿ ಮುಖ್ಯಶಿಕ್ಷಕರ ಸಹಿ

**ಪ್ರಥಮ ಭಾಷೆ ಕನ್ನಡ ಘಟಕ – 15 10 ನೆಯ ತರಗತಿ**

**ಗದ್ಯಪಾಠ – 8. ವ್ಯಾಘ್ರಗೀತೆ – ಎ. ಎನ್. ಮೂರ್ತಿರಾವ್**

ಕಲಿಕೆಗೆ ಬೇಕಾದ ಅವಧಿಗಳು : ಪ್ರಾರಂಭದ ದಿನಾಂಕ :

ಮುಕ್ತಾಯದ ದಿನಾಂಕ :

ಕಲಿಕಾಂಶಗಳು :

1. ಲೇಖಕರಾದ ಎ. ಎನ್. ಮೂರ್ತಿರಾವ್ ಅವರ ಪರಿಚಯ ಮಾಡುವರು ಹಾಗೂ ಪಾಠದ ಆಶಯವನ್ನು ತಿಳಿಯುವರು.
2. ಕನ್ನಡದ ಲಲಿತ ಪ್ರಬಂಧಗಳ ಸಾಮಾನ್ಯ ಲಕ್ಷಣಗಳನ್ನು ತಿಳಿಯುವರು.
3. ಕನ್ನಡದ ಪ್ರಸಿದ್ಧ ಲಲಿತ ಪ್ರಬಂಧಕಾರರು ಹಾಗೂ ಅವರ ಕೃತಿಗಳನ್ನು ಪರಿಚಯಿಸುವರು.
4. ಗದ್ಯಪಾಠದಲ್ಲಿ ಬಂದಿರುವ ಹೊಸಪದಗಳನ್ನು ಅರ್ಥೈಸಿಕೊಳ್ಳುವರು.
5. ಹುಲಿಯು ಪ್ರಾಣಿಗಳನ್ನು ಧರ್ಮವನ್ನು ಅನುಸರಿಸಿ ಕೊಲ್ಲುತ್ತದೆಯೋ? ಇಲ್ಲವೋ? ಎಂಬ ವಿಷಯವನ್ನು ಚರ್ಚಿಸುವರು.
6. ಶಾನುಭೋಗರಿಗೆ ಹುಲಿಯು ಎದುರಾದ ಸಂದರ್ಭವನ್ನು ಕುರಿತು ವಿವರಿಸುವರು.
7. ಹುಲಿಯಿಂದ ತಪ್ಪಿಸಿಕೊಳ್ಳಲು ಶಾನುಭೋಗರು ಮಾಡಿದ ಪ್ರಯತ್ನಗಳನ್ನು ವಿವರಿಸುವರು.
8. ಶಾನುಭೋಗರ ಮೇಲೆ ಹುಲಿಯು ದಾಳಿ ಮಾಡದೆ ಹೋದದ್ದಕ್ಕೆ ಕಾರಣವನ್ನು ನೀಡುವರು.
9. ಶಾನುಭೋಗರು ಉಳಿದಿದ್ದು ಖಿರ್ದಿ ಪುಸ್ತಕದಿಂದಲೋ? ಹುಲಿಯ ಧರ್ಮಶ್ರದ್ಧೆಯಿಂದಲೋ? ಎಂಬ ವಿಷಯವನ್ನು ಕುರಿತು ಚರ್ಚಿಸುವರು.
10. ನಾಮಪದದ ವಿಧಗಳನ್ನು ಉದಾಹರಣೆಗಳ ಸಹಿತ ಪರಿಚಯಿಸುವರು.
11. ಕೃದಂತಗಳನ್ನು ಉದಾಹರಣೆಗಳ ಸಹಿತ ಪರಿಚಯಿಸುವರು.
12. ಅಭ್ಯಾಸ ಪುಸ್ತಕದ ಪ್ರಶ್ನೆಗಳಿಗೆ ಉತ್ತರಿಸುವರು.

| ಹಂತಗಳು | ಕಲಿಕೆಯನ್ನು ಅನುಕೂಲಿಸುವ ಚಟುವಟಿಕೆಗಳು | ಬಳಸುವ ಕಲಿಕಾ ಸಾಮಗ್ರಿಗಳು | ಮೌಲ್ಯಮಾಪನದ ಪ್ರಶ್ನೆಗಳು |
|---|---|---|---|
| ಪ್ರೇರಣಾ ಚಟುವಟಿಕೆ | * ಲಲಿತ ಪ್ರಬಂಧಗಳ ಸಾಮಾನ್ಯ ಲಕ್ಷಣಗಳನ್ನು ತಿಳಿಸುವುದು.<br>* ಕನ್ನಡ ಪ್ರಸಿದ್ದ ಲಲಿತ ಪ್ರಬಂಧಗಳನ್ನು ಹೆಸರಿಸುವುದು.<br>* ಕನ್ನಡ ಪ್ರಸಿದ್ದ ಲಲಿತ ಪ್ರಬಂಧಕಾರರನ್ನು ಪರಿಚಯಿಸುವುದು. | * ಕನ್ನಡ ವಿಷಯ ವಿಶ್ವಕೋಶ.<br>* ಕನ್ನಡ ಪ್ರಸಿದ್ದ ಲಲಿತಪ್ರಬಂಧ ಕಾರರ ಭಾವಚಿತ್ರ | 1. ಲಲಿತ ಪ್ರಬಂಧದ ಸಾಮಾನ್ಯ ಲಕ್ಷಣಗಳು ಯಾವುವು?<br>2. ಕನ್ನಡದ ಪ್ರಸಿದ್ಧ ಲಲಿತ ಪ್ರಬಂಧಗಳನ್ನು ಹೆಸರಿಸಿ.<br>4. ಕನ್ನಡದ ಪ್ರಸಿದ್ಧ ಲಲಿತ ಪ್ರಬಂಧಕಾರರನ್ನು ಹೆಸರಿಸಿರಿ. |
| ಕಲಿಕಾ ಚಟುವಟಿಕೆ | * ಪ್ರಶ್ನೋತ್ತರ / ಸಂದರ್ಶನ ವಿಧಾನದಿಂದ ಶ್ರೀ ಎ. ಎನ್. ಮೂರ್ತಿರಾವ್ ಅವರನ್ನು ಪರಿಚಯಿಸುವ ಚಟುವಟಿಕೆ.<br>* ಉಪಾಧ್ಯಾಯರು ಪಾಠವನ್ನು ಓದುವುದು.<br>* ಉಪಾಧ್ಯಾಯರ ಓದನ್ನು ಅನುಸರಿಸಿ ವಿದ್ಯಾರ್ಥಿಗಳು ಪಾಠವನ್ನು ಓದುವ ಚಟುವಟಿಕೆ.<br>* ನಿಘಂಟನ್ನು ಬಳಸಿಕೊಂಡು ಹೊಸಪದಗಳಿಗೆ ಸಮಾನಾರ್ಥಕ ಪದಗಳನ್ನು ಹುಡುಕಿಸುವ ಚಟುವಟಿಕೆ.<br>* ವಿದ್ಯಾರ್ಥಿಗಳು ಪಾಠವನ್ನು ಮೌನವಾಗಿ | * ಶ್ರೀ ಎ. ಎನ್. ಮೂರ್ತಿರಾವ್ ಅವರ ಭಾವಚಿತ್ರ<br>* ಎ. ಎನ್. ಮೂರ್ತಿರಾವ್ ಅವರ 'ಸಮಗ್ರ ಲಲಿತ ಪ್ರಬಂಧಗಳು' ಆಕರ ಕೃತಿ<br>* ಪಠ್ಯ ಪುಸ್ತಕ | 1. ಶ್ರೀ ಎ. ಎನ್. ಮೂರ್ತಿರಾವ್ ಅವರ ಕಾಲ ಮತ್ತು ಸ್ಥಳ ತಿಳಿಸಿ.<br>2. ಶ್ರೀ ಎ. ಎನ್. ಮೂರ್ತಿರಾವ್ ಅವರು ರಚಿಸಿದ ಕೃತಿಗಳನ್ನು ಹೆಸರಿಸಿ.<br>3. ಶ್ರೀ ಎ. ಎನ್. ಮೂರ್ತಿರಾವ್ ಅವರಿಗೆ ಸಂದ ಪ್ರಶಸ್ತಿಗಳನ್ನು ಹೆಸರಿಸಿ.<br>4. 'ವ್ಯಾಘ್ರಗೀತೆ' ಗದ್ಯಪಾಠದ ಆಕರ ಕೃತಿ ಯಾವುದು?<br>5. 'ಇರಸಾಲು' ಪದದ ಅರ್ಥವೇನು?<br>6. 'ಖಿರ್ದಿ ಪುಸ್ತಕ' ಎಂದರೇನು?<br>7. 'ಘ್ರಾಣೇಂದ್ರಿಯ' ಪದದ ಅರ್ಥವೇನು? |

| | | | |
|---|---|---|---|
| | ಓದಿ, ಅರ್ಥೈಸಿಕೊಳ್ಳುವ ಚಟುವಟಿಕೆ.<br>* ವಿವರಣೆ – ಚರ್ಚೆ – ಪ್ರಶ್ನೋತ್ತರ ವಿಧಾನದಿಂದ ಪಾಠದ ಬೆಳವಣಿಗೆ<br>* ಉಪಘಟಕಗಳು :–<br>1. ಹುಲಿಯು ಕೊಲ್ಲುವಾಗ ಯಾವುದಾದರೊಂದು ಧರ್ಮವನ್ನು ಅನುಸರಿಸಿ ಕೊಲ್ಲುತ್ತದೆಯೇ ಎಂಬ ಪ್ರಶ್ನೆ.<br>2. ಶಾನುಭೋಗರು ಇರಸಾಲಿಗಾಗಿ ಚಿಕ್ಕನಾಯಕನಹಳ್ಳಿಗೆ ಹೋಗಿದ್ದು, ಹಿಂದಿರುಗುವಾಗ ಸಂಜೆಯಾಗಿದ್ದು, ಮದಲಿಂಗನ ಕಣಿವೆಯಲ್ಲಿ ಹೋಗುವಾಗ ಹುಲಿಯು ಎದುರಾದುದು.<br>3. ಶಾನುಭೋಗರು ಹುಲಿಯಿಂದ ತಪ್ಪಿಸಿಕೊಳ್ಳಲು ಮಾಡಿದ ಪ್ರಯತ್ನಗಳು, ಹುಲಿಯು ಬೆನ್ನ ಹಿಂದಿನಿಂದ ಹಾರಿ ಕೊಲ್ಲದೆ ಎದುರು ಬಂದು ಕೊಲ್ಲಲು ಮಾಡಿದ ಪ್ರಯತ್ನಗಳು,<br>4. ಹುಲಿಯ ಬಗೆಗೆ ಶಾನುಭೋಗರ ಅಭಿಪ್ರಾಯ, ವಿಪತ್ತಿನ ಸನ್ನಿವೇಶದಲ್ಲಿ ಶಾನುಭೋಗರಿಗೆ ಖಿರ್ದಿ ಪುಸ್ತಕ ನೆನೆಪಾದುದು, ಅದನ್ನು ಹುಲಿಯ ಕಡೆಗೆ ಎಸೆದು ತಪ್ಪಿಸಿಕೊಳ್ಳಲು ಪ್ರಯತ್ನಿಸಿ, ಕಾಲು ಎಡವಿ, ಮುಖ ಕೆಳಗಾಗಿ, ಬೆನ್ನು ಮೇಲಾಗಿ ಬಿದ್ದು ಮೂರ್ಛೆ ಹೋಗುವುದು.<br>5. ದಾರಿಯಲ್ಲಿ ಹೋಗುವ ಗಾಡಿಯವರು ಮೂರ್ಛೆಗೊಂಡು ಬಿದ್ದಿದ್ದ ಶಾನುಭೋಗರನ್ನು ಉಪಚರಿಸಿ, ಎಚ್ಚರಗೊಳಿಸಿದ್ದು, ಶಾನುಭೋಗರು ಹುಲಿಯಿಂದ ತಪ್ಪಿಸಿಕೊಂಡದ್ದಕ್ಕಾಗಿ ಸಂತಸಪಡುವುದು. ಶಾನುಭೋಗರಿಂದ ಹುಲಿಯ ಧರ್ಮಶ್ರದ್ಧೆಯ ಗುಣಗಾನ.<br>6. ನಾಮಪದದ ವಿಧಗಳನ್ನು ಉದಾಹರಣೆಗಳ ಸಹಿತ ಪರಿಚಯಿಸುವುದು.<br>7. ಕೃದಂತಗಳನ್ನು ಉದಾಹರಣೆಗಳ ಸಹಿತ ಪರಿಚಯಿಸುವುದು. | * ಕನ್ನಡ ರತ್ನಕೋಶ<br>* ಹುಲಿಯ ಬಗೆಗಿನ ಸಾಕ್ಷ್ಯಚಿತ್ರ<br>* ಕನ್ನಡ ವಿಷಯ ವಿಶ್ವಕೋಶ.<br>* ನಾಮಪದದ ವಿಧಗಳ ಪಟ್ಟಿ | 8. 'ಶಾನುಭೋಗ' ಎಂದರೆ ಯಾರು?<br>9. ಲೇಖಕರಿಗೆ ಮುಖ್ಯಪ್ರಶ್ನೆ ಆದದ್ದು ಯಾವುದು?<br>10. ಶಾನುಭೋಗರು ಚಿಕ್ಕನಾಯಕನ ಹಳ್ಳಿಗೆ ಏಕೆ ಹೋಗಿದ್ದರು?<br>11. ಶಾನುಭೋಗರು ತಮ್ಮ ಊರಿಗೆ ಹೋಗಬೇಕಾದರೆ ಯಾವ ಕಣಿವೆಯನ್ನು ದಾಟಿ ಹೋಗಬೇಕಾಗಿತ್ತು?<br>12. ಹುಲಿಗೆ ಏನನ್ನು ನೋಡಿ ಪರಮಾನಂದವಾಯಿತು?<br>13. ಶಾನುಭೋಗರ ಪ್ರಕಾರ ಭರತಖಂಡದ ಹುಲಿಯ ಧರ್ಮ ಯಾವುದು?<br>14. ಹುಲಿಯ ಮುಖ ಪೆಚ್ಚಾಗಲು ಕಾರಣವೇನು?<br>15. ವಿಪತ್ತಿನ ಸಮಯದಲ್ಲಿ ಶಾನುಭೋಗರಿಗೆ ಯಾವ ಪುಸ್ತಕ ನೆನೆಪಾಯಿತು?<br>16. ಶಾನುಭೋಗರು ಏನೆಂದು ನಿ ಶ್ಚಯಿಸಿದರು?<br>17. ಶಾನುಭೋಗರ ಬ್ರಹ್ಮಾಸ್ತ್ರ ಯಾವುದು?<br>18. ಶಾನುಭೋಗರು ಮೂರ್ಛೆ ಬೀಳಲು ಕಾರಣವೇನು?<br>19. ಮೂರ್ಛೆ ತಿಳಿದು ಎಚ್ಚರಗೊಂಡ ಶಾನುಭೋಗರು ಗಾಡಿಯವರನ್ನು ಏನೆಂದು ಕೇಳಿದರು?<br>20. ಶಾನುಭೋಗರು ಉಳಿದಿದ್ದು ಯಾವುದರಿಂದ?<br>21. ನಾಮಪದದ ವಿಧಗಳನ್ನು ತಿಳಿಸಿ.<br>22. ಕೃದಂತದ ವಿಧಗಳನ್ನು ಉದಾಹರಣೆಗಳ ಸಹಿತ ತಿಳಿಸಿ. |
| ಅನ್ವಯ ಚಟುವಟಿಕೆ | 1. 'ಅರಣ್ಯ ಸಂಕರಕ್ಷಣೆ ನಮ್ಮೆಲ್ಲರ ಹೊಣೆ' ಎಂಬ ವಿಷಯವನ್ನು ಕುರಿತು ಪ್ರಬಂಧ ಬರೆಯುವಂತೆ ಸೂಚಿಸುವುದು.<br>2. 'ಹುಲಿ ಸಂರಕ್ಷಣೆ' ಯೋಜನೆಯ ಮಹತ್ತ್ವವನ್ನು ಕುರಿತು ಚರ್ಚಿಸುವುದು.<br>3. ಪಾಠದಲ್ಲಿ ಬರುವ ಸರಳ ವ್ಯಾಕರಣಾಂಶಗಳನ್ನು ಗುರುತಿಸಿ, ವಿವರಿಸುವುದು. | * ಪಠ್ಯಪುಸ್ತಕ | 1. 'ಘ್ರಾಣೇಂದ್ರಿಯ' ಪದದಲ್ಲಿ ಆಗಿರುವ ಸಂ ಧಿ ಯಾವುದು?<br>2. 'ಪಂಚೇಂದ್ರಿಯ' ಪದವು ಯಾವ ಸಮಾಸಕ್ಕೆ ಉದಾಹರಣೆಯಾಗಿದೆ?<br>3. ಅನ್ವರ್ಥನಾಮಕ್ಕೆ ಎರಡು ಉದಾಹರಣೆಗಳನ್ನು ಕೊಡಿ.<br>4. 'ಆಯಾಸ' ಪದದ ವಿರುದ್ಧಾರ್ಥಕ ಪದ ತಿಳಿಸಿ. |
| ಮೌಲ್ಯಮಾಪನ ಚಟುವಟಿಕೆ | * ಹಿಮ್ಮಾಹಿತಿ<br>* ಗೃಹಪಾಠ<br>* ಅಭ್ಯಾಸದ ಚಟುವಟಿಕೆಗಳು<br>* ನಿಯೋಜಿತ ಚಟುವಟಿಕೆಗಳು<br>* ಘಟಕ ಪರೀಕ್ಷೆ | * ಪ್ರಶ್ನಾವಳಿ<br>* ಪ್ರಶ್ನಾವಳಿ<br>* ಪಠ್ಯಪುಸ್ತಕ<br>* ಮಾಹಿತಿ ಸಂಗ್ರಹ<br>* ಪ್ರಶ್ನಾವಳಿ | * ಮೌಖಿಕ ಪರೀಕ್ಷೆ<br>* ಅವಲೋಕನ<br>* ಅವಲೋಕನ<br>* ಅವಲೋಕನ<br>* ಲಿಖಿತ ಪರೀಕ್ಷೆ |

**ಶಿಕ್ಷಕರ ಸಹಿ** **ಮುಖ್ಯಶಿಕ್ಷಕರ ಸಹಿ**

| ಪ್ರಥಮ ಭಾಷೆ ಕನ್ನಡ | ಘಟಕ – 16 | 10 ನೆಯ ತರಗತಿ |
|---|---|---|
| ಪದ್ಯಪಾಠ – 8. | ಸಾರ್ಥಕತೆ | – ದು. ಸರಸ್ವತಿ, ಇಂದುಮತಿ ಲಮಾಣಿ |

ಕಲಿಕೆಗೆ ಬೇಕಾದ ಅವಧಿಗಳು : ಪ್ರಾರಂಭದ ದಿನಾಂಕ :

ಮುಕ್ತಾಯದ ದಿನಾಂಕ :

ಕಲಿಕಾಂಶಗಳು :

1. ಕವಯಿತ್ರಿಯರಾದ ದುರ್ಗಪ್ಪ ಸರಸ್ವತಿ ಮತ್ತು ಇಂದುಮತಿ ಲಮಾಣಿ ಅವರ ಪರಿಚಯ ಮಾಡುವರು ಹಾಗೂ ಪದ್ಯದ ಆಶಯ ತಿಳಿಯುವರು.
2. ಆಧುನಿಕ ಸಾಹಿತ್ಯ ನಡೆದು ಬಂದ ವಿವಿಧ ಘಟ್ಟಗಳ ಬಗ್ಗೆ ತಿಳಿಯುವರು.
3. ದಲಿತ ಸಾಹಿತ್ಯದ ಬಗೆಗೆ ಅರಿವು ಮೂಡಿಸಿಕೊಳ್ಳುವರು.
4. 'ಯುದ್ಧದಿಂದ ವಿನಾಶ ಖಂಡಿತ' ಎಂಬ ವಿಷಯವನ್ನು ಕುರಿತು ಚರ್ಚಿಸುವರು.
5. ಬದುಕು ಸಾರ್ಥಕವಾಗಬೇಕಾದರೆ ಮಾನವನಲ್ಲಿ ಇರಬೇಕಾದ ಗುಣಗಳನ್ನು ಹೆಸರಿಸುವರು.
6. ಪದ್ಯಪಾಠದಲ್ಲಿ ಬಂದಿರುವ ಹೊಸಪದಗಳನ್ನು ಅರ್ಥೈಸಿಕೊಳ್ಳುವರು.
7. ಮಾನವ ಮಣ್ಣಿನ ಮಾಲೀಕನಾದ ಬಗೆಯನ್ನು ವಿವರಿಸುವರು.
8. ವೀರ ಮರಣ ಮತ್ತು ವೀರಯೋಧ ಪದಗಳನ್ನು ಯುದ್ಧ ಹಿನ್ನೆಲೆಯಲ್ಲಿ ಅರ್ಥೈಸುವರು.
9. ಕವಯಿತ್ರಿಯ ಆಸೆಗಳನ್ನು ಪಟ್ಟಿಮಾಡಿ, ವಿವರಿಸುವರು.
10. 'ಪರೋಪಕಾರಾರ್ಥಂ ಇದಂ ಶರೀರಂ' ಎಂಬ ಸುಭಾಷಿತ ವಾಕ್ಯವನ್ನು ಅರ್ಥೈಸುವರು.
11. 'ಅರ್ಥಾಂತರನ್ಯಾಸಾಲಂಕಾರ'ದ ಲಕ್ಷಣವನ್ನು ಉದಾಹರಣೆಯ ಸಹಿತ ವಿವರಿಸುವರು.
12. ಅಭ್ಯಾಸ ಪುಸ್ತಕದ ಪ್ರಶ್ನೆಗಳಿಗೆ ಉತ್ತರಿಸುವರು.

| ಹಂತಗಳು | ಕಲಿಕೆಯನ್ನು ಅನುಕೂಲಿಸುವ ಚಟುವಟಿಕೆಗಳು | ಬಳಸುವ ಕಲಿಕಾ ಸಾಮಗ್ರಿಗಳು | ಮೌಲ್ಯಮಾಪನದ ಪ್ರಶ್ನೆಗಳು |
|---|---|---|---|
| ಪ್ರೇರಣಾ ಚಟುವಟಿಕೆ | * ಆಧುನಿಕ ಕನ್ನಡ ಸಾಹಿತ್ಯ ನಡೆದು ಬಂದ ವಿವಿಧ ಘಟ್ಟಗಳನ್ನು ಕುರಿತು ವಿವರಿಸುವುದು.<br>* ದಲಿತ ಮತ್ತು ಬಂಡಾಯ ಸಾಹಿತ್ಯದ ವಿಶೇಷತೆಯನ್ನು ವಿವರಿಸುವುದು.<br>* ದಲಿತ ಮತ್ತು ಬಂಡಾಯ ಸಾಹಿತ್ಯದ ಪ್ರಮುಖ ಲೇಖಕರನ್ನು ಪರಿಚಯಿಸುವುದು. | * ಕನ್ನಡ ಸಂಸ್ಕೃತಿ ಕೋಶ<br>* ದಲಿತ ಮತ್ತು ಬಂಡಾಯ ಸಾಹಿತ್ಯದ ಪ್ರಮುಖ ಲೇಖಕರ ಭಾವಚಿತ್ರ | 1. ಆಧುನಿಕ ಸಾಹಿತ್ಯದ ವಿವಿಧ ಘಟ್ಟಗಳು ಯಾವುವು?<br>2. ದಲಿತ ಸಾಹಿತ್ಯದ ಪ್ರಮುಖ ಕವಿಗಳನ್ನು ಹೆಸರಿಸಿ.<br>3. ಬಂಡಾಯ ಸಾಹಿತ್ಯದ ಪ್ರಮುಖ ಕವಿಗಳನ್ನು ಹೆಸರಿಸಿ. |
| ಕಲಿಕಾ ಚಟುವಟಿಕೆ | * ಪ್ರಶ್ನೋತ್ತರ / ಸಂದರ್ಶನ ವಿಧಾನದಿಂದ ಶ್ರೀಮತಿ ದುರ್ಗಪ್ಪ ಸರಸ್ವತಿ ಮತ್ತು ಶ್ರೀಮತಿ ಇಂದುಮತಿ ಲಮಾಣಿ ಅವರನ್ನು ಪರಿಚಯಿಸುವ ಚಟುವಟಿಕೆ.<br>* ಉಪಾಧ್ಯಾಯರು ಪದ್ಯವನ್ನು ಓದುವುದು.<br>* ಉಪಾಧ್ಯಾಯರ ಓದನ್ನು ಅನುಸರಿಸಿ ವಿದ್ಯಾರ್ಥಿಗಳು ಪದ್ಯವನ್ನು ಓದುವ ಚಟುವಟಿಕೆ.<br>* ನಿಘಂಟನ್ನು ಬಳಸಿಕೊಂಡು ಹೊಸಪದಗಳಿಗೆ ಸಮಾನಾರ್ಥಕ ಪದಗಳನ್ನು ಹುಡುಕಿಸುವ ಚಟುವಟಿಕೆ.<br>* ವಿದ್ಯಾರ್ಥಿಗಳು ಮೌನವಾಗಿ ಓದಿ, ಪದ್ಯವನ್ನು ಅರ್ಥೈಸಿಕೊಳ್ಳುವ ಚಟುವಟಿಕೆ.<br>* ವಿವರಣೆ – ಚರ್ಚೆ – ಪ್ರಶ್ನೋತ್ತರ ವಿಧಾನದಿಂದ ಪಾಠದ ಬೆಳವಣಿಗೆ<br>* ಉಪಘಟಕಗಳು :–<br>1. ಮಾನವನು ಮಣ್ಣಿನ ಮಾಲೀಕನಾಗಿ ಗಡಿ ಎಳೆದುಕೊಂಡದ್ದು, ಗಡಿ ರಕ್ಷಣೆಗಾಗಿ ಯುದ್ಧ ಮಾಡುವುದು. ಗಡಿಯ ರಕ್ಷಣೆಗಾಗಿ ಜೀವತೆತ್ತವರು ವೀರಮರಣ ಹೊಂದುವುದು, ಜೀವತೆಗೆದವರು ವೀರಯೋಧರೆನಿಸುವುದು,<br>ಆದರೆ ಸಂಕಟಕೆ ಗಡಿ ಇಲ್ಲ. ಎರಡೂ ಕಡೆ ಒಂದೇ ಎನ್ನುವ ಕವಯಿತ್ರಿಯ ಭಾವವನ್ನು ಅರ್ಥೈಸುವುದು. | * ಶ್ರೀಮತಿ ದುರ್ಗಪ್ಪ ಸರಸ್ವತಿ ಅವರ ಭಾವಚಿತ್ರ.<br>* ಶ್ರೀಮತಿ ಇಂದುಮತಿ ಲಮಾಣಿ ಅವರ ಭಾವಚಿತ್ರ.<br>* ಕವಯಿತ್ರಿಯರ ಕವನ ಸಂಕಲನಗಳು<br>* ಪಠ್ಯಪುಸ್ತಕ<br>* ಕನ್ನಡ–ಕನ್ನಡ ನಿಘಂಟು | 1. ಶ್ರೀಮತಿ ದುರ್ಗಪ್ಪ ಸರಸ್ವತಿ ಅವರ ಕಾಲ ಮತ್ತು ಸ್ಥಳವನ್ನು ತಿಳಿಸಿ.<br>2. ಶ್ರೀಮತಿ ದುರ್ಗಪ್ಪ ಸರಸ್ವತಿ ಅವರ ಕೃತಿಗಳನ್ನು ಹೆಸರಿಸಿ.<br>3. ಶ್ರೀಮತಿ ಇಂದುಮತಿ ಲಮಾಣಿ ಅವರ ಕಾಲ ಮತ್ತು ಸ್ಥಳವನ್ನು ತಿಳಿಸಿ.<br>4. ಶ್ರೀಮತಿ ಇಂದುಮತಿ ಲಮಾಣಿ ಅವರ ಕೃತಿಗಳನ್ನು ಹೆಸರಿಸಿ.<br>5. 'ಸಾರ್ಥಕತೆ' ಪದ್ಯದ ಆಕರ ಕೃತಿಗಳು ಯಾವುವು?<br>6. 'ಮ್ಯಾಜಿಕ್' ಪದದ ಅರ್ಥವೇನು?<br>7. 'ಕಾದಾಟ' ಪದದ ಅರ್ಥವೇನು?<br>8. 'ಒರತೆ' ಪದದ ಅರ್ಥವೇನು?<br>9. 'ದಾಹ' ಪದದ ಅರ್ಥವೇನು?<br>10. 'ಊರುಗೋಲು' ಪದದ ಅರ್ಥವೇನು?<br>11. ಮಣ್ಣಿಗೆ ಮಾಲೀಕನಾದವನು ಯಾರು?<br>12. ಯಾವುದರಿಂದ ಮಾನವರ ಜೀವಗಳು ಶವವಾದವು?<br>13. ಮಾನವರು ಯಾವ ಮ್ಯಾಜಿಕ್‌ನಿಂದ ಜೀವತೆತ್ತರು?<br>14. ಯಾವುದಕ್ಕೆ ಗಡಿ ಇಲ್ಲ?<br>15. ಯಾವುದರಿಂದ ಪಾರಾಗಬೇಕು?<br>16. ಮರವಾಗುವುದರಿಂದ ಏನು |

| | | | |
|---|---|---|---|
| | 2. ಬೀಸಲು ಬರುವ ಬಲೆಯಿಂದ ಪಾರಾಗುವುದು, ಬೆಳಕು ನೀಡುವ ಬತ್ತಿಯಾಗುವುದು, ನೆರಳು ನೀಡುವ ಮರವಾಗುವುದು, ದಾಹವನ್ನು ತಣಿಸುವ ಒರತೆಯಾಗುವುದು, ಕಂದನ ನಗಿಸುವ ಜೋಗುಳವಾಗುವುದು, ವಾಗ್ದೇವಿಯ ಕೈ ಗ್ರಂಥವಾಗುವುದು, ದೀನರಿಗೆ ಊರುಗೋಲಾಗುವುದು, ಅನ್ಯರಿಗೆ ಹೊರೆಯಾಗುವ ಮುನ್ನ ಅಂತ್ಯವಾಗುವುದು ಎಂಬ ಕವಯಿತ್ರಿಯ ಆಸೆಯನ್ನು ವಿವರಿಸುವುದು.<br>3. 'ಅರ್ಥಾಂತರನ್ಯಾಸಾಲಂಕಾರದ ಲಕ್ಷಣವನ್ನು ವಿವರಿಸುವುದು.. | * 'ಸಾರ್ಥಕತೆ' ಪದ್ಯದ ಧ್ವನಿಸುರುಳಿ<br>*ಅರ್ಥಾಂತರನ್ಯಾಸ ಅಲಂಕಾರದ ಲಕ್ಷಣದ ಚಾರ್ಟ್ | ಪ್ರಯೋಜನ?<br>17. ಸದಾ ಚಿಮ್ಮುವ ಒರತೆ ಏಕೆ ಆಗಬೇಕು?<br>18. ಯಾರ ಅಳುವನ್ನು ನಗೆಯಾಗಿಸಲು ಜೋಗುಳ ಹಾಡಬೇಕು?<br>19. ಯಾರಿಗೆ ಊರುಗೋಲು ಆಗಬೇಕು?<br>20. ನಮ್ಮ ಅಂತ್ಯ ಹೇಗಾಗಬೇಕು?<br>21. ಅರ್ಥಾಂತರನ್ಯಾಸ ಅಲಂಕಾರದ ಲಕ್ಷಣವನ್ನು ಉದಾಹರಣೆಯ ಸಹಿತ ವಿವರಿಸಿ. |
| ಅನ್ವಯ ಚಟುವಟಿಕೆ | 1. 'ಸಾರ್ಥಕ' ಪದ್ಯದ ಧ್ವನಿಸುರುಳಿಯನ್ನು ಕೇಳಿಸುವುದು ಹಾಗೂ ಹಾಡಿಸುವುದು<br>2. 'ಸಾರ್ಥಕ' ಪದ್ಯದ ಸಾರಾಂಶವನ್ನು ಬರೆಸುವುದು.<br>3. 'ಸಾರ್ಥಕ' ಪದ್ಯದಲ್ಲಿ ಬರುವ ಸರಳ ವ್ಯಾಕರಣಾಂಶಗಳನ್ನು ಗುರುತಿಸುವುದು | * ಪಠ್ಯಪುಸ್ತಕ | 1. 'ಮಾಲೀಕ' ಪದವು ಯಾವ ಭಾಷೆಯಿಂದ ಕನ್ನಡಕ್ಕೆ ಬಂದಿದೆ?<br>2. 'ವಾಗ್ದೇವಿ' ಪದದಲ್ಲಿ ಆಗಿರುವ ಸಂಧಿ ಯಾವುದು?<br>3. 'ಊರುಗೋಲು' ಪದವು ಯಾವ ಸಮಾಸಕ್ಕೆ ಉದಾಹರಣೆ ಆಗಿದೆ? |
| ಮೌಲ್ಯಮಾಪನ ಚಟುವಟಿಕೆ | * ಹಿಮ್ಮಾಹಿತಿ<br>* ಗೃಹಪಾಠ<br>* ಅಭ್ಯಾಸದ ಚಟುವಟಿಕೆಗಳು<br>* ನಿಯೋಜಿತ ಚಟುವಟಿಕೆಗಳು<br>* ಘಟಕ ಪರೀಕ್ಷೆ | * ಪ್ರಶ್ನಾವಳಿ<br>* ಪ್ರಶ್ನಾವಳಿ<br>* ಪಠ್ಯಪುಸ್ತಕ<br>* ಮಾಹಿತಿ ಸಂಗ್ರಹ<br>* ಪ್ರಶ್ನಾವಳಿ | * ಮೌಖಿಕ ಪರೀಕ್ಷೆ<br>* ಅವಲೋಕನ<br>* ಅವಲೋಕನ<br>* ಅವಲೋಕನ<br>* ಲಿಖಿತ ಪರೀಕ್ಷೆ |

ಶಿಕ್ಷಕರ ಸಹಿ                                                        ಮುಖ್ಯಶಿಕ್ಷಕರ ಸಹಿ

## ಪಠ್ಯಾಂಶಗಳನ್ನು ಆಧರಿಸಿ ಶೇಕಡವಾರು ಅಂಕ ಹಂಚಿಕೆ.

### 1. ಗದ್ಯ ಭಾಗ

| ಕ್ರ.ಸಂ. | ಗದ್ಯ ಪಾಠದ ಹೆಸರು | ಶೇಕಡವಾರು | ಅಂಕಗಳು |
|---|---|---|---|
| 1 | ಶಬರಿ | 04 | 04 |
| 2 | ಅಮೆರಿಕದಲ್ಲಿ ಗೊರೂರು | 04 | 04 |
| 3 | ಜೀವನದೃಷ್ಟಿ | 03 | 03 |
| 4 | ಧರ್ಮಸಮದೃಷ್ಟಿ | 03 | 03 |
| 5 | ಭಾಗ್ಯಶಿಲ್ಪಿ ಸರ್. ಎಂ. ವಿಶ್ವೇಶ್ವರಯ್ಯ | 03 | 03 |


ಬಿ. ರವೀಶ್ ಕುಮಾರ್, ಕನ್ನಡ ಭಾಷಾ ಶಿಕ್ಷಕರು, ಸ. ಪ್ರೌ. ಶಾಲೆ, ಕೇರ್ಗಳ್ಳಿ, ಮೈಸೂರು ತಾ॥ ಮತ್ತು ಜಿಲ್ಲೆ. ಸಂಚಾರಿ ವಾಣಿ ಸಂಖ್ಯೆ : 94489 58498

| | | | |
|---|---|---|---|
| 6 | ಎದಗೆ ಬಿದ್ದ ಅಕ್ಷರ | 03 | 03 |
| 7 | ವೃಕ್ಷಸಾಕ್ಷಿ | 03 | 03 |
| 8 | ವ್ಯಾಘ್ರಗೀತೆ | 03 | 03 |
| | ಗದ್ಯ ಒಟ್ಟು | 26 | 26 |

## 2. ಪದ್ಯ ಭಾಗ

| ಕ್ರ.ಸಂ | ಪದ್ಯ ಪಾಠದ ಹೆಸರು | ಶೇಕಡವಾರು | ಅಂಕಗಳು |
|---|---|---|---|
| 1 | ಎಮ್ಮ ನುಡಿಗೇಳ್ | 04 | 04 |
| 2 | ಹಕ್ಕಿ ಹಾರುತಿದೆ ನೋಡಿದಿರಾ | 04 | 04 |
| 3 | ಹಲಗಲಿ ಬೇಡರು | 03 | 03 |
| 4 | ವಚನ ಸೌರಭ | 03 | 03 |
| 5 | ಸಂಕಲ್ಪಗೀತೆ | 04 | 04 |
| 6 | ಕೌರವೇಂದ್ರನ ಕೊಂದೆ ನೀನು | 04 | 04 |
| 7 | ವೀರಲವ | 03 | 03 |
| 8 | ಸಾರ್ಥಕತೆ | 03 | 03 |
| | ಪದ್ಯ ಒಟ್ಟು | 28 | 28 |

## 3. ಪಠ್ಯ ಪೋಷಕ ಅಧ್ಯಯನ

| ಕ್ರ.ಸಂ | ಪಠ್ಯಪೋಷಕ ಅಧ್ಯಯನ ಪಾಠದ ಹೆಸರು | ಶೇಕಡವಾರು | ಅಂಕಗಳು | ಪ್ರಶ್ನೆಗಳು |
|---|---|---|---|---|
| 1 | ವಿಜ್ಞಾನ ಮತ್ತು ಸಮಾಜ | 02 | 02 | 01 |
| 2 | ನಾಮಫಲಕ | 02 | 02 | 01 |
| 3 | ಉದಾತ್ತ ಚಿಂತನೆಗಳು | 02 | 02 | 01 |
| 4 | ಪಾರಿವಾಳ | 01 | 01 | 01 |
| 5 | ಜಿನಪದ ಒಗಟುಗಳು | 02 | 02 | 01 |
| | ಪದ್ಯ ಒಟ್ಟು | 09 | 09 | 05 |

## 4. ಅಪಠಿತ ಗದ್ಯ

| ಕ್ರ.ಸಂ | ಅಪಠಿತ ಗದ್ಯ | ಶೇಕಡವಾರು | ಅಂಕಗಳು | ಪ್ರಶ್ನೆಗಳು |
|---|---|---|---|---|
| 1 | ಅಪಠಿತ ಗದ್ಯ | 04 | 04 | 01 |

### 5. ವ್ಯಾಕರಣ, ಛಂದಸ್ಸು, ಅಲಂಕಾರ, ವಾಕ್ಯ ರಚನೆ

| ಕ್ರ.ಸಂ. | ವಿಷಯ | ಶೇಕಡವಾರು | ಅಂಕಗಳು | ಪ್ರಶ್ನೆಗಳು |
|---|---|---|---|---|
| 1 | ಅಲಂಕಾರ | 03 | 03 | 01 |
| 2 | ಛಂದಸ್ಸು | 03 | 03 | 01 |
| 3 | ಗಾದೆ ವಿಸ್ತರಣೆ | 03 | 03 | 01 |
| 4 | ಪತ್ರಲೇಖನ | 05 | 05 | 01 |
| 5 | ಪ್ರಬಂಧ ಲೇಖನ | 05 | 05 | 01 |
| 6 | ವ್ಯಾಕರಣ | 14 | 14 | 14 |
| | ವ್ಯಾಕರಣ, ಛಂದಸ್ಸು, ಅಲಂಕಾರ, ವಾಕ್ಯ ರಚನೆ ಒಟ್ಟು | 33 | 33 | 19 |